ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಪದವಿಯ ನಿಬಂಧ

ವೈದೇಹಿಯವರ ಸಾಹಿತ್ಯ ಮತ್ತು ಸ್ತ್ರೀಸಂಸ್ಕೃತಿ

ಸಂಶೋಧನ ವಿದ್ಯಾರ್ಥಿನಿ
ಕುಸುಮ .ಬಿ.ಎಂ

ಮಾರ್ಗದರ್ಶಕರು
ಡಾ॥ ಆರ್. ಲಕ್ಷ್ಮೀನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
2010

839

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಪದವಿಯ ನಿಬಂಧ

ವೈದೇಹಿಯವರ ಸಾಹಿತ್ಯ ಮತ್ತು ಸ್ತ್ರೀಸಂಸ್ಕೃತಿ

ಸಂಶೋಧನ ವಿದ್ಯಾರ್ಥಿನಿ
ಕುಸುಮ .ಬಿ.ಎಂ

ಮಾರ್ಗದರ್ಶಕರು
ಡಾ॥ ಆರ್. ಲಕ್ಷ್ಮೀನಾರಾಯಣ

ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನ ಕೇಂದ್ರ
ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು
2010

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2009-2010ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ವೈದೇಹಿಯವರ ಸಾಹಿತ್ಯ ಮತ್ತು ಸ್ತ್ರೀ ಸಂಸ್ಕೃತಿ"** ಎಂಬ ನಿಬಂಧವನ್ನು ಕು. ಕುಸುಮ ಬಿ.ಎಂ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಈ ನಿಬಂಧ ವಿದ್ಯಾರ್ಥಿಯ ಸ್ವಂತ ಬರವಣಿಗೆ ಆಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/-

ಡಾ॥ ಲಕ್ಷ್ಮೀನಾರಾಯಣ

ದಿನಾಂಕ: 8-9-2010
ಸ್ಥಳ: ಬೆಂಗಳೂರು

(ಡಾ॥ ಆರ್.ಲಕ್ಷ್ಮೀನಾರಾಯಣ)
ಮಾರ್ಗದರ್ಶಕರು

ಅಭ್ಯರ್ಥಿಯ ಪ್ರಮಾಣ ಪತ್ರ

ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರಿನ ಎಂ.ವಿ.ಸೀ. ಸ್ನಾತಕೋತ್ತರ ಸಂಶೋಧನಾ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ 2009-2010ನೇ ಸಾಲಿನ ಎಂ.ಫಿಲ್ ಪದವಿಗಾಗಿ **"ವೈದೇಹಿಯವರ ಸಾಹಿತ್ಯ ಮತ್ತು ಸ್ತ್ರೀ ಸಂಸ್ಕೃತಿ"** ಎಂಬ ನಿಬಂಧವನ್ನು **ಡಾ॥ ಆರ್.ಲಕ್ಷ್ಮೀನಾರಾಯಣ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಿದ್ದೇನೆ.

ಈ ನಿಬಂಧ ನನ್ನ ಸ್ವಂತ ಬರವಣಿಗೆ ಆಗಿದ್ದು, ಇದರ ಯಾವುದೇ ಭಾಗವನ್ನು ಈವರೆಗೆ ಬೇರೆಲ್ಲೂ ಪ್ರಕಟಿಸಿಲ್ಲ ಮತ್ತು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ಸಹಿ/-

B.M. Kusuma

(ಕುಸುಮ .ಬಿ.ಎಂ.)

ಸಂಶೋಧನ ವಿದ್ಯಾರ್ಥಿನಿ

ದಿನಾಂಕ: 8-9-2010

ಸ್ಥಳ: ಬೆಂಗಳೂರು

ವೈದೇಹಿಯವರ ಸಾಹಿತ್ಯ ಮತ್ತು ಸ್ತ್ರೀ ಸಂಸ್ಕೃತಿ

೧. ಪ್ರಸ್ತಾವನೆ:- ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ.

ಒಂದು ಭೂಪ್ರದೇಶದಲ್ಲಿ ವಾಸಿಸುವ ಜನರ ಒಟ್ಟು ಜೀವನ ವಿಧಾನವು ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಇದು ಮೇಲ್ನೋಟಕ್ಕೆ ಒಂದೇ ಸಂಸ್ಕೃತಿಯಂತೆ ಕಾಣುತ್ತಿದ್ದರೂ, ಕೆಲವು ಸೂಕ್ಷ್ಮ ಮತ್ತು ಸ್ಥೂಲ ವ್ಯತ್ಯಾಸವನ್ನು ಹೊಂದಿರುತ್ತದೆ. ಎಲ್ಲ ಸಂಸ್ಕೃತಿಯಲ್ಲಿಯು, ಅದನ್ನು ನಿರ್ವಚಿಸಿ, ನಿಯಂತ್ರಿಸುವ ಧಾರೆಯೊಂದು ಇರುತ್ತದೆ. ಅದು ಪ್ರಧಾನ ಸಂಸ್ಕೃತಿ ಎನಿಸುತ್ತದೆ. ಅಂತೆಯೇ, ಈ ಪ್ರಧಾನ ಸಂಸ್ಕೃತಿ ನಿರ್ವಚಿಸಿದ್ದನ್ನು ಪಾಲಿಸುವ ಅನೇಕ ಉಪಸಂಸ್ಕೃತಿ ಧಾರೆಗಳು ಇರುತ್ತವೆ. ಈ ಉಪ ಧಾರೆಗಳು ಪ್ರಧಾನ ಸಂಸ್ಕೃತಿಗಿಂತ ಭಿನ್ನವಾಗಿರುತ್ತವೆ. ತನ್ನದೆ ಆದ ರೀತಿಯಲ್ಲಿ ಪ್ರಧಾನ ಸಂಸ್ಕೃತಿಗೆ ಪ್ರತಿಕ್ರಿಯಿಸುತ್ತಾ, ಕಟ್ಟಿಕೊಂಡಿರುವ ಈ ಉಪ ಸಂಸ್ಕೃತಿಗಳು ಹಲವು ವೈಶಿಷ್ಟ್ಯಗಳಿಂದ ಕೂಡಿ ಕುತೂಹಲ ಉಂಟುಮಾಡುತ್ತವೆ. ಉಪ ಸಂಸ್ಕೃತಿಗಳ ಅಧ್ಯಯನ ಇಂದು ವಿಶೇಷವಾಗಿ ಅಧ್ಯಯನಕ್ಕೊಳಗಾಗುತ್ತಿರುವ ವಿಷಯವಾಗಿದೆ. ಈ ಪ್ರಬಂಧ ಉಪ-ಸಂಸ್ಕೃತಿಗಳಲ್ಲಿಯೇ ವಿಶಿಷ್ಟವಾಗಿರುವ ಸ್ತ್ರೀಸಂಸ್ಕೃತಿಯನ್ನು ಅಧ್ಯಯನ ಮಾಡುತ್ತದೆ. ಏಕೆಂದರೆ, ಯಾವುದೇ ಉಪಸಂಸ್ಕೃತಿಯಲ್ಲಿಯೂ, ಸ್ತ್ರೀ ಸಂಸ್ಕೃತಿ ಅಧೀನ ನೆಲೆಯಲ್ಲಿಯೇ ಉಳಿಯುತ್ತದೆ.

ಅನಾದಿಕಾಲದಿಂದಲೂ ಪುರುಷಪ್ರಧಾನ ವ್ಯವಸ್ಥೆಯಲ್ಲಿ ಪುರುಷನ ನೆರಳಿನಂತೆಯೇ ಹೆಣ್ಣು ಬದುಕಿದ್ದಾಳೆ. ಹೆಣ್ಣು ಹೀಗೆ ಬದುಕಬೇಕಾಗಿ ಬಂದರೂ, ತನ್ನದೇ ಆದ ಸಂಸ್ಕೃತಿಯನ್ನು ಕಟ್ಟಿಕೊಂಡಿದ್ದಾಳೆ. ಪುರುಷಪ್ರಧಾನ ವ್ಯವಸ್ಥೆ ಯಾವುದನ್ನು ಕೀಳು ಎಂದು ಪರಿಗಣಿಸಿತೋ ಅವುಗಳೇ ಸ್ತ್ರೀಸಂಸ್ಕೃತಿಯ ವೈಶಿಷ್ಟ್ಯಗಳಾಗಿವೆ. ಅದರಲ್ಲಿ ಗಂಡಿಗೆ ಎಂದೂ ಪ್ರವೇಶವಿಲ್ಲ ಎಂದು ತೋರುತ್ತಾ ತನ್ನ ಅಸ್ಮಿತೆಯನ್ನು ಉಳಿಸಿಕೊಂಡು ಬಂದಿದೆ. ಸ್ತ್ರೀವಾದಿ ಪಂಥಗಳಲ್ಲಿ ಒಂದಾದ ಸಾಂಸ್ಕೃತಿಕ ಸ್ತ್ರೀವಾದಿ ಪಂಥ, ಕುಟುಂಬಗಳನ್ನು ಉಳಿಸಿಡುತ್ತಾ ಬಂದಿರುವವರು ಎಂದಿಗೂ ತಾಯಂದಿರೇ ಎಂದು ನಂಬುತ್ತದೆ. ಹಾಗಾಗಿ ಸ್ತ್ರೀ ಸಂಸ್ಕೃತಿಯು ಜೀವಪರ ಕಾಳಜಿಯುಳ್ಳ ಸಂಸ್ಕೃತಿ ಎಂದು ಹೇಳಬಹುದು. ಮಹಿಳೆಯರು ಇತರರ ಬಗ್ಗೆ ಹೊಂದಿರುವ ರಕ್ಷಕ, ಪೋಷಕ ಭಾವಗಳು, ಕರಕುಶಲಕಲೆಗಾರಿಕೆ ಪುರುಷನ ಸ್ವಧಾರ್ತ್ಮಕತೆ ಎದುರಲ್ಲಿ ಅಪೇಕ್ಷಣಿಯವೇ ಆಗಿರುವ ಗುಣಗಳಾಗಿವೆ. ಇವೇ ಸ್ತ್ರೀ ಸಂಸ್ಕೃತಿಯ ವಿಶಿಷ್ಟತೆಗಳೂ ಕೂಡ.

ಸ್ತ್ರೀ ಸಂಸ್ಕೃತಿಯ ಶೋಧನೆಯಲ್ಲಿ ಸ್ತ್ರೀವಾದವು ವಿಶೇಷ ಅಸಕ್ತಿಯಿಂದ ತೊಡಗಿಕೊಳ್ಳುತ್ತದೆ. ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ವಿಮರ್ಶಕರು ಮೂರು ಹಂತಗಳನ್ನು ಗುರುತಿಸುತ್ತಾರೆ. ಪಿತೃಸಂಸ್ಕೃತಿಯನ್ನು ಅಂತರ್ಗತಗೊಳಿಸಿಕೊಂಡ ಹಂತ, ಪಿತೃಸಂಸ್ಕೃತಿಯನ್ನು ವಿರೋಧಿಸುವ ಹಂತ, ಸ್ವಶೋಧನೆಯ ಹಂತ. ಈ ಮೂರು ಹಂತಗಳು ಕ್ರಮವಾಗಿ ಸ್ತ್ರೀತ್ವ, ಸ್ತ್ರೀವಾದಿತ್ವ ಹಾಗು ಸ್ತ್ರೀಯಾತ್ಮಕತೆಯು ಪ್ರಧಾನವಾದ ಹಂತಗಳೆಂಬ ವಿವರಣೆಯಿದೆ. ಮೊದಲ ಹಂತದ ಮಹಿಳಾ ಸಾಹಿತ್ಯವು ಪಿತೃಸಂಸ್ಕೃತಿಯು

ಕೊಟ್ಟ ಮಹಿಳೆಯ ಪರಿಕಲ್ಪನೆಯನ್ನು ಪ್ರಶ್ನಿಸದೆ ಸ್ವೀಕರಿಸುತ್ತದೆ. ಸ್ತ್ರೀಯರ ಸಲುವಾಗಿ ರೂಪಿಸಲಾದ ಮೌಲ್ಯಗಳನ್ನೆಲ್ಲ ತಮ್ಮದೆಂದು ಒಪ್ಪುತ್ತದೆ. ಸ್ತ್ರೀವಾದಿತ್ವದ ಎಚ್ಚರ ಇಂಥ ಸ್ಥಿತಿಯನ್ನು ಅಲುಗಿಸುತ್ತದೆ, ಬದಲಾಯಿಸುತ್ತದೆ. ಮೊದಲಿನ ಹಂತದಲ್ಲಿ ಒಪ್ಪಲಾದ ಮೌಲ್ಯಗಳ ಅಪಾಯದ ಅರಿವನ್ನು ಪಡೆಯುತ್ತದೆ. ಈ ಹಂತದಲ್ಲಿ ಮಹಿಳಾ ಸಾಹಿತ್ಯದ ಹೆಚ್ಚಿನ ಶಕ್ತಿಯೆಲ್ಲ ಈ ವಿರೋಧಕ್ಕಾಗಿ ವ್ಯಯವಾಗುತ್ತವೆ. ಸಹಜವಾಗಿ ಆಕ್ರೋಶ, ನೋವುಗಳು ಪ್ರಧಾನವಾಗಿರುತ್ತವೆ. ಸ್ತ್ರೀಯಾತ್ಮಕತೆಯ ಹಂತದಲ್ಲಿ ಮಹಿಳೆ ತನ್ನನ್ನು ಶೋಧಿಸಿಕೊಳ್ಳುವ, ತನ್ನನ್ನು ತಾನಾಗಿ ಅಭಿವ್ಯಕ್ತಿಸಿಕೊಳ್ಳುವ ಹಂತವನ್ನು ತಲುಪುತ್ತಾಳೆ. ವೈದೇಹಿಯವರ ಸಾಹಿತ್ಯವನ್ನು ಮೂರನೇ ಹಂತಕ್ಕೆ ಸೇರಿಸಬಹುದಾಗಿದೆ. ಸ್ತ್ರೀ ಸಂಸ್ಕೃತಿಯ ಶೋಧದಲ್ಲಿ ತೊಡಗಿರುವ ಈ ಪ್ರಬಂಧವು ವೈದೇಹಿಯವರ ಸಾಹಿತ್ಯವನ್ನು (ಕತೆ, ಕಾದಂಬರಿ, ಕವನ, ಪ್ರಬಂಧಗಳನ್ನು), ಈ ನೆಲೆಯಿಂದ ಪ್ರವೇಶಿಸುತ್ತದೆ. ಸೂಕ್ಷ್ಮ ಸ್ತ್ರೀ ಸಂವೇದನೆಯುಳ್ಳ ವೈದೇಹಿಯವರು, ಸ್ತ್ರೀವಾದವನ್ನು ಕುರಿತ ತಮ್ಮ ನಿಲುವಿನಲ್ಲಿ ಇತರ ಸ್ತ್ರೀವಾದಿ ಚಿಂತಕರಿಗಿಂತ ಭಿನ್ನರಾಗಿದ್ದಾರೆ.

ಸ್ತ್ರೀವಾದ ಎಂದರೆ ಸ್ತ್ರೀಯಲ್ಲಿನ 'ಅಹಮಸ್ಮಿ' ಎಂಬ ಪ್ರಜ್ಞೆ, ಅಸ್ಮಿತೆ ಅದೊಂದು ಜೀವವಾದ."[೧] ಎಂದು ಹೇಳುವ ವೈದೇಹಿಯವರು ತಮ್ಮನ್ನು ಕುಟುಂಬಿನಿ ಎಂದು ಕರೆದುಕೊಳ್ಳುತ್ತಾರೆ. "ಪುರುಷರು ನಿಮಗಿಂತ ನಾವು ಉತ್ತಮರು ನೀವು ಎರಡನೆಯವರು ಅಥವಾ ನೀವು ನಮ್ಮ ಅಧೀನ ಜೀವಿಗಳು ಎಂದು ವರ್ತಿಸಿದಾಗ ಏಳುವ ಸಮಾನತೆಯ ವಾದ. 'ಸಮಾನತೆ' ಎಂಬುದನ್ನು ಬಹಳ ಜಾಗರೂಕತೆಯಿಂದ ಪ್ರಯೋಗಿಸುತಿದ್ದೇನೆ. ಯಾಕೆಂದರೆ ಸಮಾನತೆ ಸಾಮಾಜಿಕವಾಗಿ ರಾಜಕೀಯವಾಗಿ ಅಥವಾ ಅವಕಾಶಗಳ ಕುರಿತಾಗಿ ಹೊರತು, ಜೈವಿಕವಾಗಿ ಅಲ್ಲ. ಜೈವಿಕವಾಗಿ ಹೇಳಬೇಕೆಂದರೆ ನಾವು ಅವರಿಗೆ ಸಮಾನರಲ್ಲ. ಅದಕ್ಕಿಂತ ಹೆಚ್ಚಿಗೆ ಅವರು ನಮಗೆ ಎಂದಿಗೂ ಸಮಾನರಾಗಲಾರರು. ಹೆಣ್ಣು ಸತ್ವ ಯಾವತ್ತೂ ವಿಶಿಷ್ಟವೇ. ಅದರ ಚೈತನ್ಯಶೀಲತೆ, ಅಂತಃಶಕ್ತಿ, ಧಾರಣಾಗುಣ ಗಂಡು ಸತ್ವಕ್ಕೆ ಜನ್ಮಜನ್ಮಾಂತರಕ್ಕೂ ಬಾರದು. ಬ್ರಹ್ಮಾಂಡದೊಳಗಿನ 'ಲಲಿತಾಶಕ್ತಿ" ಅದು."[೨] ಎಂದು ಸ್ತ್ರೀಸತ್ವದ ಪಾರಮ್ಯವನ್ನು ನಂಬಿರುವ, ಇವರ ಸ್ತ್ರೀಪರವಾದ ಸಾಮಾಜಿಕ ಕಾಳಜಿಗಳು ಮುಖ್ಯವಾಗಿವೆ. ಈ ಕಾಳಜಿಗಳು ಪುರುಷವಿರೋಧಿ ಎಂಬ ಸರಳ ತೀರ್ಮಾನಗಳನ್ನು ಮೀರುತ್ತವೆ. ಗಂಡು-ಹೆಣ್ಣು ಎಂಬ ಭೇದ ಮೀರಲು ಸ್ತ್ರೀ-ಪುರುಷರಿಬ್ಬರು ಪ್ರಬುದ್ಧರಾಗಬೇಕು ಎಂಬ ಧ್ವನಿಯನ್ನು ಇವರ ಬರವಣಿಗೆ ಹೊರಡಿಸುತ್ತವೆ. ಹಾಗಾಗಿ ಈ ಸಂಪ್ರಬಂಧವು ಇವರ ಸಾಹಿತ್ಯದ ಮೂಲಕ ಸ್ತ್ರೀಸಂಸ್ಕೃತಿಯನ್ನು ವಿಶ್ಲೇಷಿಸುತ್ತದೆ.

".......ನಮ್ಮ ಮನೆಯ ಒಳ ಅಂಗಳ ಎಂದರೆ ಅಮ್ಮನ ಸಾಮ್ರಾಜ್ಯ ಕಥಾನಕಗಳ ಆಗರವದು. ಎಷ್ಟು ಜನ ಬರುತ್ತಿದ್ದರು. ಸುಖ, ದುಃಖ, ಕಥನ, ಹಾಡು, ಹಸೆ, ಅದೊಂದು ಮನುಷ್ಯಲೋಕದ ದೊಡ್ಡ ದರ್ಶನ ಎಂತಲೇ ಬರೆಯುವ ಹೋರಟ ನನಗೆ ಸಣ್ಣಕಥೆಯೇ ಒಂದು ಸಾಧನವಾಗಿ ಸಿಕ್ಕಿತೇನೊ

(ವಿಜಯ ಕರ್ನಾಟಕ, ೧೦.೩.೨೦೦೩).[3] ಎಂದು ಸಂದರ್ಶನವೊಂದರಲ್ಲಿ ಹೇಳಿಕೊಳ್ಳುವ ವೈದೇಹಿಯವರ ಸಾಹಿತ್ಯದ ಕೇಂದ್ರ ವಸ್ತು ಹೆಣ್ಣು. ವೈದೇಹಿಯವರ ಮನೆಯ ಒಳ ಅಂಗಳದ ಅಮ್ಮನ ಸಾಮ್ರಾಜ್ಯ ಅವರ ಸಾಹಿತ್ಯ ರಚನೆಯ ಸಾಮಾಗ್ರಿಯನ್ನಷ್ಟೇ ನೀಡಿಲ್ಲ. ಇತರ ಸ್ತ್ರೀಚಿಂತಕಿಯರಿಗಿಂತ ಭಿನ್ನವಾದ ಸ್ತ್ರೀಪ್ರಜ್ಞೆಯನ್ನು ರೂಪಿಸಿದೆ. ಅವರ ಸ್ತ್ರೀವಾದಿ ನಿಲುವಿನಲ್ಲಿ ಇವುಗಳ ಪಾತ್ರ ದೊಡ್ಡದಾಗಿದೆ. ಆದರೆ ಸ್ತ್ರೀಯರ ಮುಖವಾಣಿಯಾಗಿ ಮಾತನಾಡದೆ ಸ್ತ್ರೀಯರ ಅನುಭಲೋಕವನ್ನು ಸಮಾಜದ ಗಮನಕ್ಕೆ ತರುವ ಆಶಯವನ್ನು ತಮ್ಮ ಬರವಣಿಗೆಯಲ್ಲಿ ಕಾಣಿಸುತ್ತಾರೆ. ಹಾಗಾಗಿ ಇವರ ಸಾಹಿತ್ಯದಲ್ಲಿ ಕಟ್ಟಲ್ಪಟ್ಟಿರುವ ಸ್ತ್ರೀ ಸಂಸ್ಕೃತಿಯ ಅನಾವರಣವನ್ನು ಮಾಡುವುದು ಪ್ರಸ್ತುತ ಸಂಪ್ರಬಂಧದ ಉದ್ದೇಶ.

ವೈದೇಹಿಯವರ ಬರಹಗಳ ಕೇಂದ್ರ ಹೆಣ್ಣು. ಈ ಹೆಣ್ಣು ವಿವಿಧ ಜಾತಿ, ವಯಸ್ಸು, ಅಂತಸ್ತು, ಸಂವೇದನೆಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ತೀರಾ ಸಂಪ್ರದಾಯಸ್ಥರಿಂದ ತೀರಾ ಆಧುನಿಕರವರೆಗೆ, ಅವಿವಾಹಿತರಿಂದ ವಿಧವೆಯರವರೆಗೆ, ಗೃಹಿಣಿಯರಿಂದ ವೇಶ್ಯೆಯರವರೆಗೆ ಈ ಪ್ರಪಂಚ ಹರಡಿಕೊಳ್ಳುತ್ತದೆ. ಇಲ್ಲಿ ವಿದ್ಯಾವಂತರು, ಅವಿದ್ಯಾವಂತರು, ಕಳ್ಳರು, ಹುಚ್ಚರು ಇದ್ದಾರೆ; ಶೋಷಿಸುವವರು, ಶೋಷಣೆಗೆ ಒಳಗಾದವರು ಇದ್ದಾರೆ. ಅಂದರೆ ವೈದೇಹಿ ಕತೆಗಳಲ್ಲಿ ಹೆಣ್ಣು ಒಂದು ಸಿದ್ಧ ಮಾದರಿಯಲ್ಲಿ ಕಾಣಿಸಿಕೊಳ್ಳದೆ ವಿವಿಧ ಆಕೃತಿಗಳಲ್ಲಿ ಭಾವಸ್ಥಿತಿಗಳಲ್ಲಿ ಕಾಣಿಸಿಕೊಳುತ್ತಾಳೆ."[೪] ಎಲ್ಲ ಸ್ಥರದ ಹೆಣ್ಣಿನ ಜೀವನ, ಬದುಕು, ಭಾವನೆಗಳಿಗೆ ಇವರ ಸಾಹಿತ್ಯ ದನಿ ಕೊಡುತ್ತದೆ. ಯಾವ ಸಿದ್ಧಾಂತ, ಪಂಥಗಳ ಹಂಗಿಲ್ಲದೆ ಬದುಕುತ್ತಿರುವ ಇವರು ತಮಗಾಗಿ ಕಟ್ಟಿಕೊಂಡ ಸಂಸ್ಕೃತಿಯ ಸ್ವರೂಪವನ್ನು ಅಧ್ಯಯನ ಮಾಡಲಾಗುವುದು.

ವಿಶ್ವದ ಎಲ್ಲ ಸಮಾಜಗಳು ಪುರುಷಪ್ರಧಾನವೇ ಆಗಿವೆ. ಮತ್ತು ಅಲ್ಲಿಯ ಕುಟುಂಬ ವ್ಯವಸ್ಥೆ ಪಿತೃಸಂಸ್ಕೃತಿಯಾಗಿದೆ. ಪುರುಷಪ್ರಧಾನ ಪಿತೃಸಂಸ್ಕೃತಿಯು ಪ್ರಧಾನ ಸಂಸ್ಕೃತಿಯಾದರೆ, ಸ್ತ್ರೀಸಂಸ್ಕೃತಿಯು ಉಪಸಂಸ್ಕೃತಿಯಾಗಿ ಅದರ ಜೊತೆಗೆ ಹರಿಯುತ್ತಿರುತ್ತದೆ. ಈ ಉಪಸಂಸ್ಕೃತಿಯು ಮೇಲ್ನೋಟಕ್ಕೆ ಪುರುಷ ನಿರ್ವಚಿಸಿದಂತೆ ಕಂಡರೂ ಒಳಹೊಕ್ಕು ನೋಡಿದರೆ, ಅವಳ ಸಂಸ್ಕೃತಿಯು ಅವಳಿಂದಲೇ ನಿರ್ಮಿತವಾಗಿರುವುದು ಕಂಡುಬರುತ್ತದೆ.

ದೈಹಿಕ ಬಲದ ಮೂಲಕ ಅವಳ ಸಂಸ್ಕೃತಿಯನ್ನು ಹತ್ತಿಕ್ಕಲು ಎಷ್ಟು ಪ್ರಯತ್ನಿಸಿದರು, ಅದು ಜೀವಂತವಾಗಿ ಇಂದಿಗೂ ಉಳಿದು ಬಂದಿದೆ. ಇಂತಹ ನೈಜ ಉದಾಹರಣೆಗಳು ವೈದೇಹಿಯವರ ಸಾಹಿತ್ಯದ ಹಿನ್ನೆಲೆಯಾಗಿರುವುದನ್ನು ಕಾಣಬಹುದು.

ಹೀಗೆ ಯಾವುದೇ ಪಂಥದ ಹಂಗಿಲ್ಲದೆ ತಮ್ಮ ಅನನ್ಯತೆಯನ್ನು ಉಳಿಸಿಕೊಂಡು ಬದುಕಿದ, ಬದುಕುತ್ತಿರುವ, ಇಂತಹ ಹೆಣ್ಣುಗಳ ಲೋಕದ ಜೀವಂತಿಕೆಯ ಸೆಲೆ ಇವರ ಸಾಹಿತ್ಯದಲ್ಲಿ

ಮೂರ್ತಗೊಳ್ಳುತ್ತದೆ. ಇಂತಹ ಹೆಣ್ಣುಗಳನ್ನು ಕೇಂದ್ರವಾಗುಳ್ಳ ಅವರ ಸಾಹಿತ್ಯ, ಸ್ತ್ರೀವಾದ ಹುಟ್ಟುವುದಕ್ಕೂ ಮೊದಲು ಸ್ತ್ರೀ ಎಂದರೆ ಯಾರು? ಮತ್ತು ಸ್ತ್ರೀಸಂಸ್ಕೃತಿ ಎಂದರೆ ಯಾವುದು? ಎಂಬುದನ್ನು ದರ್ಶಿಸುತ್ತದೆ. ಯಾವುದೇ ಪಂಥದ ಪ್ರಭಾವವಿಲ್ಲದ, ಅವರ ಸ್ತ್ರೀವಾದಿ ಚಿಂತನೆಗಳು ಸಹ ಇವರಿಂದಲೇ ಪ್ರೇರಿತವಾಗಿರುವುದು ವಿಶೇಷವಾಗಿದೆ. ಹಾಗಾಗಿ ಇವರ ಸಾಹಿತ್ಯ ಸ್ತ್ರೀಸಂಸ್ಕೃತಿಯನ್ನು ತಿಳಿಯಲು ಮಾತ್ರವಲ್ಲದೆ, ಕನ್ನಡದಲ್ಲಿ ಸ್ತ್ರೀವಾದದ ಭಿನ್ನ ದನಿಗಳನ್ನು ದಾಖಲಿಸುತ್ತದೆ.

ವೈದೇಹಿಯವರ ಸಾಹಿತ್ಯವನ್ನು ಕುರಿತು ಅನೇಕ ವಿಮರ್ಶೆಗಳು ಮತ್ತು ವಿಶ್ವವಿದ್ಯಾಲಯ ಪ್ರಬಂಧಗಳು ಬಂದಿವೆ. ಎನ್. ಮನು ಚಕ್ರವರ್ತಿಯವರ 'ಸಾಹಿತ್ಯದಲ್ಲಿ ಸ್ತ್ರೀವಾದದ ಆಯಾಮಗಳು: ಭಾರತದ ಮೂರು ಮುಖ್ಯ ಕತೆಗಳ ಪ್ರಾಯೋಗಿಕ ವಿಮರ್ಶೆ' ಎಂಬ ಮೌಲಿಕವಾದ ಲೇಖನವು, ವೈದೇಹಿಯವರ 'ಅಕ್ಕು' ಕತೆಯಲ್ಲಿ ನಾಗರಿಕತೆಯ ಕೌರ್ಯದ ಸಂಕೇತವಾಗಿ ಅಕ್ಕುವಿನ ಹುಚ್ಚನ್ನು ಕಾಣುತ್ತದೆ. ವೈದೇಹಿಯವರ ಸಾಹಿತ್ಯ ಕುರಿತ, ಎಂ.ಎಸ್.ಆಶಾದೇವಿಯವರ ೨ ಲೇಖನಗಳು ಉತ್ತಮವಾಗಿವೆ. 'ಆರ್ದ್ರಗರ್ವದ ಲೇಖಕಿ ವೈದೇಹಿ' ಎಂಬ ಲೇಖನವು ಅವರ ಕೆಲವು ಕತೆಗಳನ್ನು ಆಧರಿಸಿ ಸ್ತ್ರೀಸಂಸ್ಕೃತಿ ಅಸ್ಮಿತೆಯನ್ನು ಕುರಿತು ಚಿಂತಿಸುತ್ತದೆ. 'ವೈದೇಹಿಯವರ ನೋಡಬಾರದು ಚೀಲದೊಳಗನು ಕವಿತೆ ಕುರಿತು.....' ಲೇಖನ ಉತ್ತಮವಾಗಿದೆ. ಎಲ್.ಸಿ ಸುಮಿತ್ರಾರರು 'ಅಡಿಗೆ ಮನೆ ಹುಡುಗಿಯನ್ನು ಕುರಿತ ಎರಡು ಕವಿತೆಗಳು' ಎಂಬ ಲೇಖನ ಕುವೆಂಪುರವರ 'ಮನೆ ಮನೆಯ ತಪಸ್ವಿನಿ' ಕವನದೊಂದಿಗೆ ವೈದೇಹಿಯವರ 'ಅಡುಗೆಮನೆ ಹುಡುಗಿ' ಕವನವನ್ನು ಹೋಲಿಸಿ ತೌಲನಿಕ ಚರ್ಚೆ ಕೈಗೊಳ್ಳುತ್ತದೆ. 'ಸ್ತ್ರೀವಿಶಿಷ್ಟ ಕಾಳಜಿಯ ವೈದೇಹಿಯವರ ಕತೆಗಳು' ಕೆಲವು ಕತೆಗಳನ್ನು ವಿಮರ್ಶಿಸುತ್ತದೆ. ವೈದೇಹಿಯವರ ಕಾದಂಬರಿ ಅಸ್ಪೃಶ್ಯರು ಕುರಿತು ಒಂದು ಲೇಖನವಿದೆ. ಟಿ.ಪಿ ಅಶೋಕರವರ ವೈದೇಹಿವಾಚಿಕೆಯಲ್ಲಿನ ಮುನ್ನುಡಿ ಅವರ ಸಾಹಿತ್ಯದ ಹಲವು ವಿಶಿಷ್ಟತೆಗಳ ಮೇಲೆ ಬೆಳಕು ಚೆಲ್ಲುತ್ತದೆ.

ಇವುಗಳಲ್ಲದೆ ವೈದೇಹಿಯವರ ಸಾಹಿತ್ಯ ಹಲವು ವಿಶ್ವವಿದ್ಯಾಲಕ್ಕೆ ಸಲ್ಲಿಕೆಯಾದ ಪಿ.ಹೆಚ್.ಡಿ ಮತ್ತು ಎಂ.ಫಿಲ್,ಪ್ರಬಂಧಗಳಲ್ಲಿಯೂ ಚರ್ಚಿತವಾಗಿದೆ. ಡಾ.ಎಲ್.ಜಿ.ಮೀರಾರವರು ಬೆಂಗಳೂರು ವಿ.ವಿ.ಗೆ ಸಲ್ಲಿಸಿರುವ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ- ಒಂದು ಸ್ತ್ರೀವಾದಿ ಅಧ್ಯಯನ'ದಲ್ಲಿ ವೈದೇಹಿಯವರ ಕತೆಗಳನ್ನು ಸ್ತ್ರೀವಾದಿ ನೆಲೆಯ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅದರ ಪ್ರಧಾನ ಆಸಕ್ತಿ ಇರುವುದು ಕುವೆಂಪು, ಕಾರಂತ, ಅನಂತಮೂರ್ತಿ,ವೈದೇಹಿ, ಸಾರಾಅಬೂಬುಕರ್ ಮುಂತಾದವರ ಸಾಹಿತ್ಯ ಕೃತಿಯ ಹಿಂದಿರುವ ಬದುಕಿನ ಗ್ರಹಿಕೆ ಸ್ತ್ರೀ ಸಂವೇದನೆಯದ್ದೋ ಅಥವಾ ಪುರುಷ ಸಂವೇದನೆಯದ್ದೋ ಎಂಬುದನ್ನು ಪರಿಶೀಲಿಸುವುದಾಗಿದೆ. ಹಾಗಾಗಿ ಅದು ಒಂದು ಭಾಗವಾಗಿ ವೈದೇಹಿಯವರ ಕತೆಗಳನ್ನು ನೋಡುತ್ತದೆ.

ವೈದೇಹಿಯವರ ಕತೆಗಳನ್ನು ಕುರಿತ ಒಂದು ಎಂ.ಫಿಲ್.ಪ್ರಬಂಧ ಹಂಪಿ ವಿ.ವಿ.ಗೆ ಮಂಡಿತವಾಗಿದೆ. ಮಂಜುಳಾರವರ "ವೈದೇಹಿಯವರ ಕತೆಗಳು: ಸಾಂಸ್ಕೃತಿಕ ಅಧ್ಯಯನ." ಅದು ಕೆಲವು ಆಯ್ದ ಕತೆಗಳನ್ನು ವಿಶ್ಲೇಷಣೆಗೆ ಒಳಪಡಿಸುತ್ತದೆ. ವೈದೇಹಿಯವರ ಸಮಗ್ರ ಸಾಹಿತ್ಯ ಆಧರಿಸಿದ ಯಾವುದೇ ಸಂಪ್ರಬಂಧ ಇಲ್ಲ. ಹಾಗಾಗಿ ಇಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಒಂದೆಡೆ ತಂದು ಅಧ್ಯಯನ ನಡೆಸುವ ಪ್ರಯತ್ನ ಮಾಡಲಾಗಿದೆ.

ವೈದೇಹಿಯವರು ಹಲವು ಪ್ರಕಾರಗಳಲ್ಲಿ ತಮ್ಮ ಕೊಡುಗೆಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಕಥೆ, ಕವನ, ಪ್ರಬಂಧ, ಮಕ್ಕಳನಾಟಕ, ನೆನಪುಗಳ ಸಂಗ್ರಹ, ಅನುವಾದ ಹೀಗೆ ವೈವಿಧ್ಯಮಯವಾದ ಕ್ಷೇತ್ರಗಳಲ್ಲಿ ವೈದೇಹಿಯವರು ಗುರುತಿಸಿಕೊಂಡಿದ್ದಾರೆ. ಪ್ರಸ್ತುತ ಸಂಪ್ರಬಂಧ ಅವರ ಕತೆ, ಕಾದಂಬರಿ, ಕವನ, ಪ್ರಬಂಧಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸುತ್ತದೆ.

ಈ ಪ್ರಬಂಧವು ವೈದೇಹಿಯವರ ಸಾಹಿತ್ಯದಲ್ಲಿ ಸ್ತ್ರೀಸಂಸ್ಕೃತಿಯನ್ನು ಶೋಧಿಸುತ್ತದೆ. ಸ್ತ್ರೀಗೇ ವಿಶೇಷವಾದ ಸಂಸ್ಕೃತಿ ಇದೆ. ಈ ಸಂಸ್ಕೃತಿ ಹೊರಒತ್ತಡಕ್ಕಿಂತ ಒಳತುಡಿತದಿಂದ ಕಟ್ಟಲ್ಪಟ್ಟಿರುವುದಾಗಿದೆ. ಈ ಸಂಸ್ಕೃತಿ ಜೀವ ವಿರೋಧಿ ವಿಷಯಗಳನ್ನು ವಿರೋಧಿಸುವ, ಜೀವಪರ ಸಂಸ್ಕೃತಿಯಾಗಿದೆ.

ಅಧ್ಯಯನದ ವಿಧಾನ ಕುರಿತು;

ಈ ಪ್ರಬಂಧವು ಸ್ತ್ರೀಸಂಸ್ಕೃತಿಯ ಶೋಧಕ್ಕಾಗಿ ಕೆಳಗಿನ ವಿಧಾನಗಳನ್ನು ಬಳಸುತ್ತದೆ.

೧. ಪಠ್ಯಗಳ ವಿವರಣೆ ಮತ್ತು ವಿಶ್ಲೇಷಣೆಯ ಮೂಲಕ ಸಾಂದ್ರ ಸ್ತ್ರೀ ಅನುಭವಗಳನ್ನು ಗ್ರಹಿಸಿವುದು. ಏಕೆಂದರೆ ಈ ಅನುಭವಗಳೇ ಅವಳ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿವೆ.

೨. ವ್ಯವಸ್ಥೆಯೊಂದಿಗಿನ ಹೋರಾಟದಲ್ಲಿ ಅವಳ ಪ್ರತಿಭೆಯನ್ನು ಗುರುತಿಸುವುದು. ಅವಳ ಪ್ರತಿಭೆಯೇ ಸ್ತ್ರೀಸಂಸ್ಕೃತಿಯ ಜೀವದ್ರವವಾಗಿದೆ.

ಪ್ರಸ್ತಾವನೆಯನ್ನುಳಿದು ಈ ಪ್ರಬಂಧದಲ್ಲಿ ೬ ಅಧ್ಯಾಯಗಳಿವೆ. ಕೊನೆಯ ಅಧ್ಯಾಯ ಸಮಾರೋಪ. ಉಳಿದ ಅಧ್ಯಾಯಗಳಲ್ಲಿ, ಎರಡನೇ ಅಧ್ಯಾಯ ಪಿತೃಪ್ರಧಾನ ವ್ಯವಸ್ಥೆಯ ಜೊತೆಗಿನ ಸ್ತ್ರೀ ಸಹಚರ್ಯವನ್ನು ಚರ್ಚಿಸುತ್ತದೆ. ಉಳಿದ ನಾಲ್ಕು ಅಧ್ಯಾಯಗಳು ಅವರ ಕತೆ, ಕಾದಂಬರಿ, ಕವಿತೆ, ಪ್ರಬಂಧಗಳಲ್ಲಿ ಸ್ತ್ರೀ ಅನುಭವದ ಮೂಲಕ ವ್ಯಕ್ತವಾಗುತ್ತಿರುವ ಸ್ತ್ರೀಸಂಸ್ಕೃತಿಯನ್ನು ವಿಶ್ಲೇಷಿಸುತ್ತದೆ.

ಪ್ರಬಂಧದಲ್ಲಿ ಬೇರೆ ವಿಮರ್ಶಕರ, ಚಿಂತಕರ ವಿಚಾರಗಳನ್ನು ಉಲ್ಲೇಕಿಸಿದಾಗ ಸಂಬಂಧಿತ ವಿವರಗಳನ್ನು ಆಯಾ ಅಧ್ಯಾಯದ ಕೊನೆಯಲ್ಲಿ ಅಡಿಟಿಪ್ಪಣಿಗಳಲ್ಲಿ ನೀಡಲಾಗಿದೆ. ಅಡಿಟಿಪ್ಪಣಿ ಕೊಡುವ ವಿಧಾನ ಪ್ರಬಂಧ/ಪುಸ್ತಕದ ಹೆಸರು, ಲೇಖಕ/ಲೇಕಕಿಯ ಹೆಸರು, ಪುಟ ಸಂಖ್ಯೆ.

ಅಡಿಟಿಪ್ಪಣಿಗಳು:

೧. ವೈದೇಹಿ ವಾಚಿಕೆ, ಟಿ.ಪಿ ಅಶೋಕ, ಪು-೧೨೪.
೨. ಅದೇ
೩. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, (ಸಂ) ಎಚ್.ಎಸ್.ಶ್ರೀಮತಿ, ಪು-೩೯೨.
೪. ವೈದೇಹಿ ವಾಚಿಕೆ, ಟಿ.ಪಿ. ಅಶೋಕ, ಪು-೧೨೪.

೨. ಪುರುಷಪ್ರಧಾನ ವ್ಯವಸ್ಥೆ ಮತ್ತು ಸ್ತ್ರೀ.

ಸ್ತ್ರೀವಾದಿ ನೆಲೆ:

ಸ್ತ್ರೀ ಸಂಸ್ಕೃತಿ ಎಂದರೇನು? ಅದರ ಸ್ವರೂಪ ಚಹರೆಗಳೇನು? ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಸಮಾಜದ ರಚನೆಗಳು ಮತ್ತು ಅದರ ವ್ಯವಸ್ಥೆಯನ್ನು ಪರಿಚಯಿಸಿಕೊಳ್ಳಬೇಕಾಗುತ್ತದೆ. ವಿಶ್ವದ ಎಲ್ಲ ಸಮಾಜಗಳು ಪುರುಷಪ್ರಧಾನವೇ ಆಗಿವೆ. ಮತ್ತು ಅಲ್ಲಿಯ ಕುಟುಂಬ ವ್ಯವಸ್ಥೆ ಪಿತೃಸಂಸೃತಿಯಾಗಿದೆ. ಆದ್ದರಿಂದ ಪುರುಷಪ್ರಧಾನ ವ್ಯವಸ್ಥೆ ಸ್ತ್ರೀಯನ್ನು ನಿರ್ವಚಿಸಿ, ನಿಯಂತ್ರಿಸಿದ ಬಗೆಗಳು ಮತ್ತು ಹೆಣ್ಣಿನ ಸ್ಥಿತಿಯನ್ನು ವಿಶ್ಲೇಷಣೆ ಮಾಡಲಾಗುವುದು. ಪುರುಷಪ್ರಧಾನ ಪಿತೃಸಂಸೃತಿಯನ್ನು ಅರಿತರೆ ಉಪಸಂಸ್ಕೃತಿಯಾಗಿ ಅದರ ಜೊತೆಗೆ ಹರಿಯುತ್ತಿರುವ ಸ್ತ್ರೀಸಂಸ್ಕೃತಿಯ ದರ್ಶನವಾಗುತ್ತದೆ. ಆದ್ದರಿಂದ ಈ ಅಧ್ಯಾಯದಲ್ಲಿ ಪುರುಷಪ್ರಧಾನ ವ್ಯವಸ್ಥೆಯ ಅವಲೋಕನವನ್ನು ಮಾಡುವುದು ಸೂಕ್ತವೆಂದು ಭಾವಿಸಲಾಗಿದೆ.

"ಪಿತೃಪ್ರಧಾನ್ಯ ಎಂಬುದು ಮಹಿಳೆಯರ ಹಿತಾಸಕ್ತಿಗಳನ್ನು ಪುರುಷರ ಹಿತಾಸಕ್ತಿಗಳಿಗೆ ಅಧೀನವಾಗಿಸುವ ಅಧಿಕಾರ ಸಂಬಂಧಗಳಿಗಿರುವ ವ್ಯವಸ್ಥೆಯನ್ನು ಸೂಚಿಸುತ್ತದೆ"[೧]

ಜೈವಿಕ ವ್ಯತ್ಯಾಸ ಮೂಲವನ್ನೇ ಹಿರಿದಾಗಿಸಿದ ಈ ವ್ಯವಸ್ಥೆ ಹೆಣ್ಣುಗುಣ ಗಂಡುಗುಣವೆಂದು ಗುಣಗಳನ್ನು ಬೇರ್ಪಡಿಸಿ, ಹೆಣ್ಣು-ಗಂಡುಗಳಲ್ಲಿ ಸಾಮಾಜಿಕ ವ್ಯತ್ಯಾಸ ಕಲ್ಪಿಸಿತು. ಆಕ್ರಮಣಶೀಲತೆ, ಸಾಹಸ, ಬಿರಿಸು, ಮೊದಲಾದವನ್ನು ಗಂಡುಗುಣಗಳೆಂದೂ, ಕೋಮಲತೆ, ಮಾರ್ದವತೆ, ಭಯ, ಮೊದಲಾದವನ್ನು ಹೆಣ್ಣುಗುಣಗಳೆಂದು ಕರೆಯಲಾಯಿತು. ಈ ಗುಣ-ಸ್ವಭಾವ ಬೇರ್ಪಡಿಕೆ ವ್ಯಕ್ತಿಯ ಅರ್ಧಸತ್ವವನ್ನೇ ಹತ್ತಿಕ್ಕಿತು. ಇಲ್ಲಿ ಗಂಡುಗುಣಗಳಿಗೆ ಆದ್ಯತೆ ದೊರೆಯಿತು. ಈ ವ್ಯವಸ್ಥೆಯ ಕಟು ನಿಯಮಗಳೆಲ್ಲಾ ಹೆಣ್ಣಿನ ಮೇಲೆ ಕ್ರೂರವಾಗಿ ಹೇರಲ್ಪಟ್ಟವು. ಆದರೂ ಇಲ್ಲಿ ಗಂಡು ಹೆಣ್ಣುಗಳಿಗೆ ಆಯ್ಕೆಯೆ ಇರಲಿಲ್ಲ. ಅವರ ಜೈವಿಕ ಲಿಂಗವೇ ಅವರ ವ್ಯಕ್ತಿತ್ವಕ್ಕೂ ಆರೋಪಿತವಾಗುತ್ತದೆ. ಇದಕ್ಕೆ ವಿರುದ್ಧವಾಗಿ ನಡೆದ ಹೆಣ್ಣನ್ನು ಹೆಣ್ಣಲ್ಲವೆಂದು, ಗಂಡನ್ನು ಗಂಡಲ್ಲವೆಂದು ಕರೆದು, ಅವರನ್ನು ಆತಂಕಕ್ಕೆ ಗುರಿಮಾಡಲಾಯಿತು. ಇದರಿಂದ ಗಂಡು-ಹೆಣ್ಣುಗಳು ತಮ್ಮ ಜೈವಿಕ ಅಸ್ತಿತ್ವದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಒತ್ತಾಯಿಸಿ ಅವರನ್ನು ಹಿಡಿತದಲ್ಲಿಟ್ಟುಕೊಂಡಿತು. ಹೆಣ್ಣಿಗೆ ಹೊರಗಿನ ಪ್ರಪಂಚವನ್ನು ನಿಷೇಧಿಸಿ ಮನೆಯೊಳಗೆ ಇರಿಸಲಾಯಿತು, ಹೆಣ್ಣಿಗೆ ಕೆಲವು ಸಿದ್ಧ ಪಾತ್ರಗಳನ್ನು ಕಲ್ಪಿಸಲಾಯಿತು. "ತಾಯಿ- ಹೆಂಡತಿ- ಮಗಳು" ಎಂಬ ಆದರ್ಶ ಪಾತ್ರಗಳ ನಿರ್ವಹಣೆಯು ಆಕೆಯ ಜೀವನದ ಪರಮಗುರಿಯನ್ನಾಗಿ ಮಾಡಲಾಯಿತು.

ಹೆಣ್ಣಿನ ಮೇಲಿನ ಶೋಷಣೆಗೆ ಪುರುಷ ಪ್ರಧಾನ ವ್ಯವಸ್ಥೆಯು ಅವಳ ಲೈಂಗಿಕತೆಯನ್ನು ಪ್ರಮುಖ ಅಸ್ತ್ರವಾಗಿ ಬಳಸಿಕೊಂಡಿತು. ಕೆಲವು ಸ್ಥಿರ ಮಾದರಿಗಳನ್ನು ಕಲ್ಪಿಸುವುದರ ಮೂಲಕ ಹೆಣ್ಣಿನ ಬದುಕು= ಅವಳ ಶೀಲ ಎಂಬ ಸಮೀಕರಣ ಮಾಡಲಾಯಿತು. ಹಾಗಾಗಿ ಹೆಣ್ಣು ತನ್ನ ಶೀಲರಕ್ಷಣೆಯೇ ತನ್ನ ಬದುಕಿಗಿಂತ ಹಿರಿದಾಗಿ ಭಾವಿಸುವಂತಾಯಿತು. ಶೀಲ, ಪಾತಿವ್ರತ್ಯದಂತಹ ಸಾಮಾಜಿಕ ಮೌಲ್ಯಗಳು ಗಂಡು- ಹೆಣ್ಣಿನ ಸಂಬಂಧಗಳನ್ನು ಗಟ್ಟಿಗೊಳಿಸುವಲ್ಲಿ ಪೂರಕವಾಗಿವೆ. ಕುಟುಂಬ ಹಾಗೂ ಸಮಾಜದ ಆರೋಗ್ಯದ ದೃಷ್ಟಿಯಿಂದ ನೈತಿಕ ಸಂಬಂಧಗಳನ್ನು ಹೆಚ್ಚಿಸಿಕೊಳ್ಳುವ ವಿಚಾರ ಮೌಲಿಕವಾದದ್ದು. ಆದರೆ ಅದು ಹೆಣ್ಣಿಗೆ ಮಾತ್ರ ಮುಖ್ಯವಾದದ್ದು, ಹೆಣ್ಣಿನ ದುರಂತದ ಜೊತೆಗೆ ಈ ವ್ಯವಸ್ಥೆಯ ವಿಫಲತೆಯು ಆಗಿದೆ.

ಸೀತ- ಸಾವಿತ್ರಿಯಂತಹ ಕೆಲ ಸ್ಥಿರ ಮಾದರಿಗಳ ಮೂಲಕ ಲೈಂಗಿಕ ಪಾವಿತ್ರ್ಯದ ಪ್ರಶ್ನೆಯನ್ನು ಯಾವ ತಂತ್ರದಲ್ಲಿ ಮುಟ್ಟಿಸಿದೆ ಎಂದರೆ, ಪ್ರತಿಯೊಂದು ಹೆಣ್ಣು ದಿನ ಬೆಳಗಾದರೆ ಅವರನ್ನು ನೆನೆದು, ಅವರಂತಾಗಲೂ ಪ್ರಯತ್ನಿಸುತ್ತಾಳೆ.

ಶೀಲವಂತ ಹೆಣ್ಣುಮಕ್ಕಳ ಜೊತೆಗೆ ಸ್ವೇಚ್ಛೆ ತೋರಿದ ಹೆಣ್ಣುಗಳ ಕತೆ ಏನಾಯಿತು ಎಂಬುದಕ್ಕೂ ಮಾದರಿಗಳನ್ನು ರೂಪಿಸಿದೆ. ಅದರ ಜೊತೆಗೆ ಆ ರೀತಿಯ ಸ್ವಾತಂತ್ರ ಹೆಜ್ಜೆಗಳನಿಟ್ಟ ಹೆಣ್ಣಿಗೆ ಕ್ರೂರ ಶಿಕ್ಷೆಗಳನ್ನು ನೀಡುವುದರ ಮೂಲಕ ಇಡೀ ಸ್ತ್ರೀಸಮುದಾಯಕ್ಕೆ ಎಚ್ಚರಿಕೆಯನ್ನು, ಜೀವಂತವಾಗಿಟ್ಟುಕೊಂಡಿದೆ.

ಸ್ತ್ರೀಬುದ್ಧಿ ವಿಪರೀತ, ಸ್ತ್ರೀ ಚಂಚಲೆ, ಹೆಣ್ಣಿನ ಬುದ್ಧಿ ಮೊಳಕಾಲ ಕೆಳಗೆ, ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ಎಂಬ ನಿಂದನೆಗಳು ಮತ್ತು ಕೋಣೆ ಗೆದ್ದವಳು ಕೋಟೆ ಗೆಲ್ಲುವಳು, ತೊಟ್ಟಿಲು ತೂಗುವ ಕೈ ಜಗವನ್ನಾಳುತ್ತದೆ ಎಂಬ ಹೊಗಳಿಕೆಗಳು ಸ್ತ್ರೀಯರು ತಮ್ಮ ಮೇಲೆ ಹೇರಿರುವ ಬಂಧನಗಳನ್ನು ಸಹಜವೆಂಬಂತೆ ಒಪ್ಪಿ ನಡೆದುಕೊಳ್ಳುವಂತೆ ಮಾಡುವ ಭ್ರಮೆಗಳನ್ನು ಸೃಷ್ಟಿಮಾಡುತ್ತದೆ.

ಇದರ ನಡುವೆ ಎಲ್ಲಿ ಹೆಣ್ಣೊಬ್ಬಳು ಪೂಜಿಸಲ್ಪಡುವಳು ಅಲ್ಲಿ ದೇವತೆಗಳು ಬಂದು ನೆಲೆಸುತ್ತಾರೆ ಎಂಬುದು, 'ಆದಿಶಕ್ತಿ' ರೂಪದಲ್ಲಿ ಪೂಜಿಸಲ್ಪಡುವ ಹೆಣ್ಣಿನ ಅದಮ್ಯಚೇತನ, ಜೊತೆಯಲ್ಲಿಯೇ ಹೆಣ್ಣು ಅಬಲೆ ಎಂದು ಕರೆದು, ಅವಳನ್ನು ರಕ್ಷಣೆಯಲ್ಲಿಡುವ ದ್ವಂದ್ವಾತ್ಮಕ ನಿಲುವುಗಳು ಪ್ರಶ್ನಾರ್ಥಕವಾಗಿಯೇ ಉಳಿಯುತ್ತವೆ.

ಪಿತೃ ಪ್ರಧಾನ ವ್ಯವಸ್ಥೆಯು "ಮಹಿಳೆಯ ಶೋಷಣೆಯ, ಅವಳ ಮೇಲಿನ ನಿರ್ಬಂಧದ ಅವಳ ಜೀವನದ ಅಪಮೌಲ್ಯೀಲರಣದ ಬುನಾದಿಯಾಗಿ ಸಮಾಜ ಜೈವಿಕ ಸ್ವರೂಪವನ್ನು ಬಳಸಿಕೊಂಡಿತು."[2]

ಸ್ತ್ರೀತ್ವದ ಅನುಭವಕ್ಕೆ ಎರಡು ರೀತಿಯ ಸ್ತ್ರೀತತ್ವಗಳು ಕಾರಣ. ಸ್ತ್ರೀತನವನ್ನು ನಿರಾಕರಿಸುವ ಸ್ತ್ರೀವಾದಿ ಗುಂಪುಗಳನ್ನು ನಾವು ಕಾಣಬಹುದು. ಆದರೆ ಆಧುನಿಕ ಸ್ತ್ರೀವಾದ ಪ್ರಕಾರ ಸ್ತ್ರೀತ್ವ ದೈಹಿಕ ಸತ್ಯವೂ ಹೌದು, ತಿಳಿವಿನ ಸತ್ಯವೂ ಹೌದು, ಅಂದರೆ ಪ್ರಕೃತಿದತ್ತ ಲಿಂಗ(ಸೆಕ್ಸ್) ಮತ್ತು ಸಮಾಜದತ್ತ ಲಿಂಗ (ಜೆಂಡರ್) ಎರಡೂ ಕೂಡಿ ಸ್ತ್ರೀಯ ಬಾಳನ್ನು ರೂಪಿಸುತ್ತವೆ. ಪ್ರಕೃತಿಯು ಒಂದು ರೀತಿಯ ಸ್ತ್ರೀತ್ವವನ್ನು ನೀಡಿದರೆ ಪುರುಷ ಪ್ರಧಾನ ನೆಲೆಯು ಇನ್ನೊಂದು ರೀತಿಯ ಸ್ತ್ರೀತ್ವವನ್ನು ಸ್ತ್ರೀಯ ಮೇಲೆ ಆರೋಪಿಸುತ್ತದೆ.[೩]

ಪಿತೃ ಪ್ರಧಾನ ವ್ಯವಸ್ಥೆಯ ಜೊತೆ ಸ್ತ್ರೀಯ ಸಂಬಂಧ ಅನ್ನುವುದು ತುಂಬ ಸಂಕೀರ್ಣವಾಗಿರುತ್ತದೆ ಮತ್ತು ದ್ವಂದ್ವಾತ್ಮಕವಾಗಿರುತ್ತದೆ ಇದನ್ನು ಬರೇ ಅನುಕೂಲಕರ ಅಥವಾ ಕೇವಲ ಶೋಷಕ ಎಂದು ಸರಳೀಕರಿಸಲು ಸಾಧ್ಯವಿಲ್ಲ. ಇಲ್ಲಿ ಎರಡು ತರಹದ ಸ್ತ್ರೀಪ್ರತಿಮೆಗಳನ್ನು ಗುರುತಿಸಲಾಗುತ್ತದೆ.[೪]

ಅವುಗಳು

೧. ಯಜಮಾನ ಸಂಸ್ಕೃತಿಯ ಸೇವೆ ಸಲ್ಲಿಸುವವರು.

೨. ಅದನ್ನು ತಲೆಕೆಳಗಾಗಿಸುವವರು.

ಇವರಿಬ್ಬರೂ ಒಂದೊಂದು ಪರಂಪರೆಯ ಕಾವಲುಗಾರಾಗಿರುತ್ತಾರೆ. ಒಂದು ಸಂಸ್ಕೃತಿಯು ಪ್ರಧಾನ ಸಂಸ್ಕೃತಿಯ ಜೊತೆಯಲ್ಲೇ ಅಸ್ತಿತ್ವದಲ್ಲಿರುತ್ತದೆ. ಈ ಕಾರಣಕ್ಕಾಗಿ ಸ್ತ್ರೀವಾದಿ ವಿಮರ್ಶೆಯಲ್ಲಾಗಲಿ ಸ್ತ್ರೀವಾದಿ ತಾತ್ವಿಕತೆಯಲ್ಲಾಗಲಿ ಪಿತೃಪ್ರಧಾನ ವ್ಯವಸ್ಥೆ= ಶೋಷಣೆ ಎಂಬ ಸಮೀಕರಣವನ್ನಿಟ್ಟುಕೊಂಡು ಹೊರಟರೆ ಅಪಾಯವಿದೆ ಗಂಡಿಗೆ ಅಧಿಕಾರ ಎಷ್ಟು ನಿಜವೋ, ಹೆಣ್ಣು ಅದನ್ನು ದಾಟಲು ತನ್ನದೇ ಆದ ಕ್ರಮಗಳನ್ನು ಹೊಂದಿರುವುದೂ ಅಷ್ಟೇ ನಿಜ.[೫]

ಸ್ತ್ರೀಪ್ರತಿಭೆಯಲ್ಲಿನ ಎರಡು ವಿಧಗಳನ್ನು ಡಿ.ಆರ್.ನಾಗರಾಜ್ ರವರು ಗುರುತಿಸಿದ್ದಾರೆ.

"೧.ಗಾರ್ಗಿ ಪ್ರತಿಭೆ

೨.ಕಾತ್ಯಾಯಿನಿ ಪ್ರತಿಭೆ"[೬]

ಗಾರ್ಗಿ ಪ್ರತಿಭೆಯು ಅದರ ಪ್ರಖರ ವೈಚಾರಿಕತೆ. ತನ್ನನ್ನು ತುಳಿಯುತ್ತಿರುವ ಅವಮಾನಕ್ಕೀಡು ಮಾಡಿರುವ ಎಲ್ಲ ಅಧಿಕಾರಗಳನ್ನೂ ಉಗ್ರವಾಗಿ ಪ್ರತಿಭಟಿಸುತ್ತದೆ. ವ್ಯಂಗ್ಯವಾಗಿ ಅದಕ್ಕೆ ಛೀಮಾರಿ

ಹಾಕುತ್ತದೆ. ವಿಷಾದದಿಂದ ನಿಟ್ಟುಸಿರಿಡುತ್ತದೆ. ದಿಟ್ಟಮಾತಿನ, ವಾಚಾಳಿಯಾದ, ಹೊಡೆಯುವ, ಎರಗುವ, ಹೆದರಿಸುವ ಗುಣಗಳುಳ್ಳ ಪ್ರತಿಭೆ ಇದು.

ಕಾತ್ಯಾಯಿನಿ ಪ್ರತಿಭೆ ಸ್ತ್ರೀಗೆ ತುಂಬ ವಿಶಿಷ್ಟವಾದುದು ದಿಟ್ಟಮಾತು ಇದಿರಾಳಿಯ ಜನ್ಮಜಾಲಾಡುವ ಆಕ್ರೋಶ ಯಾವುದೂ ಇಲ್ಲದೆ, ತಣ್ಣಗೆ ಮಂಜುಗತ್ತಿಯಂತೆ ಕೊಯ್ಯುವ ಕ್ರಮ ಇದು. ಇಲ್ಲಿ ಸ್ತ್ರೀಯು ಆರಾಧನೆ, ಮಗ್ನತೆ, ತನ್ಮಯತೆ ಇವುಗಳ ಮೂಲಕವೇ ಸಮಾಜವನ್ನು ಎದುರಿಸಿ ಬಿಡುತ್ತಾಳೆ. ಕೃಷ್ಣನ ಭಕ್ತಿಯ ಹುಚ್ಚಿನಲ್ಲಿ ಮೀರಾ, ಚೆನ್ನಮಲ್ಲಿಕಾರ್ಜುನನ ಆರಾಧನೆಯಲ್ಲಿ ಅಕ್ಕಮಹಾದೇವಿ ಮಾಡಿದ್ದು ಹೀಗೆಯೇ. ಪುರುಷನ ಅಹಂಗೆ ಕುಮ್ಮಕ್ಕು ಕೊಟ್ಟು ಕೊಟ್ಟು ಅವನನ್ನು ತನ್ನ ಕೈಮಗುವಾಗಿಸಿಕೊಂಡು ತೂಗಿಬಿಡುವ, ಆ ಮೂಲಕ ಅವನ ಮೇಲೆ ನಿಯಂತ್ರಣ ಸಾಧಿಸುವ ಕ್ರಮ ಇದು. ಎಲ್ಲ ಸಾಹಿತ್ಯದಲ್ಲೂ ಎಲ್ಲ ಕಲೆಯಲ್ಲೂ ಇಂತಹ ಬೂದಿ ಮುಚ್ಚಿದ ಕೆಂಡಗಳಿರಲು ಸಾಧ್ಯವಿದೆ. ಜನ್ನನ ಯಶೋಧರಚರಿತೆಯ ಅಮೃತಮತಿ ಎಲ್ಲ ರಾಜಭೋಗಗಳಿದ್ದೂ ಅಷ್ಟವಂಕನಿಗಾಗಿ ಹಂಬಲಿಸಿ ರಾಜಮನೆತನವನ್ನು ದಂಗು ಬಡಿಸಿದಳಲ್ಲ ಹಾಗೆ ಇದು. ವ್ಯವಸ್ಥೆಯೊಳಗಿದ್ದೂ ಅದರ ಬಗೆಗೆ ತಿರಸ್ಕಾರ ಹೊಂದಿದ್ದೂ ಮೇಲ್ನೋಟಕ್ಕೆ ತೋರಿಸಿಕೊಳ್ಳದೆ ಒಳಗೇ ಕತ್ತರಿಸುವ, ಪಿತೃಪ್ರಧಾನತೆಯ ನೈತಿಕ ಚೌಕಟ್ಟುಗಳನ್ನು ನುಚ್ಚುನೂರು ಮಾಡುವ ಶಕ್ತಿ ಇರುವ ಪ್ರತಿಭೆ ಇದು, ಇದನ್ನು ಸೂಕ್ಷ್ಮ ಪ್ರತಿಭಟನೆ, ಗೆರಿಲ್ಲಾ ಪ್ರತಿಭಟನೆ ಎಂತಲೂ ಕರೆಯಬಹುದು.[2]

ಸ್ತ್ರೀ ಸಂಸ್ಕೃತಿಯ ಶೋಧನೆಯಲ್ಲಿ ಸ್ತ್ರೀವಾದವು ಮೂರು ಹಂತವನ್ನು ಗುರುತಿಸುತ್ತದೆ. ಪಿತೃಸಂಸ್ಕೃತಿಯನ್ನು ಅಂತರ್ಗತಗೊಳಿಸಿಕೊಂಡ ಹಂತ, ಪಿತೃಸಂಸ್ಕೃತಿಯನ್ನು ವಿರೋಧಿಸುವ ಹಂತ, ಸ್ವಶೋಧನೆಯ ಹಂತ– ಈ ಮೂರು ಹಂತಗಳು ಕ್ರಮವಾಗಿ ಸ್ತ್ರೀತ್ವ, ಸ್ತ್ರೀವಾದಿತ್ವ ಹಾಗು ಸ್ತ್ರೀಯಾತ್ಮಕತೆಯ ಪ್ರಧಾನವಾದ ಹಂತಗಳೆಂಬ ವಿವರಣೆಯಿದೆ. ವೈದೇಹಿಯವರ ಸಾಹಿತ್ಯದಲ್ಲಿ ಈ ಮೂರು ಹಂತಗಳನ್ನು ಕಾಣಬಹುದು. ಈ ಹಂತಗಳು ಜಾಗೃತಗೊಳ್ಳುತ್ತಿರುವ ಬೇರೆ ಉಪಸಂಸ್ಕೃತಿಗಳ ಸಾಹಿತ್ಯಕ್ಕೂ ಸಂವಾದಿಯಾಗಿವೆ. ಮೊದಲ ಹಂತದ ಮಹಿಳಾ ಸಾಹಿತ್ಯವು ಪಿತೃಸಂಸ್ಕೃತಿಯು ಕೊಟ್ಟ ಮಹಿಳೆಯ ಪರಿಕಲ್ಪನೆಯನ್ನು ಪ್ರಶ್ನಿಸದೆ ಸ್ವೀಕರಿಸುತ್ತದೆ. ಸ್ತ್ರೀಯರ ಸಲುವಾಗಿ ರೂಪಿಸಲಾದ ಮೌಲ್ಯಗಳನ್ನೆಲ್ಲ ತಮ್ಮದೆಂದು ಒಪ್ಪುತ್ತದೆ. ಸ್ತ್ರೀವಾದಿತ್ವದ ಎಚ್ಚರ ಇಂಥ ಸ್ಥಿತಿಯನ್ನು ಅಲುಗಿಸುತ್ತದೆ, ಬದಲಾಯಿಸುತ್ತದೆ. ಮೊದಲಿನ ಹಂತದಲ್ಲಿ ಒಪ್ಪಲಾದ ಮೌಲ್ಯಗಳ ಅಪಾಯದ ಅರಿವನ್ನು ಪಡೆಯುತ್ತದೆ. ಈ ಹಂತದಲ್ಲಿ ಮಹಿಳಾ ಸಾಹಿತ್ಯದ ಹೆಚ್ಚಿನ ಶಕ್ತಿಯೆಲ್ಲ ಈ ವಿರೋಧಕ್ಕಾಗಿ ವ್ಯಯವಾಗುತ್ತವೆ. ಸಹಜವಾಗಿ ಆಕ್ರೋಶ, ನೋವುಗಳು ಪ್ರಧಾನವಾಗಿರುತ್ತವೆ. ಸ್ತ್ರೀಯಾತ್ಮಕತೆಯ ಹಂತದಲ್ಲಿ ಮಹಿಳೆ ತನ್ನನ್ನು ಶೋಧಿಸಿಕೊಳ್ಳುವ, ತನ್ನನ್ನು ತಾನಾಗಿ ಅಭಿವ್ಯಕ್ತಿಸಿಕೊಳ್ಳುವ ಹಂತವನ್ನು ತಲುಪುತ್ತಾಳೆ.

ಪುರುಷರೊಂದಿಗೆ ಸಮಾನವಲ್ಲದ, ಭಿನ್ನವಾದ ಒಂದು ಸ್ಥಿತಿಯನ್ನು ತಲುಪಿರುವ ಸ್ತ್ರೀಯರ ಹಿಂದೆ ಒಂದು ವಿಭಿನ್ನ ಚರಿತ್ರೆಯಿದೆ, ಸಂಸ್ಕೃತಿಯಿದೆ. ಈ ವಿಭಿನ್ನ ಚರಿತ್ರೆಯಿಲ್ಲದೆ ವಿಭಿನ್ನ ಭವಿಷ್ಯದ ಕಲ್ಪನೆಯನ್ನು ನಾವು ಹೇಗೆ ತಳೆಯೋಣ ಎಂಬ ಜೂಲಿಯಟ್ ಮಿಷಲ್ ಮತ್ತು ಆನ್ ಓಕ್ಲೆಯ ಪ್ರಶ್ನೆಯಲ್ಲಿ ಪರಂಪರೆಯ ತಿಳಿವಿನ ಅಗತ್ಯ ಕುರಿತ ಕಾಳಜಿ ಇದೆ. ಈ ವಿಭಿನ್ನ ಪರಿಸ್ಥಿತಿ ಸಮಾಜದ ಮಾನ್ಯತೆಯನ್ನು ಪಡೆಯುವ ಪ್ರಶ್ನೆಯೇ ಇಲ್ಲ ಅವಳ ಉಳಿದ ಶ್ರಮದಂತೆ ಇದು ಕೂಡ ಆದಷ್ಟೂ ಕಾಣದಂತಿರುತ್ತದೆ. ಅದರ ಬೆಳವಣಿಗೆ ಯಾವತ್ತೂ ಅದೃಶ್ಯವಾದ ಇಕ್ಕಟ್ಟಿನಲ್ಲಿಯೇ. ಸ್ತ್ರೀವಾದ ಹೆಂಗಸಿನ ಬದುಕಿನ ಸಮಸ್ಯೆ, ಇಕ್ಕಟ್ಟನ್ನು ಮಾತ್ರ ಸಾರ್ವಜನಿಕ ಸ್ಥಳಕ್ಕೆ ಬೆಳಕಿಗೆ ತರುವುದಲ್ಲ ಮಹಿಳೆ ಮುಖ್ಯಳಲ್ಲದ ಸಮಾಜದಲ್ಲಿ ಮುಚ್ಚಿಹೋದ ಅವಳ ಸಂಸ್ಕೃತಿಯನ್ನೂ ಹೊರಗೆ ತರಲು ಉದ್ದೇಶಿಸಿದೆ."[೮] ಎನ್ನುತ್ತಾರೆ.

ಈ ಹಿನ್ನೆಲೆಯಲ್ಲಿ ಆಧುನಿಕ ಸ್ತ್ರೀವಾದವು ಸ್ತ್ರೀವಾದದ ಹಂಗಿಲ್ಲದೆ ತನ್ನತನವನ್ನು ಉಳಿಸಿಕೊಂಡು ಬದುಕುವ ಬದುಕುತ್ತಿರುವ ಸ್ತ್ರೀ ಪ್ರತಿಭೆಯನ್ನು ಕುತೂಹಲದಿಂದ ಗಮನಿಸುತ್ತದೆ.

"...ತಾವು ಬದುಕುವ ವ್ಯವಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತಾ ಇಲ್ಲವೇ, ರಾಜಿ ಮಾಡಿಕೊಳ್ಳುತ್ತಾ ಅಥವಾ ಹೋರಾಡುತ್ತಾ ಬದುಕುತ್ತಿರುವುದಂತೂ ನಿಜ.....ತನಗೆ ಇಷ್ಟವಿಲ್ಲದ್ದು ನಡೆದಾಗ ಕೂಗಾಟ, ಕಿರುಚಾಟ, ಮೌನ, ಅಸಹಕಾರ, ಅನ್ನ ಸತ್ಯಾಗ್ರಹ, ತವರಿಗೆ ಪಲಾಯನ, ಕೋಪದ ಸ್ಥಾನಪಲ್ಲಟ (ಅಂದರೆ ಒಬ್ಬರ ಮೇಲಿನ ಕೋಪವನ್ನು ಇನ್ನೋಬ್ಬರ ಮೇಲೆ ತೋರಿಸುವುದು). ಹೀಗೆ ಅನೇಕಾನೇಕ ರೀತಿಯಲ್ಲಿ ಎದುರಿಸುವ, ಸಹಿಸುವ ತಂತ್ರಗಳನ್ನು ಮಾಡುತ್ತಲೇ ಇರುತ್ತಾರೆ. ಪ್ರತಿಭಟನೆ ಅನೇಕ ಅವತಾರಗಳನ್ನು ಎತ್ತುತ್ತಲೇ ಇರುತ್ತದೆ. ಪಿತೃಪ್ರಧಾನ ಚೌಕಟ್ಟಿನೊಳಗೇ ಇದ್ದರೂ, ಅದರೊಡನೆ ಸ್ವಲ್ಪ ಸ್ವಲ್ಪ ಗುದ್ದಾಡುತ್ತಾ. ಅದರ ವ್ಯಾಪ್ತಿಯನ್ನು ಕಿರಿದುಗೊಳಿಸುತ್ತಾ, ಸಣ್ಣ ಸಣ್ಣ ಸ್ವಾತಂತ್ರ್ಯವನ್ನು ಗಳಿಸುತ್ತಾ ತಮ್ಮತನವನ್ನು ಸ್ವಲ್ಪವಾದರೂ ತೋರಿಸಿಕೊಳ್ಳುತ್ತಾ ಸ್ತ್ರೀಯರು ಬದುಕುತ್ತಾರೆ. ಇವರಿಗೆ ಸ್ತ್ರೀವಾದದ ಹಂಗಿಲ್ಲದಿದ್ದರೂ, ಸ್ತ್ರೀವಾದಕ್ಕೆ ಇವರ ರಕ್ಷಣಾ ತಂತ್ರಗಳ ಬಗ್ಗೆ ಕುತೂಹಲವಿದೆ. ಸ್ತ್ರೀ ಪ್ರತಿಭೆಯ ಸ್ವರೂಪವನ್ನು ಅರಿಯುವಲ್ಲಿ ಸ್ತ್ರೀವಾದವು ಈ ಸೂಕ್ಷ್ಮಗಳನ್ನೆಲ್ಲಾ ಗಮನಿಸುತ್ತದೆ. ಇಲ್ಲಿ ಸ್ತ್ರೀವಾದವೇ ಸ್ತ್ರೀಯರಿಂದ ಕಲಿಯುತ್ತದೆ. ಎಷ್ಟಾದರೂ ಅದು ಅನುಭವಾಧಾರಿತವಾದ ತತ್ವವಲ್ಲವೇ?"[೯] ಎಂದು ಆಧುನಿಕ ಸ್ತ್ರೀವಾದ ವೀಕ್ಷಿಸುತ್ತದೆ.

ವೈದೇಹಿಯವರ ಸಾಹಿತ್ಯ ಒಂದು ವಿಶೀಷ್ಟ ರೀತಿಯಲ್ಲಿ ಪುರುಷಪ್ರಧಾನ ವ್ಯವಸ್ಥೆಯ ಚಿತ್ರಣವನ್ನು ನೀಡುತ್ತದೆ. ಅವರ ಸಾಹಿತ್ಯದಲ್ಲಿ ಪುರುಷಪ್ರಧಾನ ವ್ಯವಸ್ಥೆಯ ಕ್ರೌರ್ಯದ ಸ್ಥೂಲ ಮತ್ತು ಸೂಕ್ಷ್ಮ ಅವತಾರಗಳನ್ನು ಅತ್ಯಂತ ಧ್ವನಿಪೂರ್ಣವಾಗಿ ವರ್ಣಿಸಿದ್ದಾರೆ. ಪಿತೃವ್ಯವಸ್ಥೆಯಲ್ಲಿ ಅಧಿಕಾರ ಸ್ಥಾನದಲ್ಲಿರುವ

ಗಂಡಸರು ಮತ್ತು ಹೆಂಗಸರು ಈ ಕ್ರೌರ್ಯದ ಮುಂದುವರಿಕೆಗೆ ಕಾರಣರಾಗುತ್ತಾರೆ. ಆದರೆ ಈ ಕ್ರೌರ್ಯದ ಬಲಿಪಶುಗಳಾಗುವವರಲ್ಲಿ ಹೆಂಗಸರೇ ಹೆಚ್ಚು.)

ಅಡಿಟಿಪ್ಪಣಿಗಳು:

೧. ಸ್ತ್ರೀವಾದ, ಬಿ.ಎನ್.ಸುಮಿತ್ರಾಬಾಯಿ, ಪು-೩.

೨. ನಾರಿ: ದಾರಿ-ದಿಗಂತ, ವಿಜಯದಬ್ಬೆ, ಪು-೭.

೩. ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ ಒಂದು ಸ್ತ್ರೀವಾದಿ ಅಧ್ಯಯನ, ಡಾ.ಎಲ್.ಜಿ.ಮೀರಾ, ಪಿ.ಹೆಚ್.ಡಿ ಪ್ರಬಂಧ, ಬೆಂ.ವಿ.ವಿ, ಪು-೨೧.

೪. "ಮೇಕಿಂಗ್ ಎ ಡಿಫರೆನ್ಸ್" ಪೆಮಿನಿಸ್ಟ್ ಲಿಟರರಿ ಕ್ರಿಟಿಸಿಸಂ ಸಂಪಾದಕೀಯ ಲೇಖನ ಗೇಲ್ ಗ್ರೀನ್ ಮತ್ತು ಕೊಪ್ಪಾಲಿಯ ಕಾನ್" ಆಧಾರ. ಇದರ ಉಲ್ಲೇಖ "ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ ಒಂದು ಸ್ತ್ರೀವಾದಿ ಅಧ್ಯಯನ", ಡಾ.ಎಲ್.ಜಿ.ಮೀರಾ, ಪಿ.ಹೆಚ್.ಡಿ ಪ್ರಬಂಧ, ಬೆಂ.ವಿ.ವಿ, ಪು-೩೫.

೫. ಅದೇ.

೬. ಭಾರತೀಯ ಸ್ತ್ರೀವಾದ, (ಸಂ). ಮನುಚಕ್ರವರ್ತಿ, ಪು-೧೨೭-೧೨೯.

೭. ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ ಒಂದು ಸ್ತ್ರೀವಾದಿ ಅಧ್ಯಯನ, ಡಾ.ಎಲ್.ಜಿ.ಮೀರಾ, ಪಿ.ಹೆಚ್.ಡಿ ಪ್ರಬಂಧ, ಬೆಂ.ವಿ.ವಿ, ಪು-೨೩.

೮. ನಾರಿ: ದಾರಿ-ದಿಗಂತ, ವಿಜಯದಬ್ಬೆ, ಪು-೨೨-೨೩.

೯. "ಸ್ತ್ರೀವಾದಕ್ಕೆ ಮುಜುಗರ ತರಬಲ್ಲ ಐದು ಸವಾಲುಗಳು" ಎಂಬ ಲೇಖನ, ಡಾ. ಎಲ್.ಜಿ.ಮೀರಾ, ಮಹಿಳಾ ಅಧ್ಯಯನ-ಸಂಪುಟ ೮, ಸಂಚಿಕೆ೧, ಜನವರಿ-ಜೂನ್-೨೦೦೬, ಪು-೯೯.

೩. ವೈದೇಹಿಯವರ ಕವಿತೆಗಳಲ್ಲಿ ಸ್ತ್ರೀ.

ವೈದೇಹಿಯವರ ಕತೆ-ಕಾದಂಬರಿಗಳು ಹೆಣ್ಣನ್ನು ಸಾಮಾಜಿಕ ನೆಲೆಯಲ್ಲಿ ಶೋಧಿಸಿದರೆ ಅವರ ಕವಿತೆಗಳು ಹೆಣ್ಣಿನ ಅಂತರಂಗಕ್ಕೆ ಕನ್ನಡಿಯಾಗುತ್ತವೆ. ಹಾಗಾಗಿ ಸ್ತ್ರೀ ಸಂಸ್ಕೃತಿಯ ವೈಶಿಷ್ಟ್ಯಗಳು ಅವರ ಕವಿತೆಗಳಲ್ಲಿಯೂ ಕಾಣಬಹುದು. ವೈದೇಹಿಯವರು 'ಬಿಂದು ಬಿಂದಿಗೆ' ಮತ್ತು 'ಪಾರಿಜಾತ' ಎಂಬ ಎರಡು ಕವನ ಸಂಕಲನಗಳನ್ನು ರಚಿಸಿದ್ದಾರೆ. ಈ ಎರಡೂ ಸಂಕಲನದಲ್ಲಿಯೂ ಅವರ ಸ್ತ್ರೀಪ್ರಜ್ಞೆ ಆಳದಲ್ಲಿ ಕೆಲಸ ಮಾಡಿರುವುದು ಕಂಡುಬರುತ್ತದೆ.

ಮಹಿಳಾ ಲೇಖಕಿಯರು ಕವಿತೆಯ ರಚನೆಗಾಗಿ ಬಳಸಿಕೊಂಡ ತಂತ್ರ ಹಾಗೂ ನಿರೂಪಣೆಯಲ್ಲಿಯೂ ವೈಶಿಷ್ಟ್ಯವಿರುವುದನ್ನು ಗುರುತಿಸಬಹುದು. "ಹೆಣ್ಣಿನ ನೇರವಾದ ಮುಕ್ತವಾದ ಅಭಿವ್ಯಕ್ತಿಗೆ ಅವಕಾಶವಿಲ್ಲದ ಸಮಾಜದಲ್ಲಿ ಕವಿತೆ ಅವರಿಗೆ ಒಂದು ಪಲಾಯಾನ ಮುಖವಾಡ ಮಾರ್ಗವಾಗಿ ಒದಗಿಬಂತು. ಆದರೆ ಇವಿಷ್ಟೇ ಸಾಕಾಗಲಿಲ್ಲ. ಇಲ್ಲಿಯೂ ತಮ್ಮ ಅಭಿವ್ಯಕ್ತಿಗೆ ಇದ್ದ ಸಾಮಾಜಿಕ ವಿಮರ್ಶಾ ಬಿಕ್ಕಟ್ಟುಗಳನ್ನು ನಿವಾರಿಸಿಕೊಳ್ಳುವ ತಂತ್ರಗಳನ್ನು ಅವರು ಅನುಸರಿಸಬೇಕಾಯಿತು. ಇಲ್ಲವೇ ಹೊಸದಾಗಿ ರೂಢಿಸಿಕೊಳ್ಳಬೇಕಾಯಿತು. ಈ ದಿಸೆಯಲ್ಲಿ ಕನಸುಗಾರಿಕೆ, ಆತ್ಮಕಥನದ ಧಾಟಿ, ಸ್ವಗತ, ಗೆಳತಿಯರಿಗೆ ನಿವೇದನೆ ಮುಂತಾದುವೆಲ್ಲ ಇವರು ಅನುಸರಿಸಿದ ತಂತ್ರಗಳೇ."[೧] ಆಗಿವೆ ಎಂದು ಸಂಧ್ಯಾರೆಡ್ಡಿಯವರು ಗುರುತಿಸಿದ್ದಾರೆ. ಅಲ್ಲದೆ ಈ ತಂತ್ರಗಳು ಮಹಿಳಾ ಕಾವ್ಯಕ್ಕೆ ಹೊಸದೇನಲ್ಲ. ಇವುಗಳ ಬಳಕೆ ನಮ್ಮ ಜಾನಪದ ಸಾಹಿತ್ಯದಲ್ಲಿಯೇ ಕಾಣಬಹುದು. ಅಕ್ಕನ ವಚನಗಳಲ್ಲಿ ಈ ಎಲ್ಲಾ ತಂತ್ರಗಳು ಬಳಕೆಯಾಗಿವೆ. ಮಹಿಳಾ ಕಾವ್ಯದಲ್ಲಿ ಪುರುಷನನ್ನು ಉದ್ದೇಶಿಸಿ ಹೇಳುವಾಗಲೆಲ್ಲ ಪರೋಕ್ಷವಾದ ಸಂಭಾಷಣೆ ಅಥವಾ ಹೇಳಿಕೆ, ತೃತೀಯ ಪುರುಷದ ಬಳಕೆಯಾಗಿರುವುದನ್ನು ಕಾಣಬಹುದಾಗಿದೆ. ಇವು ಸಧ್ಯಕ್ಕೆ ನಮ್ಮ ಮಹಿಳಾ ಕಾವ್ಯದ ಸ್ಥಾಯಿಯಾದ ಗುಣವಾಗಿದೆ ಎಂದು ಸಂಧ್ಯಾರೆಡ್ಡಿಯವರು ಅಭಿಪ್ರಾಯ ಪಡುತ್ತಾರೆ.

ವೈದೇಹಿಯವರ ಬಹುತೇಕ ಕವನಗಳು ಈ ತಂತ್ರ ಮತ್ತು ಧಾಟಿಗಳನ್ನು ಬಳಸಿಕೊಂಡೇ ಸ್ತ್ರೀ ವಿಶಿಷ್ಟತೆಯ ಶೋಧನೆಯಲ್ಲಿ ತೊಡಗುತ್ತವೆ. ಅಡುಗೆ ಮನೆಯ ಹುಡುಗಿಯ ಅಂತರಂಗ, ಬದುಕು, ಕನಸು, ನಿರಾಸೆಗಳೆಲ್ಲವನ್ನು ವೈದೇಹಿಯವರ ಕವಿತೆಗಳು ಭಿನ್ನ ನೆಲೆಯಲ್ಲಿ ಶೋಧಿಸುತ್ತವೆ.

ಅಧ್ಯಯನದ ಅನುಕೂಲಕ್ಕಾಗಿ ಅವರ ಕವನಗಳನ್ನು ಕೆಳಗಿನಂತೆ ವಿಭಾಗಿಸಿಕೊಳ್ಳಲಾಗಿದೆ.

೧. ಗಂಡು-ಹೆಣ್ಣಿನ ಸಂಬಂಧವನ್ನು ಶೋಧಿಸುವ ಕವನಗಳು.

೨. ಸ್ತ್ರೀ ವಿಶಿಷ್ಟತೆಯನ್ನು ಸಾರುವ ಕವನಗಳು.

೩. ಮಹಿಳಾ ಕಾವ್ಯದ ಸಮರ್ಥನೆ.

೪. ಕಾಡುವ ಜ್ಞಾನದ ಹಂಬಲ.

೧. ಗಂಡು-ಹೆಣ್ಣಿನ ಸಂಬಂಧವನ್ನು ಶೋಧಿಸುವ ಕವನಗಳು

ಗಂಡು-ಹೆಣ್ಣಿನ ಸಂಬಂಧವನ್ನು ಶೋಧಿಸುವ ಇವರ ಕೆಲವು ಕವನಗಳು ಪುರಾಣದ ಪಾತ್ರಗಳನ್ನು ಭಿನ್ನ ನೆಲೆಯಲ್ಲಿಯೇ ಗ್ರಹಿಸುತ್ತವೆ. ಲೋಕಕ್ಕೆ ದೇವರುಗಳೆನಿಸಿದ ತ್ರಿಮೂರ್ತಿಗಳಲ್ಲಿ ನಾರಾಯಣನು ತನ್ನ ಮಡದಿಗೆ ತನ್ನ ಹೃದಯದಲ್ಲಿ ಜಾಗಕೊಟ್ಟರೆ, ಈಶ್ವರನು ತನ್ನ ದೇಹದ ಅರ್ಧಭಾಗವನ್ನೇ ಶಿವೆಗೆ ಕೊಟ್ಟು ಅರ್ಧನಾರೀಶ್ವರನೆನಿಸಿದ. ಪ್ರೀತಿಯ ಈ ಪರಿ ಜಗತ್ತಿಗೆ ಗೊತ್ತು. ಅಗ್ನಿಕುಂಡದಲ್ಲಿ ಬಿದ್ದು ಪ್ರಾಣತೆತ್ತ ದಾಕ್ಷಯಿಣಿಯ ಬೂದಿಯನ್ನು ಮೈಗೆ ಬಳಿದುಕೊಂಡು, ಆವೇಶಭರಿತನಾಗಿ ದಕ್ಷಯಜ್ಞವನ್ನು ನಾಶಮಾಡಿ ಅವಳಿಲ್ಲದ ಬದುಕು ಬೇಸರವಾಗಿ ದೀರ್ಘತಪಸ್ಸಿಗೆ ಕುಳಿತ ಶಿವನ ಸತೀಪ್ರೇಮ ಮೆಚ್ಚುವಂತಹದೇ. ಆದರೆ ಲೋಕಕ್ಕೆ ತಿಳಿಯದ ಅನೇಕ ಸಂಗತಿಗಳು ಪಾರ್ವತಿಗೆ ಗೊತ್ತು. ಶಿವನೇ ತನ್ನ ಪತಿಯಾಗಬೇಕು, ಲೋಕದ ಗಂಡರೆಲ್ಲ ಅಪೂರ್ಣರು ಎಂದು ತಪಸ್ಸನ್ನು ಮಾಡಿ ಶಿವನನ್ನು ಪತಿಯಾಗಿ ಪಡೆದ ಹಿಮವಂತನ ಮಗಳಿಗೆ, ಲೋಕಕ್ಕೆ ಕಾಣದ ಅನೇಕ ಸತ್ಯಗಳು ಗೊತ್ತು. ಅವಳ ಕೇಳಿದರೆ, ಅವಳು ಕಟ್ಟಿದ ಗಂಟಲಿನಿಂದ ನುಡಿಯುತ್ತಾಳೆ

> "ದೇವನಲ್ಲವೆ ಸಖೀ
> ಪ್ರಬುದ್ಧನೆಂಬಾತ ಪರಮ ಜೀವ"[1]

ಕೈಲಾಸದಲ್ಲಿ ವಾಸಮಡುವ ಗಿಳಿಯು, ಶಿವನ ಮಹದೇವಿ ಪಾರ್ವತಿ, ಸಹದೇವಿ ಅಂತರದಗಂಗೆ ಇಬ್ಬರಿಗೂ ಗೆಳತಿ. ಅವರ ಅಂತರಂಗ ಬಲ್ಲ ಈ ಗಿಳಿಯೂ ಕಾಮನನ್ನು ಸುಟ್ಟು, ಕಾಮನನ್ನು ಗೆದ್ದ ಶಿವನ ರಸಿಕ ಕತೆಯನ್ನು ಹೇಳತೊಡಗುತ್ತದೆ.

ಈ ಪ್ರಬುದ್ಧದೇವ ಯಾರೇ ಎಂದು ಕೇಳಿದರೆ. ಅದು ಹೇಳುತ್ತದೆ ಪ್ರಬುದ್ಧದೇವ ಕೈಲಾಸ ಪರ್ವತದ ತಿರುಕ, ಮರಕತದ ಗುಹೆಯೊಳಗೆ ಇವನ ವಾಸ. ಶಿವನು ಏಕಪತ್ನೀವ್ರತ ರಾಮಧ್ಯಾನದಲ್ಲಿ ನಿರತನಾಗಿದ್ದ ದಿನದಿಂದ ಕತೆಯನ್ನು ಹೇಳತೊಡಗುತ್ತದೆ. ರಾಮಧ್ಯಾನದಲ್ಲಿದ್ದ ಶಿವನಿಗೆ ಅದು ಯಾಕೋ ಬೇಸರವಾಗಿ, ಒಂದು ದಿನ ಗಂಗೆಯ ಕಣ್ಮಿಂಚು, ಕೋಲ್ನಗೆಗೆ ಮರುಳಾಗಿ ಇದ್ದುದನಿದ್ದಲ್ಲೇ ಬಿಟ್ಟು ಅವಳ ಹಿಂದೆ ಓಡಿಹೋಗುತ್ತಾನೆ. ಹೀಗೆ ಅವನ ಶೃಂಗಾರಕತೆಯೂ ಪ್ರಾರಂಭವಾಯಿತು. "ಪ್ರಬುದ್ಧ

ಪರಮನೆಂದೆಣಿಸಬೇಡ ಪರಶಕ್ತಿಯೂ ಕೂಡ ಮಾನವನ ಬಿಂಬ[೨೩] ಎಂದು ಶಿವನ ಗುಟ್ಟನ್ನು ನುಡಿಯುತ್ತದೆ.

ಮನುಷ್ಯ ಸೃಷ್ಟಿಸಿದ ದೇವ ಅವನ ಪ್ರತಿಬಿಂಬವೇ ಎಂಬ ಸತ್ಯವನ್ನು ಶಿವೆಯ ಸಂಗದಲ್ಲಿರುವ ಗಿಳಿಯು ನುಡಿಯುತ್ತದೆ. ಇದೇ ಮಾತುಗಳನ್ನು ಶಿವನ ರಸಿಕ ಕತೆಗಳಿಂದ ಬೇಸತ್ತು ಪರ್ವತದ ಕೆಳಗೆ ಪದ್ಮಾಸನದಲ್ಲಿ ಕುಳಿತು ತಪ ಮಾಡುತ್ತಿರುವ ಶಿವೆಯು ಹೇಳುತ್ತಾಳೆ.

ಬೈರಾಗಿಯಾಗಿ ಜಟೆಕಟ್ಟಿ ಭಸ್ಮಲೇಪಿತನಾಗಿ ಕಾಣುವ ಶಿವನ ಈ ವೈರಾಗ್ಯದ ಚಿಹ್ನೆಗಳು ಕೂಡ ಅವನಿಗೆ ರಸಿಕತೆಯು ನೆನಪು ತರುತ್ತವೆ!.

"ರಸಿಕ ಶಿಖೆಯಲ್ಲಿ ಹೇನುಂಟು ಮಲ್ಲಿಗೆಯುಂಟು
ಜನ್ಮಾಂತರದ ಜೊಂಟು ವಾಸನೆ ಕಾಂತ
ಮೈತುಂಬ ಬಳಿದ ಭೂತ ರೋಮಾಂಚ ಭಸ್ಮದಲ್ಲಿ
ಗುಹೆಯಿಂದ ಗುಹೆಗೆ ನಿರಂತರ ತಿರುಗಾಟ
ಸಾಮಾನ್ಯನೇ ಆತ?"[೪]

ಎಂದು ಹೇಳುವ ಗಿಳಿಯು ರಸಿಕ ಶಿಖೆಯೆಂದು ಗಂಗೆ ನೆಲೆಸಿರುವ ತಾಣವನ್ನು ತೋರಿಸುತ್ತದೆ. ಆ ಭಸ್ಮದಲ್ಲಿ ಜನ್ಮಾಂತರದ ವಾಸನೆ, ರೋಮಾಂಚನ ಅಡಗಿದೆ ಎನ್ನುತ್ತದೆ. ಶಿವನನ್ನು ಅರ್ಥಮಾಡಿಕೊಳ್ಳಲು ತಾನು ಮಾಡಿದ ಪ್ರಯತ್ನಗಳ ಸೋಲನ್ನು ವಿವರಿಸುತ್ತಾ, ಈ ಶಿವನ ಗುಟ್ಟನ್ನು ಸುಲಭವಾಗಿ ಒಡೆಯಲು ಸಾಧ್ಯವಿಲ್ಲ ಎಂದು ನಿರ್ಧಾರವಾಗಿ ಹೇಳುತ್ತದೆ.

"ದೃಷ್ಟಿಗೋಚರನೂ ದೃಷ್ಟಿಗೋಚರನಲ್ಲ
ಚಂಚಲಾಚಲನಲ್ಲ ಚಂಚಲಾಚಲನೂ
ನಿಲ್ಲುವನು ನಿಲನು ನಗುವನು ನಗನು
ಮೌನ ಮಾತನು ಬೆರಸಿ ದಿವ್ಯವಾಗುವನೊಮ್ಮೆ
ಅ-ಸಹ್ಯವಾಗುವನು
ತನ್ನನರಿಯುವಗಣ್ಣ ಚನ್ನಕೇಶವನು
ಹಾ...!ಯಾರೆಂದು ಎಂತು ಬಣ್ಣಿಸಲೆ ಗೆಳತೀ?
ಬಣ್ಣ ತೊಡೆದಷ್ಟೂ ಅಸ್ಪಷ್ಟವಾಗುವನು"[೫]

ಶಿವನನ್ನು ಬಣ್ಣಿಸುತ್ತಾ ಗಿಳಿ ಅವನ ಮರ್ಮ ಒಡೆಯಲು ಪ್ರಯತ್ನಿಸುತ್ತದೆ. ಆದರೆ ಈ ಶಿವನ ಮರ್ಮ ಶಿವನಿಗೇ ತಿಳಿಯದು. ಯಾರಿಂದಲೂ ಅರಿಯಲಾಗದ ಆ ಮರ್ಮ ಶಿವೆಗೆ ಮಾತ್ರ ತಿಳಿದಿದೆ.

ನಿಜ ಸಂಗತಿ ತಿಳಿದಿದ್ದು ಅವನೊಂದಿಗೆ ಬಾಳು ನೂಕುತ್ತಿರುವ ಹೆಣ್ಣು ಈಕೆ. ಪ್ರತಿದಿನ ಅವನು ಸಂಚಾರ ಮುಗಿಸಿ ಬಂದ ಮೇಲೆ, ಶಿವನನ್ನು ಶಿವೆ ಮೀಯಿಸುತ್ತಾಳೆ, ಶುಭ್ರಗೊಳಿಸುತ್ತಾಳೆ. ಅವನು

ಹೊರಗಿನಿಂದ ಹಿಡಿಸಿಕೊಂಡು ಬರುವ ಜ್ವರಕ್ಕೆ ಮದ್ದಿನೆಣ್ಣೆಯ ಪೂಸಿ ಕಿರಾತ ಕಡ್ಡಿಯ ಕಷಾಯ ಕುಡಿಸಿ ತನ್ನ ದುಃಖವನ್ನು ಒಳಗೆ ನುಂಗುತ್ತಾಳೆ.

ಕೇವಲ **ದುಃಖ ನುಂಗಿ ಬದುಕುವ** ಅಬಲೆ ಹೆಣ್ಣಲ್ಲ ನಮ್ಮ ಗೌರಿ. ಶಿವನ ದಣಿದ ಪಾದಗಳನ್ನು ನೋಡುವ ನೆಪದಲ್ಲಿ ಯಾರ ಮನೆಯ ಬೀದಿಯ ಧೂಳು ಎಂಬುದನ್ನು ಪತ್ತೆ ಹಚ್ಚುತ್ತಾಳೆ. ಮನಸ್ಸಿಗೆ ನೋವಾದರು ನಗುವಿನಿಂದಲೇ ಶಿವನನ್ನು ಸ್ನಾನಕ್ಕೆ ಆಹ್ವಾನಿಸುತ್ತಾಳೆ. ಆದರೆ ಪ್ರಶ್ನೆ ಕೇಳದೆ ಬಿಡಳು "ಮುಗಿಯಿತೇ ಬೇಟೆ?", ಗೌರಿಯ ಕಂಬನಿ ನೀರಿನಲ್ಲಿ ಬೆರೆತು ಬಿಸಿಯಾಗಲು ಶಿವನು ಸಹಿಸಲಾರ "ಆಯ್" ಎಂದು ಬೆದರಿ ನುಡಿಯುತ್ತಾನೆ ,'ನನ್ನನೇನೆಂದು ಕೊಂಡೆ? ನಿನ್ನ ಬಿಟ್ಟರೆ ಶುದ್ಧ ಬೈರಾಗಿ'. ಈ ಮಾತುಗಳ ಮೂಲಕ ಶಿವೆಯ ನಂಬಿಸಲು ಪ್ರಯತ್ನಿಸುತ್ತಾನೆ. ಅದರೆ ಶಿವನ ಮರ್ಮ ತಿಳಿದಿರುವ ಅವಳು ನಂಬಿಯಾಳೇ?. ಆಕೆ "ಈ ಮಾತಿಗೆ ಶಿವನೇ, ನಾನೆಷ್ಟನೆಯ ನಾರಿ?" ಎಂದು ಮರುಪ್ರಶ್ನಿಸುತ್ತಾಳೆ. ಈ ಪ್ರಶ್ನೆಗೆ ಉತ್ತರವಿಲ್ಲ ಶಿವನಲ್ಲಿ.

ನಂಜುನ್ನು ನುಂಗಿದ ಶಿವನಿಗೆ ಈ ಪ್ರಶ್ನೆಗಳು ತಟ್ಟುವುದೇ ಇಲ್ಲ. ಶಿವೆಯ ಬಳಿಯಿದ್ದರೂ ಕನಸು ಅವನನ್ನು ಅವಳಿಂದ ದೂರ ಸಾಗಿಸುತ್ತದೆ, ನದಿಯ ನೆನಪಿಗೆ. ಇದೇನು ಹೊಸತಲ್ಲ ಶಿವಗೆ. ಆದರೆ,

"ಮಿಸುಕಾಡದೇ ಕುಳಿತು ತಲ್ಲಣವ ತಡೆಯುವ
ಆರ್ದ್ರಗರ್ವದ ಹುಡುಗಿ ನಮ್ಮ ಗೌರಿ"[1]

ಶಿವನ ನಯವಂಚನೆಯ ನೋವನ್ನು ತಾನೇ ನುಂಗಿ ಯಾರಿಗೂ ಸುಳಿವು ಕೊಡದೆ ಆರ್ದ್ರ ಗರ್ವದಿಂದ ಇರುವವಳು. ಈ ಕವಿತೆಯ ಶಿವ–ಶಿವೆಯರು ಏಕಕಾಲದಲ್ಲಿ ಪುರಾಣದ ದಂಪತಿಗಳು ಮತ್ತು ವಾಸ್ತವದ ಸತಿ–ಪತಿಗಳು ಆಗಿದ್ದಾರೆ.

ಇಂತಹ ಅಸ್ಪಷ್ಟ ಶಿವನನ್ನು ತನ್ನ ಚೆನ್ನಮಲ್ಲಿಕಾರ್ಜುನ ಎಂದು ಹುಡುಕುತ್ತಾ ಹೊರಟ ಅಕ್ಕಮಹಾದೇವಿ ನಿರೂಪಕಿಗೆ ಬಿದ್ದ 'ಒಂದು ರಾತ್ರಿಯ ಕನಸ್ಸಿನಲ್ಲಿ' ಅಗ್ನಿಪ್ರವೇಶ ಮಾಡಿದಂತೆ ಎನಿಸುತ್ತದೆ. 'ಲೋಕದ ಗಂಡರನೊಯ್ದು ಒಲೆಯೊಳಗಿಕ್ಕಿ' ಎಂದು ನಿಜದ ಗಂಡನ ಹುಡುಕಿ ಹೊರಟವಳು ಅಕ್ಕ. ಅವಳಿಗೆ ಗಿಳಿಯ ಮಾತಾಗಲಿ, ಶಿವೆಯ .ಮಾತಾಗಲಿ ಕೇಳುವುದೇ ಇಲ್ಲ. ಅವಳು ಹುಡುಕಿದ ಚೆನ್ನಮಲ್ಲಿಕಾರ್ಜುನ ಗಂಗೆ–ಗೌರಿಯ ತುಂಬು ಸಂಸಾರವಂದಿಗ. ತ್ಯಜಿಸಿ ಬರಲಾರ ತನ್ನ ಹಟ್ಟಿ. ಆದರೆ ಅಕ್ಕನ ಪ್ರೀತಿ ಗಟ್ಟಿ, ಅಗ್ನಿ ಕುಂಡವೇ ಕರಗಿ ಕೈಲಾಸವಾಯಿತೇ? ಪ್ರಶ್ನಿಸುತ್ತಾಳೆ. ಅವಳು ಬಾಣಲೆಯಿಂದ ಎದ್ದು ಬೆಂಕಿಗೆ ಬಿದ್ದಂತೆ ಕಾಣುತ್ತದೆ ಸಂಸಾರಿಗೆ.

ಅವಳ ಈ ನಿರ್ಧಾರವನ್ನು ಸಂಸಾರಿಯೊಬ್ಬಳು ಪೆದ್ದು ಎನ್ನುವ ಬದಲು ನಗುತ್ತಿದ್ದಾಳೆ, ಅವಳದೋ ಬುದ್ಧ ನಗು [ಬೇಂದ್ರೆ ಬುದ್ಧ]. ಈ ಸಂಸಾರಿಗೆ ಇಹದ ಹಾಡೇ ಇಷ್ಟವಾಗಿ ಪರದ ಚಿಂತೆ ಇಲ್ಲ ಏಕೆಂದರೆ ಸಂಸಾರಿ ಸಮಸ್ಯೆಗಳೇ ಬೇರೆ ಎನ್ನುತ್ತಾಳೆ.

ಆಧ್ಯಾತ್ಮಿಕ ಸೆಳೆತವಿದ್ದರೂ 'ಅನು-ಭವಿ'ಗೆ ನಿತ್ಯ ಸಂಸಾರದಲ್ಲಿಯೇ ಮುಕ್ತಿ ಎನ್ನುತ್ತಾಳೆ. 'ಪುರುಷ-ಪ್ರಕೃತಿ-ಮಾಯೆ' ಎಂಬುವನ್ನು ಬೇರೆ ನೆಲೆಯಲ್ಲಿಯೇ ಚರ್ಚಿಸುವ ಈ ಕವನದಲ್ಲಿ ಸಂಸಾರಿಯೊಬ್ಬಳು ಮನೆ ತುಂಬ ಮಕ್ಕಳಿವೆ ಬಿಟ್ಟು ಬರಲಾರೆ ನಿನ್ನ ಸೆಳವಿಗೆ ಎನ್ನುತ್ತಾಳೆ. ಅವಳ ತಪಸ್ಸಿನ ವಿಧ ಬೇರೆಯಾಗಿದೆ. ಕೂಸುಗಳ ಪ್ರಶ್ನೆಗೆ ಈಶನು ಹೆದರುತ್ತಾ ವ್ಯಾಘ್ರಚರ್ಮವನ್ನು ಧರಿಸಿದ್ದಾನೆ. ಇಂತ ತಪಸ್ಸಿನಲ್ಲಿ ಸಾಧಿಸುವುದೇ ನಿಜ ತಪಸ್ಸು ಎಂದು ಭಾವಿಸುತ್ತಾಳೆ.

ಹೀಗೆ ಅವಳ ತಪೋಭೂಮಿಯೇ ಬೇರೆ ಅವಳ ಭಕ್ತಿ ಮಾರ್ಗವೇ ಬೇರೆ. ಎಲ್ಲರ ಬೇಕು ಬೇಡಗಳನ್ನು ಕಾಲಕಾಲಕ್ಕೆ ಸರಿಯಾಗಿ ಅಣಿಗೊಳಿಸಬೇಕು. ಆದರೂ ಈಕೆಗೆ ವನದ ಬಯಕೆ ಇಲ್ಲವೆಂದೇನೂ ಇಲ್ಲ. ವನದ ಕರೆಯನ್ನು ಅವಳು ತಾಳಿಕೊಳ್ಳಲೇಬೇಕು. ಈ ತಪದಲ್ಲಿರುವಾಗ ಅಕ್ಕನ ನೆನಪು ಎಷ್ಟಾದರೂ ನಿಲ್ಲುವುದಿಲ್ಲ. ಅದಕ್ಕಾಗಿ ೪ ಕದಳಿ ಸಸಿಗಳ ಬೆಳೆಸಿಕೊಂಡಿದ್ದಾಳೆ. ಮನೆಯ ಹಿಂದಿನ ಹಿತ್ತಲಿನಲ್ಲಿ ಅಕ್ಕ ಹೊಕ್ಕ ಕದಳಿಬನದ ನೆನಪಿಗಾಗಿ. ಹೀಗೆ ಮನೆಯಲ್ಲಿ ತಪಸ್ಸಿಗೆ ನಿಂತ ಗೃಹಿಣಿಯ ಮಾತನ್ನು ಆಲಿಸಿದರೆ ಕುಟುಂಬ ಪೋಷಿಸುವ ಹೆಣ್ಣಿನ ಜವಾಬ್ದಾರಿಯು, ಅವಳ ತಪಸ್ಸಾಗಿದೆ ಎಂಬುದು ಸೂಚಿತವಾಗಿದೆ. ಮುಕ್ತಿಗಾಗಿ ಅವಳು ಈ ತಪಸ್ಸಿಗೆ ಬಂಧಿಯಾಗಿದ್ದಾಳೆ. ಪುರುಷ ಮುಕ್ತಿಗಾಗಿ ಸಂಸಾರ ತ್ಯಜಿಸಿ ನಡೆಯುತ್ತಾನೆ, ಇದರ ಎದುರಿಗೆ ಹೆಣ್ಣಿನ ಮುಕ್ತಿಯ ನೆಲೆ ಮತ್ತು ಸ್ವರೂಪವೇ ಬೇರೆ ಆಗಿದೆ. ಇದು ಹೆಣ್ಣಿನ ವಿಶಿಷ್ಟತೆಯ ಒಂದಂಶವೂ ಆಗಿದೆ.

ಸಂಸಾರವನ್ನು ಪೋಷಿಸುವ ಜವಾಬ್ದಾರಿ ತಾನೇ ಸ್ವತಃ ಆಯ್ಕೆ ಮಾಡಿಕೊಂಡ ಹೆಣ್ಣಿನ ನಿರ್ಧಾರವನ್ನು ನಿಯಮವಾಗಿಸಿ ಆಕೆಯನ್ನು ಅಡುಗೆ ಮನೆಯಲ್ಲಿಯೇ ಬಂಧಿಸಿದ್ದು ದುರಂತವೇ ಸರಿ.

ಹೆಣ್ಣಿನ ಭಾವನೆಗಳು ಗಂಡಿಗೆ ಅರ್ಥವಾಗುವುದೇ ಇಲ್ಲ. ಇದಕ್ಕೆ ಮುಖ್ಯ ಕಾರಣ ಅವರಿಬ್ಬರ ನಡುವೆ ಇರುವ ಭಾಷೆಯ ಅಸಾಮರ್ಥ್ಯ. ಭಾಷೆಯು ಸೋಲುವ ವಿಪರ್ಯಾಸವನ್ನು 'ಆಕೆ ಆತ ಭಾಷೆ' ಎಂಬ ಕವನವು ಚರ್ಚಿಸುತ್ತದೆ. ಭಾಷೆಯ ಉದ್ದೇಶ ಇಬ್ಬರ ನಡುವೆ ಸಂಪರ್ಕ ಕಲ್ಪಿಸಿ ಅವರ ಭಾವನೆ, ಅನಿಸಿಕೆ, ಅಭಿಪ್ರಾಯಗಳನ್ನು ಪರಸ್ಪರ ಸಂವಹನಗೊಳಿಸುವುದು. ಆದರೆ ಹೆಣ್ಣು ಗಂಡಿನ ನಡುವೆ ಭಾಷೆ ತನ್ನ ಮೂಲ ಉದ್ದೇಶದಲ್ಲಿಯೇ ಸೋಲುತ್ತದೆ. ಹೆಣ್ಣು ತನ್ನ ವಿಚಾರಗಳನ್ನು, ಭಾವನೆಗಳನ್ನು ಅಭಿವ್ಯಕ್ತಿಸಿಕೊಳ್ಳುವುದರಲ್ಲಿಯೇ ನಿಷೇಧವಿರುವ ಸಮಾಜದಲ್ಲಿ, ಅವಳ ಭಾಷೆಯೂ ತೊಡಕಿನದಾಗುತ್ತದೆ.

ಹೆಣ್ಣು ಕೇವಲ ಭೋಗದ ವಸ್ತು ಎಂದು ತಿಳಿದ ಗಂಡು ಈ ತೊಡಕಿನ, ರೂಪಕಾತ್ಮಕ ಭಾಷೆಯನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದಿಲ್ಲ. ಹೀಗಾಗಿ ಅವರಿಬ್ಬರ ನಡುವೆ ಸಂವಹನ ಸಾಧ್ಯವಾಗದೆ ಅಂತರವೇರ್ಪಡುತ್ತದೆ. ಒಬ್ಬೊಬ್ಬರು ತಮಗೆ ಬೇಕಾದಂತೆ ಶಬ್ದಕ್ಕೆ ಅರ್ಥ ಕೊಟ್ಟುಕೊಳ್ಳುತ್ತಾರೆ.

ಆಶ್ಚರ್ಯವೆಂದರೆ ಅವಳು ಅತ್ತರೆ ಅವನು ನಗುತ್ತಾನೆ. ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವ ಇವರ ವಿಚಾರಗಳು ಭಾಷೆಯಲ್ಲಿ ಕೂಡಬೇಕು. ಆದರೆ ಇಲ್ಲಿ ಆ ಭಾಷೆಯು ಸೋಲುತ್ತದೆ

ಮೊನ್ನೆ ಅವನೆಂದದ್ದು ಕಿಟಿಕಿ ಎಂದು
ಅವಳು ತಿಳಕೊಂಡಂತೆ ಬಾಗಿಲು ಅಲ್ಲ!

ಸ್ವಾತಂತ್ರ್ಯ ಬಯಸುತ್ತಿರುವ ಅಡುಗೆ ಮನೆ ಹುಡುಗಿಗೆ ಕಿಟಕಿಯಷ್ಟು ಗಾಳಿ ಬೆಳಕನ್ನು ಅಂದರೆ ಸಣ್ಣ ಸ್ವಾತಂತ್ರವನ್ನು ಕೊಡಲು ಸಿದ್ಧ ಅವನು. ಆದರೆ ಅವಳಿಗೆ ಬಾಗಿಲಿನಷ್ಟು ಸ್ವಾತಂತ್ರ್ಯ ಬೇಕು. ಅವನು ಗೋಡೆ ಎಂದರೆ ಇವಳು ಬಯಲು ಎಂದುಕೊಳ್ಳುತ್ತಾಳೆ. ಸ್ವಾತಂತ್ರ್ಯ ಮತ್ತು ಬಂಧನದ ಮುಖಾಮುಖಿ ಇಲ್ಲಿ ಭಾಷೆಯಲ್ಲಿಯೇ ನಡೆಯುತ್ತದೆ.

ಮನೆಯೊಳಗೆ ಇರುವ ಮನೆಯೊಡತಿಯಾಗಿ ಅವಳು ಮಾಡಿದ್ದು ಒಂದಾದರೆ ಅವನು ಉಂಡದ್ದು ಬೇರೆ ಎಂದು. ಏಕೆ? ಶಬ್ದವನ್ನು ಸರಿಯಾಗಿ ಸಂವಹಿಸಲೂ ಆಗುತ್ತಿಲ್ಲ. ಭಾಷೆಯಲ್ಲಿ ತೊಂದರೆ ಇದೆಯೇ ಅಥವಾ ಅಲ್ಲಿ ಗಾಳಿ ಇರಲಿಲ್ಲವೆ. ನೀರಿನಲ್ಲಿ ನುಡಿದಂತೆ ಎಲ್ಲವೂ ಬೇರೆ ಕೇಳುತ್ತದೆಯಲ್ಲ. ಈ ಅಪಾರ್ಥಗಳಲ್ಲಿ ಎದ್ದ ಆತ್ಮಹತ್ಯೆಯ ಮಾತು ಕಡೆಗೆ ತಮಾಷೆ! ಎಂಬಲ್ಲಿ ಮುಕ್ತಾಯವಾಗುತ್ತದೆ.

ಹೀಗೆ ಜಾರಿಹೋಗುವ ಭಾಷೆಯ (ಪದಾರ್ಥಗಳ) ಸ್ವರೂಪವನ್ನು ಮೀನುಬೆನ್ನಿನ ನಯಕ್ಕೆ ಹೋಲಿಸಿ ಅವರಿಬ್ಬರ ವಾಗರ್ಥದ ಮೋಜನ್ನು ತಿಳಿಸುತ್ತದೆ. ಕವನ ಕಡೆಗೂ ಅವರಿಬ್ಬರ ನಡುವೆ ಗಾಳಿಯಿಲ್ಲ, ಒಬ್ಬರ ಭಾಷೆ ಇನ್ನೊಬ್ಬರಿಗೂ ಅರ್ಥವಾಗುವುದಿಲ್ಲ ಎಂಬ ನೆಲೆಯಲ್ಲಿಯೇ ಕೊನೆಯಾಗುತ್ತದೆ. ಹೀಗೆ ಅವರಿಬ್ಬರು ಒಬ್ಬರ ಭಾವನೆಗಳಿಗೆ ಮತ್ತೊಬ್ಬರು ಸ್ಪಂದಿಸದೆ ಅನ್ಯರಾಗಿ, ಅಸ್ಪೃಶ್ಯರಾಗಿ ಉಳಿದುಬಿಡುತ್ತಾರೆ.

ಪ್ರೀತಿಗಾಗಿ ಹಂಬಲಿಸುವ ಮತ್ತು ಪ್ರೀತಿಯಲ್ಲಿ ನೋವುಂಡ ಕವಿತೆಗಳನ್ನು ಕಾಣಬಹುದು. 'ದೂತೆಯೊಡನೆ ಮಾತು', 'ಮಾಡು ಹೊದೆಸುವ ಹಾಡು', 'ಗೆಳತಿಯ ಗುಟ್ಟು', 'ಬೆರಣಿ ತಟ್ಟುವ ಹುಡುಗಿ ಮತ್ತು ಚಂದ್ರಾಮದೇವರು' ಈ ಬಗೆಯ ಕವಿತೆಗಳಾಗಿವೆ. ಮಾಡು ಹೊದಿಸುವ ಹಾಡು ಮತ್ತು ಬೆರಣಿ ತಟ್ಟುವ ಹುಡುಗಿ ಮತ್ತು ಚಂದ್ರಾಮ ದೇವರು ಈ ಕವನಗಳಲ್ಲಿ ಆರ್ಥಿಕ ಅಸಮಾನತೆಯು ಕೂಡ ಹೆಣ್ಣಿನ ಭಾವನೆಗಳೊಂದಿಗೆ ಆಟವಾಡುವ ಸಂಗತಿಯೂ ಬೆರತಿರುವುದು ಕಂಡುಬರುತ್ತದೆ.

ಭಾವಜೀವಿಯಾಗಿರುವ ಹೆಣ್ಣು ಮಗಳೊಬ್ಬಳು ಒಂಟಿಯಾಗಿ ಹಾಡುತ್ತಿರುತ್ತಾಳೆ.

ನನ್ನದೋ
ಮುಳಿ ಹುಲ್ಲಿನ ಮಾಡು
ಮಣ್ಣು ನೆಲ ಬಾವಿ ಜಲ
ಸಂವತ್ಸರಕ್ಕೊಮ್ಮೆ ಕುಸಿಯುವ ಮಾಡಿಗೆ
ಹೊಸ ಹುಲ್ಲು ಹೊದೆಸಬೇಕು[೮]

ಅವಳು ವಾಸಿಸುತ್ತಿರುವ ಮನೆಯ ಮಾಡು ಮುಳಿಹುಲ್ಲಿನದು. ಅದು ಸಂವತ್ಸರಕ್ಕೊಮ್ಮೆ ಕುಸಿದು ಸವಾಲು ಹೂಡುತ್ತದೆ. ಅವಳು ಪ್ರತಿ ಸಂವತ್ಸರಕ್ಕೊಮ್ಮೆ ಮಾಡು ಹತ್ತಿ ಹೊಸ ಹುಲ್ಲನ್ನು ಸೂಡಿ, ಅಲ್ಲಿನ ಕಸವನ್ನು ಕೊಡಹಿ ಹಾಡುತ್ತಾಳೆ. ಆಕೆ ಹಾಡುವುದು ಮಾಡು ಕುಸಿಯಿತು ಎಂದಲ್ಲ, ಅವಳ ಹಾಡಿಗೂ, ಕುಸಿಯುವ ಆ ಮಾಡಿಗೂ ಯಾವ ಸಂಬಂಧವೂ ಇಲ್ಲ! ಅವಳು ಹಾಡುವುದು ಹೊಸ ಕನಸ ಕಾಣುವುದಕ್ಕೆ, ಹೊಸ ಜೀವನಕ್ಕೆ, ಹಾಗಾಗಿ ಅವಳದು ಸದಾ ಚೈತನ್ಯಪೂರಿತ ಬದುಕು. ರಾತ್ರಿ ಸುಡುವ ಸೂರ್ಯನಿಂದ ತಂಪಾಗಿಸುವ ಚಂದ್ರನ ರಾಜ್ಯದಲ್ಲಿ, ನಕ್ಷತ್ರ ಲೋಕ ಬೆಳಗುವಾಗ, ಆಕೆ ಆ ಮಾಡಿನಡಿ ಕಾಲು ನೀಡಿ ಒಬ್ಬಳೇ ಹಾಡುತ್ತಿರುತ್ತಾಳೆ. ಆ ಗುನುಗು ಕ್ಷೀರ ಪಥದಲ್ಲಿ ನಡೆವ ನಂದಕುಮಾರನಿಗೆ [ಕೃಷ್ಣ] ಕೇಳಿಸುತ್ತದೆ. ಆ ರಾಗಕ್ಕೆ ಮನಸೋತ ಅವನು, ಗುನುಗಿನ ದಿಸೆಯರಸಿ ಬರುತ್ತಾನೆ. ಬಂದವ ಈ ಹುಲ್ಲು ಮಾಡಿನ ಬಳಿಯೂ ಸುಳಿಯದೆ ಬಂಗಲೆಗಳ ಕಡೆ ನಡೆಯುತ್ತಾನೆ.

ಆ ನಂದಕುಮಾರನಿಗೂ ಈ ಹುಲ್ಲು ಮಾಡಿನ ಆರ್ದ್ರ ಪ್ರೀತಿಯ ಹಾಡು ಬೇಕಿಲ್ಲ. ಈ ಕಟು ಸತ್ಯದ ಅರಿವಿರುವ ಹುಡುಗಿ ಅದಕ್ಕಾಗಿ ದುಃಖಿಸದೆ, ಮಾಡು ಕುಸಿದಾಗ ಹೊಸಹುಲ್ಲು ಹೊದೆಸುವಂತೆ, ತನ್ನ ಜೀವನದಲ್ಲಿ, ಜೀವ ಪ್ರೀತಿಯನ್ನು ಉಳಿಸುವ ಹಳೇ ಹಾಡನ್ನು ಹೊಸದಾಗಿಯೇ ಹಾಡುತ್ತಾಳೆ. ಹಾಡು ಹಳೆಯದಾದರೇನು ಭಾವ ನವನವೀನ ಎಂಬಂತೆ.

ಮುಳಿ ಹುಲ್ಲಿನ ಮಾಡಿನಡಿ ವಾಸಿಸುವ ಅವಳ ಆಸ್ತಿ ಎಂದರೆ 'ಪ್ರೀತಿ ತುಂಬಿದ ಮಣ್ಣುಗಡಿಗೆ ಅವಳ ಗುಡಿಸಲು ಕೂಡ ಇರುವುದು ಮಣ್ಣು ನೆಲದಲ್ಲಿ. ಆ ನೆಲದ ಬಾವಿಯಲ್ಲಿ ತುಂಬಿ ತುಳುಕುವ ಜಲವು ಇದೆ. ಅಂದರೆ ಹುಡುಗಿ ಯಾವಾಗಲೂ ಭಾವನೆಗಳ ಆರ್ದ್ರತೆ, ಮತ್ತು ಪ್ರೀತಿಯ ಪಸೆಯಲ್ಲಿಯೇ ಬದುಕುವವಳು. ಭಾವನೆಗಳ ಮನೆಯಲ್ಲಿ ವಾಸಿಸುವ ಅವಳಿಗೆ ಪ್ರತಿ ಸಂವತ್ಸರಕ್ಕೂ ಕುಸಿಯುವ ಮಾಡು ಸವಾಲು ನೀಡುತ್ತದೆ.

ಇಲ್ಲಿ ಮಾಡು, ಹುಲ್ಲು ಮಾಡು, ಪ್ರತಿ ಸಂವತ್ಸರಕ್ಕೊಮ್ಮೆ ಕುಸಿಯುವ ಮಾಡು, ಆಕೆಯ ಬಡತನವನ್ನು ಪ್ರತಿನಿಧಿಸುವಂತೆಯೇ ಆಕೆಯ ಕನಸನ್ನು ಸಂಕೇತಿಸುತ್ತದೆ. ಮಾಡು ಮನೆಗೆ ಹೇಗೆ

ಆಧಾರವೋ ಅದೇ ರೀತಿಯಲ್ಲಿ ಕನಸು ಅವಳ ಬದುಕಿಗೆ ಆಧಾರ. ಮಾಡು ಸಂವತ್ಸರಕ್ಕೊಮ್ಮೆ ಕುಸಿಯುವಂತೆ, ಅವಳ ಕನಸು ಆಗಾಗ ಭಗ್ನಗೊಳ್ಳುತ್ತದೆ. ಮಾಡಿನ ಕಸ ಕೊಡಹಿ, ಹುಲ್ಲು ಹೊದಿಸಿ ಮನೆಯಲ್ಲಿರುವಂತೆ, ಭಗ್ನಗೊಂಡ ಕನಸುಗಳನ್ನು ಮನದಿಂದ ಕೊಡವಿ, ಹೊಸ ಕನಸುಗಳನ್ನು ಅವಳು ನೇಯುವಳು. ಅವಳ ಹಾಡಿಗೆ ಮಾಡು ಬೇಕೇಬೇಕು. ಅದರ ಎರಡೂ ಅರ್ಥದಲ್ಲಿಯೂ. ಆ ಹಾಡಿಗೆ ಎಂಥ ಶಕ್ತಿಯಿದೆ, ಜೀವಂತಿಕೆ ಇದೆ ಎಂದರೆ, ನಂದಕುಮಾರನು ಕ್ಷೀರಪಥದಿಂದ ಇಳಿದು ಹಾಡಿನ ದಿಸೆಯರಸಿ ಬರುವಷ್ಟು.

ಬೆರಣಿ ತಟ್ಟುವ ಹುಡುಗಿ ಮತ್ತು ಚಂದ್ರಾಮದೇವರು ಎಂಬ ಕವಿತೆಯಲ್ಲಿ ಕಾಯ ಕಷ್ಟದ ಬೆರಣಿ ತಟ್ಟುವ ಹುಡುಗಿಯೊಬ್ಬಳಿಗೆ ಬರುವ ಎದೆನೋವಿಗೆ ಯಾರ ಬಳಿಯೂ ಮದ್ದಿಲ್ಲ. ಮದ್ದು ಇರುವುದು ಚಂದ್ರನಲ್ಲಿ, ಚಂದ್ರಾಮದೇವರ ಬಳಿ ಮಾತ್ರ. ಆದರೆ ಅವನಿಗೆ ಸಲ್ಲದ ಹುಡುಗಿ ಇವಳು. ರಾತ್ರಿ ಆಗಸದಲ್ಲಿ ತಾರೆ ನೀಹಾರೆ ರೋಹಿಣಿಯರ ಜೊತೆ ವೈಭವದಿಂದ ವಿಹಾರ ಹೊರಡುವವನಿಗೆ ಚಿಮಣಿ ದೀಪದ ಈ ವಿರಹಿಣಿ ಕಾಣಿಸುವುದಿಲ್ಲ. ಒಂದು ಹುಣ್ಣಿಮೆ ಹಗಲು ಬೆರಣಿ ತಟ್ಟುತ್ತಿರಲು ಆ ಬೆರಣಿ ಬದಲು ಚಂದ್ರಾಮ ಕಾಣಿಸಿದ

. . ಕಾಣ
ಕಾಣುತ್ತಿದ್ದಂತೆ ಬೆಳ್ಳನಾಗಸವೇರಿದ,
ಬೆಳ್ಳನಾಗಸವೇರಿ ಮರೆನಿಂತ ಚಂದ್ರಾಮ
ಕಬ್ಬು ಜಲ್ಲೆಯನಿಳಿಸಿ ಕರೆದ-ಬಾ ಹುಡುಗಿ
ಮದ್ದುಂಟು ಎದೆನೋವಿಗೆ, ಎಲ್ಲ
ಮದ್ದಲ್ಲ ಎದೆನೋವಿಗೆ.[6]

ಅವನನ್ನು ಕಂಡು ಹರ್ಷಿತಳಾದ ತರುಣಿ ಸಂತೋಷದಿಂದ, ತನ್ನ ನೋವಿನ ಎದೆಯನ್ನು ತಬ್ಬಿ ಕಬ್ಬು ಜಲ್ಲೆಯನೇರಿ, ನಿಂತಲ್ಲೇ ನೀನು ನಿಂತಿರು ಎನ್ನುತ್ತಾ, ಚಂದ್ರಮನುಪ್ಪರಿಗೆಗೆ ಹೋದರೆ, ನಿಂತಿದ್ದ ಚಂದ್ರಾಮ ದೇವರು ಉರುಟುರುಟು ಬೆರಣಿಯಾಗಿ ಚೆದುರಿ ನೆಲದಲ್ಲಿ ಚೆಲ್ಲಿಹೋದ! ಹುಡುಗಿಯ ದುಃಖ ಹೇಳಲಸದಳ. ಅವಳ ಕನಸು ಒಡೆದದ್ದು ಯಾರಿಗೂ ತಿಳಿಯಲಿಲ್ಲ.

ಯಾರಿಗೂ ತಿಳಿಯದ ಅವಳ ದುಃಖವನ್ನು ಗಂಟಲಲ್ಲೇ ಒತ್ತಿ ಕೆಳಗಿಳಿದಳು. ಆ ಚೂರುಗಳನ್ನು ಸೇರಿಸಿ ಹೊತ್ತು ತಂದು ಒಲೆಗೆ ಹಾಕಿದಳು. ನೀಲಿ ಜ್ವಾಲೆಯಲ್ಲಿ ಉರಿದ ಚೂರುಗಳು ಬೂದಿಯಾದವು. ಆ ಬೂದಿಯನ್ನು ಹಣೆಗೆ ವಿಭೂತಿಯಾಗಿ ಧರಿಸಿದಳು. ಆದರೂ ಅವಳು ಬೈರಾಗಿಯಲ್ಲ, ವಿರಹಿಣಿ. ಅವಳು ಬೆರಣಿ ತಟ್ಟುತಾ ಹಾಡುತ್ತಾಳೆ.

ಎದೆನೋವಿನಾ ಮದ್ದು ಹಣೆಗಿರಿಸಿಕೊಂಡೆನೋ

ಕರಿಯ ಬೇಡಿರಿ ನನ್ನ ವೈರಾಗಿ.[೧೦]

ಎಂದು ಅವಳ ಸುತ್ತಾ ಯಾರಿಲ್ಲದಿದ್ದರೂ ಹಾಡಿಕೊಳ್ಳುತ್ತಾಳೆ. [ಹುಣ್ಣಿಮೆ ಚಂದಿರನ ಹೆಣ ಬಂತು ಮುಗಿಲಾಗೆ ತೇಲುತಾ ಹಗಲ ಎಂಬ ಬೇಂದ್ರೆಯವರ ಸಾಲಿನಂತೆ] ಹಗಲಿನಲ್ಲಿ ಬಂದ ಚಂದ್ರನ ಹೆಣವನ್ನು ಸುಟ್ಟು ಅವನ ಪ್ರೀತಿಯಲ್ಲಿ ವಿಭೂತಿಯಾಗಿ ಧರಿಸಿದ ವಿರಹಿಣಿ ಈಕೆ. ರಾತ್ರಿ ರಾಜ್ಯದಲ್ಲಿ ವೈಭವದಿಂದ ಹೊರಬಂದ ಚಂದ್ರಾಮ ದೇವರಿಗೆ ಇವಳು ಕಾಣುವುದಿಲ್ಲ! ಏಕೆಂದರೆ 'ಚಂದ್ರಾಮ ದೇವರಿಗೂ ಬೇಕು ಬಣ್ಣದ ನಡಿಗೆ'! ಬೆವರು ಸೆಗಣಿ ವಾಸನೆಯ ಈ ಹುಡುಗಿ ಅವನಿಗೆ ಸಲ್ಲುವವಳಲ್ಲ.

ಹೀಗೆ ಪ್ರೇಮದಲ್ಲಿ ವಂಚನೆಯನ್ನುಂಡ ಹೆಣ್ಣೊಬ್ಬಳ ನೋವಿಗೆ ಮತ್ತೊಬ್ಬಳು ಮದ್ದು ನೀಡಲು ಪ್ರಯತ್ನಿಸುವ ಚಿತ್ರ 'ಗೆಳತಿಯ ಗುಟ್ಟು' ಎಂಬ ಕವನದಲ್ಲಿ ಕಾಣಬಹುದು.

"ಆದರೂ.........
ಪ್ರಿಯಕರನೆ ಇಲ್ಲದ ಬದುಕು ಬದುಕೇನು?"[೧೧]

ಎಂದ ತನ್ನ ಕೆಟ್ಟಗೆಳತಿಯ ಗುಟ್ಟನ್ನು ತನ್ನ ಅಜ್ಜಿಗೆ ಮೊಮ್ಮಗಳೊಬ್ಬಳು ಹೇಳುತ್ತಿದ್ದಾಳೆ. ಕೊಳಲ ಮೋಡಿಯಲ್ಲಿ ಸೆಳೆಯುವ ಪೋಲಿ ವನಮಾಲಿಯ ಸಂಗ ಬೇಡ, ನಂಬಬೇಡ ಎಂದು ಛೀಮಾರಿ ಹಾಕಿ ಬೋಧಿಸುತ್ತಾಳೆ.

ತರವಲ್ಲ ಹುಡುಗೀ, ಈತ ಭಾರ ಘಟಿಂಗ
ಓಡಿಸುವವನು ಬೇಡ ಮಾನಭಂಗ.[೧೨]

ಅವಳ ಗೆಳತಿಯ ಈ ಗುಟ್ಟಿಗೆ ಕುಸಿಯುತ್ತಿರುವ ಅಜ್ಜಿಗೆ, ಅವಳು ಮತ್ತಷ್ಟು ಗುಟ್ಟುಗಳನ್ನು ಬಿಚ್ಚಿಡುತ್ತಾಳೆ.

ಮನದ ಬಾಗಿಲ ತೆರೆದು ಕುಳಿತಿದ್ದಾಗೊಮ್ಮೆ
ಹೇಳ ಕೇಳದೆ ಸೀದ ಒಳಬಂದವನಂತೆ
....
ಊರ ನಾರಿಯರೆಲ್ಲ ಹೆಂಡಿರಂತೆ![೧೩]

ಅವಳ ಈ ಮಾತುಗಳನ್ನು ಬಾಯಿ ಕಳೆದು ಕೇಳ್ಳುತ್ತಾ ಕುಳಿತ ಅಜ್ಜಿಗೆ, ತನ್ನ ಜೀವನದ ಕೆಲವು ಸಂತಸ ಕ್ಷಣಗಳನ್ನು ಕಳೆದ ಗೆಳತಿ, ಈಗ ಅವನು ಬರಲಿಲ್ಲ ಎಂದು ಕೊರಗುತ್ತಾ ಇದ್ದಾಳೆ. ಇದು ಸರಿಯೇ? ಎಂದು ಕೇಳುತ್ತಾಳೆ.ಅವಳ ದುಃಖದಲ್ಲಿ ತಾನು ಭಾಗಿಯಾಗಿ.

ಈ ವಂಚನೆಯಿಂದ ಆದ ಗಾಯದ ಗುರುತನ್ನು ಮುಚ್ಚಿಡಲು ಗೆಳತಿಗೆ ಮದ್ದು ಬೇಕು, ನಿನ್ನಲ್ಲಿ ಉಂಟೇ? ಎಂದು ಅಜ್ಜಿಯ ಮೊಮ್ಮಗಳು ಕೇಳುತ್ತಾಳೆ. ಇಲ್ಲಿ ಅಜ್ಜಿಯ ಪಾಲನೆಯಲ್ಲಿ ಬೆಳೆದ ಮೊಮ್ಮಗಳು, ಅವಳ ಅಜ್ಜಿ ಬೋಧಿಸಿದ ಲೋಕ ನಿಯಮದ ವಿರುದ್ಧವಾಗಿ ನಡೆವ, ತನ್ನ ಗೆಳತಿ ಕೆಟ್ಟವಳೆಂದರೂ, ಆ ಕೆಟ್ಟ ಗೆಳತಿಯ ನೋವಿಗೆ ಮಿಡಿಯುತ್ತಾಳೆ. ಗೆಳತಿಯ ನೋವಿಗೆ ಮದ್ದು ನೀಡುವ ಹೃದಯವಂತಿಕೆಯನ್ನು ಕಾಣಬಹುದು. ಅಜ್ಜಿಯ ಮೊಮ್ಮಗಳಾದರೂ ಅವಳಲ್ಲಿರುವ ಚಿಕಿತ್ಸಕ ದನಿಯಲ್ಲಿ ಸ್ತ್ರೀತ್ವವನ್ನು ಕಾಣಬಹುದು.

ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣಿನ ಆಯ್ಕೆಗೆ ಸ್ವಾತಂತ್ರ್ಯ ನೀಡಿರುವ 'ಸ್ವಯಂವರ' ಎಂಬ ನಾಟಕವನ್ನು "ಸ್ವಯಂವರ ಗೀತೆ" ಎಂಬ ಪದ್ಯವೂ ಬಯಲಿಗೆಳೆಯುತ್ತದೆ. ಸ್ವಯಂವರಕ್ಕೆ ಬಂದ ರಾಜಕುಮಾರರು ರಾಜನ ಆಯ್ಕೆ, ರಾಜಕುಮಾರಿಯ ಆಯ್ಕೆಯಾಗದೇ ಉಳಿಯುತ್ತಾರೆ. ತಂದೆಯ ಆಯ್ಕೆಯ ಅವರೆಲ್ಲ ಅವಳಿಗೆ ಕಾಣುವುದು ಹೀಗೆ,

ಇವರೆಲ್ಲ ಬೇಟೆಯವರು – ನನ್ನ
ಚಿಗರೆ ಮಾಡುವರು
ಇವರೆಲ್ಲ ಕೋಟೆಯವರು – ನನ್ನ
ಪಹರೆ ಮಾಡುವರು
ಸ್ವಯಂವರಿಸುವ ಸ್ವಾತಂತ್ರದ
ನಾಟಕವೇ ಸಾಕಿನ್ನು
ಅಪ್ರತಿಮ ಸೂಕ್ಷ್ಮಕ್ಕೆ ಗದ್ದಲದ ನಂಟೇ?
ನನ್ನಾಯ್ಕೆ ಸಂತೆಲಲ್ಲಲ್ಲ – ಅಪ್ಪಾ
ನಾ ನನ್ನ ತಾಯಿಯಂತಲ್ಲ.[೧೪]

ಅವಳ ಇಚ್ಛೆ ಪ್ರಟಿಸಿದಕ್ಕಾಗಿ ಅವಳ ತಂದೆ ಅವಳಿಗೆ ಉಗ್ರ ಶಿಕ್ಷೆಯನ್ನು ನೀಡುತ್ತಾನೆ. ಅವಳನ್ನು ದಟ್ಟ ಅರಣ್ಯದಲ್ಲಿ ದೂಡಿ ಬರುತ್ತಾನೆ. ಅವಳಿಗೆ ಮನಬಂದ ವರನನ್ನು ಆರಿಸಿಕೊಳ್ಳಲು.

ಕಡೆಗೂ ಸಾವಿತ್ರಿ ತನ್ನ ವರನನ್ನು ಆಯ್ಕೆ ಮಾಡಿಕೊಳ್ಳುತ್ತಾಳೆ. ಆದರೆ ಅವನಿಗೆ ಕೇವಲ ಒಂದು ರಾತ್ರಿಯ ಆಯುಷ್ಯ ಉಳಿದಿರುತ್ತದೆ. ಆದರೂ ಅವನನ್ನು ಅವಳು ವರಿಸುತ್ತಾಳೆ. ಒಂದು ದಿನದ ನಿಜ ಸ್ವಾತಂತ್ರ್ಯದ ಸಂತೋಷ ಮತ್ತು ದುಃಖದಲ್ಲಿ.

೨. ಸ್ತ್ರೀ ವಿಶಿಷ್ಟತೆಯನ್ನು ಸಾರುವ ಕವನಗಳು

ಸ್ತ್ರೀ ವಿಶಿಷ್ಟತೆಯ ಗುಣಗಳು ಅವಳಿಗೆ ಬಳುವಳಿಯಾಗಿ ಬಂದಿರುವುದು ಅವಳದೇ ರೂಪವಾದ ಅವಳ ತಾಯಿ–ಅಜ್ಜಿಯರಿಂದ. ಇದು ಸ್ತ್ರೀ ಅನನ್ಯತೆಯ ಮತ್ತೊಂದು ಲಕ್ಷಣ. "ಗಂಡಿಗಾಗಿ ಸ್ಪರ್ಧಿಸುವ

ಅವನ ಸುತ್ತ ಗಿರಕಿ ಹೊಡೆಯುವ ಸ್ಥಿತಿಗೆ ಎದುರಾಗಿ ಸ್ತ್ರೀಯರ ನಡುವಿನ ಪರಸ್ಪರ ಸಂಬಂಧಗಳು ತುಂಬ ಸೌಹಾರ್ದಯುತವಾಗಿ ಮತ್ತು ಅಪ್ಯಾಯಮಾನವಾಗಿ ಮೂಡುವುದು ಸಾಧ್ಯ ಎಂದು ಸ್ತ್ರೀವಾದಿ ಚಿಂತನೆ ತೋರಿಸಿಕೊಟ್ಟಿದೆ. ತಾಯಿ–ಮಗಳ ಸಂಬಂಧದ ನಂಟು. ಅಜ್ಜಿ–ತಾಯಿ–ಮಗಳು–ಮೊಮ್ಮಗಳು ಸಂಬಂಧದಲ್ಲಿರುವ ಅಜ್ಜಿ–ತಾಯಿ–ಮಗಳು–ಮೊಮ್ಮಗಳು ಸಂಬಂಧದಲ್ಲಿರುವ ಪರಂಪರೆಯ ಮುಂದುವರಿಕೆ. ಇವನ್ನೆಲ್ಲಾ ಗುರುತಿಸುವ ಸ್ತ್ರೀವಾದ ಈ ವಿಷಯದಲ್ಲಿ ಫ್ರಾಯ್ಡ್‌ನ ಚಿಂತನೆಯನ್ನು ದಾಟಿದೆ. ಫ್ರಾಯ್ಡ್‌ನಲ್ಲಿ ಮಗ ಪ್ರೌಢನಾಗಿ ಬೆಳೆಯಬೇಕಾದರೆ ತಂದೆಯನ್ನು ನಿರಾಕರಿಸಬೇಕು, ಹಾಗೆಯೇ ಮಗಳು ಪ್ರೌಢಳಾಗಿ ಬೆಳೆಯಬೇಕಾದರೆ ತಾಯಿಯನ್ನು ನಿರಾಕರಿಸಬೇಕು ಎಂಬ ಚಿಂತನೆ ಇದೆ. ಆದರೆ ಸ್ತ್ರೀವಾದದ ಪ್ರಕಾರ ಮಗಳು ಪ್ರೌಢಳಾಗಿ ಬೆಳೆಯಬೇಕಾದರೆ ತಾಯಿಯನ್ನು ನಿರಾಕರಿಸಬೇಕಿಲ್ಲ, ಅವಳು ತಾಯಿಯನ್ನು ಅಂತರಂಗೀಕರಿಸಿಕೊಂಡೇ ಪ್ರೌಢಳಾಗಿ ಬೆಳೆಯಲು ಸಾಧ್ಯವಿದೆ."[೧೫]

ವೈದೇಹಿಯವರ 'ಮಗಳಿಗೆ' ಎಂಬ ಪದ್ಯದಲ್ಲಿ ಮಗಳನ್ನು ಗಂಡನ ಮನೆಗೆ ಕಳುಹಿಸಿಕೊಟ್ಟ ತಾಯಿಯ ವ್ಯಥೇ ಮತ್ತು ಸ್ತ್ರೀ ವಿಶಿಷ್ಟತೆಗಳನ್ನು ಮಗಳಿಗೆ ತಿಳಿಸುವ ಪರಿ ಜೊತೆಗೆ ಅವನ್ನು ಮಗಳು ಅಂತರಂಗೀಕರಿಸಿಕೊಳ್ಳುವ ಬಗೆ ಎಲ್ಲವನ್ನೂ ಕನ್ನಡಿಸುತ್ತದೆ.

ಹೆಣ್ಣು ಪ್ರಾಪ್ತ ವಯಸ್ಕಳಾದಾಗ ಅವಳಿಗೆ ಮದುವೆ ಮಾಡಿ ಗಂಡಿನ ಮನೆಗೆ ಕಳುಹಿಸಿಕೊಡುವುದು ಲೋಕದ ವ್ಯಾಪಾರ. ಆದರೆ ಹೆತ್ತ ತಾಯಿಗೆ ಮತ್ತು ಮಗಳಿಗೆ ಒಬ್ಬರನ್ನೊಬ್ಬರು ಅಗಲುವ ದುಃಖ. ಲೋಕದಲ್ಲಿ ಎಂದಿನಿಂದಲು ಹೀಗೆಯೇ ಸಹಜವೆಂಬಂತೆ ನಡೆದುಬಂದಿದೆ. ಎಂದಿನಿಂದಲೂ ಮಾತೃಹೃದಯ ಈ ಸಂಕಟವನ್ನು ಮನಸ್ಸಿನಲ್ಲಿಯೇ ಸಹಿಸಿ, ಕೊಟ್ಟ ಹೆಣ್ಣು ಕುಲಕ್ಕೆ ಹೊರಗು ಎಂದು ಸಹಜ ಎಂಬಂತೆ ಕಳುಹಿಸಿಕೊಟ್ಟಿದ್ದಾಳೆ, ಮಗಳು ಕೂಡ ತಾನು ಇಲ್ಲಿಯವಳಲ್ಲ ಎಂಬಂತೆ ಹೊರಟು ನಿಲ್ಲುತ್ತಾಳೆ! ಆಗ ಆ ತಾಯಿಯ ನೆನಪುಗಳ ಅಲೆ. ಅಂದು ಲೋಕ ನಿಯಮಗಳೆಲ್ಲಾ ಹೆಣ್ಣುಮಗುವಾದ ನಿನ್ನ ಮೇಲೆ ಹೇರಿ ಇಲ್ಲಿಯವರೆಗೂ ಕೈಹಿಡಿದು ನಡೆಸಿಕೊಂಡು ಬಂದೆನು. ಆ ಕಲ್ಲು ಮುಳ್ಳಿನ ಹಾದಿಯಲ್ಲಿ ದಾರಿ ಸಾಗಿದ್ದೇ ತಿಳಿಯಲಿಲ್ಲ. ನಿನಗೆ ನೋವಾದರೂ ನೀನು ಹೇಳಿಕೊಳ್ಳಲಿಲ್ಲ, ನಾವು ಕೇಳಲಿಲ್ಲ ಎಂಬ ಕೊರಗು ನಮಗೆ ಉಳಿಸಿದೆ ಎಂದು ಹೇಳುತ್ತಾ ಅವರಿಬ್ಬರ ಸಂಬಂಧದ ಎಳೆಗಳನ್ನು ಬಿಚ್ಚುತ್ತಾ ಹೋಗುತ್ತಾಳೆ.

ತಾಯಿ ಮಗಳನ್ನು ಬೆಳೆಸುವಾಗ ಪುರುಷ ನಿರ್ವಚಿತ ಈ ಲೋಕದ ನಿಯಮಗಳನ್ನು ಅವಳ ಮೇಲೆ ಹೇರುವ ಅನಿವಾರ್ಯತೆ ಮತ್ತು ಮಗಳೆಂಬ ಪ್ರೀತಿ ಎರಡು ಬೆರತಿರುವ ಸಂಬಂಧದ ಮೇಲೆ ಬೆಳಕು ಚೆಲ್ಲುತ್ತದೆ. ಆ ಸಣ್ಣ–ಪುಟ್ಟ ಜಗಳಗಳಲ್ಲೇ ಲೋಕದ ಕ್ರೂರತೆಯನ್ನು ಅವಳಿಗೆ ತೋರಿಸಿಕೊಡುತ್ತಾಳೆ. ನಾಲ್ಕು ಗೋಡೆಯ ಕತ್ತಲೆಯಲ್ಲೇ ಈ ಲೋಕವನ್ನು ಆವರಿಸಿರುವ ಅಜ್ಞಾನದ

ಕತ್ತಲೆಯನ್ನು ತೋರಿಸಿಕೊಟ್ಟು, ಆ ಕತ್ತಲೆಯಲ್ಲಿಯೂ ಹಾಡುಕಟ್ಟಿ ಜೀವಂತವಾಗಿರಲೂ, ಜೀವಂತಿಕೆ ಉಳಿಸಿ-ಬೆಳೆಸಲು ಹೇಳಿಕೊಡುವ ತಾಯಿ, ಅವಳು ಮುಂದೆ ಕಾಲಿಡಲಿರುವ ನಿಜವಾದ ಕತ್ತಲೆಯ ಬಾಳಿಗೆ ತಯಾರು ಮಾಡುತ್ತಾಳೆ. ಮಗಳನ್ನು ಆ ಕತ್ತಲೆಯಲ್ಲಿ ದೂಡುತ್ತಿರುವ ನೋವು ತಾಯಿಯಾದವಳಿಗಿದ್ದರೂ ಅದು ಅವಳಿಗೆ ಅನಿವಾರ್ಯವಾಗಿರುವ ಪರಿಸ್ಥಿತಿ. ಹಾಗಾಗಿ ಅವಳು ಕತ್ತಲೆಗೆ ನೂಕಿದರೂ ಹಾಡು ಕಲಿಸಿ ಹಾಡಿನ ಜೊತೆ ಅವಳಿರುತ್ತಾಳೆ. ಅವಳು ಕಟ್ಟಿದ ಮಮತೆಯ ಹಾಡು ಅವಳು ಗಂಡನ ಮನೆಗೆ ಹೋಗುವಾಗ ಬಿಚ್ಚಿಕೊಳ್ಳುತ್ತದೆ. ಅದನ್ನು ಅವಳು ಹಾಡಿನಿಂದಲೇ ಸಹಿಸುತ್ತಾಳೆ.

ಮಗಳು ಕಡಿದು ದೂರವಾಗಿದ್ದರೂ ಅವಳಿಗೆ ಅದರ ಪರಿವೆ ಇಲ್ಲದೆ, ದಿನವೂ ಚಹ, ಊಟಕ್ಕೂ ಕರೆದು ನಂತರ ಅವಳಿಲ್ಲ ಎಂಬುದು ನೆನಪು ಬಂದು ಸಂಕಟ ಪಡುತ್ತಾಳೆ. ಅವಳಿಗೆ ಮಗಳು ಕರೆದಂತೆ ಭಾಸವಾಗುವುದು, ಅವಳ ಸಂಕಟ ಕಣ್ಣಹನಿಯಾಗಿ ನಿಲ್ಲುವುದು. ಯಾರಲ್ಲಿಯೂ ಹೇಳಲಾಗದೆ. ಅಲ್ಲಿ ಎಲ್ಲವೂ ನಿತ್ಯದಂತೆಯೇ ಇದೆ. ಅವಳಿಲ್ಲದಿದ್ದರೂ ಕೋಳಿ ಕೂಗುತ್ತದೆ. ಊಟ, ತಿಂಡಿ ಕಾಲಕ್ಕೆ ಸರಿಯಾಗಿ ನಡೆಯುತ್ತದೆ. ಆದರೆ ಇವೆಲ್ಲವೂ ಅವಳಿಗೆ ಮಗಳ ನೆನಪನ್ನು ಮರುಕಳಿಸುತ್ತಲೇ ಇರುತ್ತವೆ. ಆ ನೆನಪುಗಳನ್ನು ಹಂಚಿಕೊಳ್ಳಲು ಮಗಳು ತವರು ಮನೆಗೆ ಬರುವ ದಿನಕ್ಕಾಗಿ ಕಾಯುತ್ತಿದ್ದಾಳೆ ತಾಯಿ. ಆ ಮಗಳು ಬರುವುದು ಹೆರಿಗೆಗೆ.

"ಎಷ್ಟು ಸಾವಿರ ನೆನಪು ಸುತ್ತ ಬಿದ್ದಿದೆ ಅರಳಿ
ಹೆಕ್ಕುವೆನು ನಾ ಬೇರೆ ವಿಧ ಶಬರಿ
ಎಲ್ಲ ಪೋಣಿಸಿ ಇಡುವೆ ಅಂಬರದಲಂಬಾರಿ
ಏರಿ ಬರುತದೆಯಲ್ಲ ಮುದ್ದು ಮೊಮ್ಮಗು, ಅದರ
ನಾಮಕರಣದಿ ಹಾರ ತೊಡಿಸುವೆ."[16]

ಈ ನೋವಿನಲ್ಲಿಯೂ ತಾಯಿ ಮಗಳಿಗೆ ಬುದ್ಧಿಮಾತು ಹೇಳಿ ಶುಭ ಹಾರೈಸುತ್ತಾಳೆ. ನಿನ್ನ ಬಾಳು ಸುಖವಾಗಿರಲಿ ಎಂದು ಹಾರೈಸುತ್ತಾಳೆ. ಹೊಸಬಾಳಿನಲ್ಲಿ ಮಾತಿನ ಬಗ್ಗೆ ಎಚ್ಚರವಿರಲಿ, ಮಾತು ಮರೆತರು ಹಾಡಿನ ಸ್ಮರಣೆ ನಿನ್ನ ಜೊತೆಗಿರಲು, ಶೃತಿಬದ್ಧವಾಗಿರಲಿ ಬದುಕು; ಧೃತಿ, ಸ್ಥೈರಣೆ ನಿನಗಿರಲಿ. ಕಲ್ಲು ಮುಳ್ಳುಗಳು ನಿಮ್ಮ ಹಾದಿಗೆ ಅಡ್ಡಬಾರದಿರಲಿ. ನಿನ್ನ ಹೊಸಬಾಳು ಸೊಗಸಾಗಿರಲಿ. ತಂಪು ನೀಡುವ ಮರಗಳಿರಲಿ. ನಡೆವ ಕ್ರಮದ ಅಭ್ಯಾಸ ತಪ್ಪದಿರಲಿ. ಗಂಡ-ಹೆಂಡತಿ ಬಾಳಿ ಮೇಲುಕೀಳೆನ್ನದೆ ಎಂದು ಹಾರೈಸುತ್ತಾಳೆ.

'ನಿನ್ನೆ ನಾವಾಗಿ ಇಂದು ಬೇರಾಗುವವರು ನಾವು' ಎಂದು ದುಃಖಿಸುವ, ಆ ತಾಯಿಯ ನೋವು ಅವಳಿಗೆ ಗೊತ್ತು. ಈ ಅನುಭವ ತಂದೆಯಾದವನಿಗಿದ್ದರೂ, ಈ ತೀವ್ರತೆಯಲ್ಲಿ ಕಾಡುವುದಿಲ್ಲ ಎಂಬುದರಿಂದಲೇ ಇದು ಸ್ತ್ರೀ ವಿಶಿಷ್ಟ ಅನುಭವಗಳಲ್ಲೊಂದೆನಿಸುತ್ತದೆ. ತನ್ನ ಕರುಳಿನ ಬಳ್ಳಿ, ಅವಳನ್ನು

ಇಹದ ಹಾಡಿಗೆ ಬಂಧಿಸುವ ಮಗಳು. ಅವಳ ಮುಂದಿನ ವಾರಸುದಾರಳು. ಅವಳಿಂದ ಸಾಯುವ ಮುನ್ನವೇ ಬೇರಾಗುವ ಯಾತನೆ ಮಾತಿಗಿಂತ ಮೌನದಲ್ಲಿಯೇ ಹೆಚ್ಚು ಪರಿಣಾಮಕಾರಿಯಾಗಿರುತ್ತದೆ. ಪ್ರತಿ ಹೆಣ್ಣುಮಗುವಿನ ತಾಯಿ ಒಂದಿಲ್ಲೊಂದು ದಿನ ಎದುರಿಸಲೇಬೇಕಾದ ದುರಂತದ ಅನುಭವವಿದು.

ಮಗಳಿಂದ ದೂರಾದ ತಾಯಿಯ ಸ್ಥಿತಿ ಹೀಗಾದರೆ ತಾಯಿಯಿಂದ ದೂರವಾದ ಮಗಳ ಸ್ಥಿತಿ ಏನು ಎಂಬುದನ್ನು ಬಾಗಿಲು ತೆರೆ ಎಂಬ ಕವನವು ತಿಳಿಸುತ್ತದೆ. ಈ ಕವನದಲ್ಲಿ ದೇವರಿಗೆ ಹೆಣ್ಣು 'ಯಾವ ನೆಲಕೆ ಸಲುವ ಕೂಸು ನಾನು?' ಹೇಳುವೆಯ ಎಂದು ಪ್ರಶ್ನಿಸುತ್ತಾಳೆ. ಮದುವೆಯಾದ ಹೆಣ್ಣು ತಾನು ಹುಟ್ಟಿ, ಬೆಳೆದು, ಆಡಿದ ತನ್ನದೆಂದೆ ಭಾವಿಸಿದ ತವರನ್ನು ತ್ಯಜಿಸಿ ಹೋಗಬೇಕಾಗುತ್ತದೆ. ತನ್ನದೆಂದು ಭಾವಿಸಿದ್ದ ಮನೆಯಿಂದ ಹೊರಬಂದ ಹೆಣ್ಣು, ಗಂಡನ ಮನೆ ಸೇರುತ್ತಾಳೆ. ಆ ಮನೆಯನ್ನು ತನ್ನದಾಗಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆ ಹೆಣ್ಣು ಅಲ್ಲಿಯೂ ಹೊರಗಿನವಳಾಗಿಯೇ ಉಳಿಯಬೇಕಾಗುತ್ತದೆ. ಹೀಗೆ ಹೆಣ್ಣು ತವರಿಗೂ ಹೊರಗಿನವಳು. ಗಂಡನ ಮನೆಗೂ ಹೊರಗಿನವಳು. ಎರಡು ಮನೆಯಿದ್ದರೂ ಅವಳನ್ನು ಅನಾಥ ಸ್ಥಿತಿ ಕಾಡುತ್ತದೆ. ಈ ಸ್ಥಿತಿಗೆ ಕಾರಣ ಕೇಳಲು ಬಂದಿದ್ದಾಳೆ. ಆದರೆ ಈ ಪ್ರಶ್ನೆಗೆ ದೇವರ ಬಳಿಯೂ ಉತ್ತರವಿಲ್ಲ.

ತವರನ್ನು, ತಾಯಿಯನ್ನು ಮತ್ತೆ ಮತ್ತೆ ನೆನಸುವ ಮಗಳಿಗೆ ಅವಳು ಶಾಶ್ವತವಾಗಿ ಇಲ್ಲವಾದಾಗ?

ಅಮ್ಮನಂಥವರಿಗೆ ಮುಕ್ತಿ ಸಿಗಬಾರದು ಎಂದು ಪ್ರಾರಂಭವಾಗುವ 'ಅಮ್ಮ' ಕವನ, ತಾಯಿಯ ನೆನಪಲ್ಲಿಯೇ ಉಸಿರಾಡುವ ಮಗಳ ಭಾವನೆಗಳನ್ನು ಚಿತ್ರಿಸುತ್ತವೆ. ಅಮ್ಮನಂಥವರಿಗೆ ಮುಕ್ತಿ ಸಿಕ್ಕರೆ ಭೂಮಿ ಬರಡಾಗುತ್ತದೆ ಎನ್ನುತ್ತಾಳೆ. ಹಾಗೆಯೇ ಅಮ್ಮನಂಥವರಿಗೆ ಮರುಹುಟ್ಟು ಕೂಡದು. ಏಕೆಂದರೆ, ಸ್ವರ್ಗ ಬರಡಾಗುತ್ತದೆ ಎನ್ನುತ್ತಾಳೆ. ತಾನು ಇರುವಲ್ಲಿ ಜೀವಂತಿಕೆಯನ್ನು ಹಸಿರನ್ನು ಉಳಿಸುವ ಅಮ್ಮನಂಥವರು ಎಲ್ಲರಿಗೂ ಬೇಕು. ಅಮ್ಮ ಸದಾ ತನ್ನ ಬಳಿ ಇರುವಂತಿಗೆ, ಗುಲಾಬಿ ಮಲ್ಲಿಗೆಯಂತೆ ಇರಬೇಕು ಎನ್ನುತ್ತಾಳೆ. ಹಲವು ಕಷ್ಟದ ಮುಳ್ಳುಗಳ ಮಧ್ಯೆ ಹೂವಿನಂತೆ ಬದುಕಿ ಪರಿಮಳ ಚೆಲ್ಲಿದ ಅಮ್ಮ ಸದಾ ಈ ಹೂವಿನ ರೂಪದಲ್ಲಿ ಬಳಿ ಇರಲಿ ಎಂದು ಬಯಸುತ್ತಾಳೆ. ಅಮ್ಮನ ನೆನಪಿನ ಒಂದೊಂದೆ ಹೂವಿನ ಗೊಂಡೆ ನೇಯುತ್ತಾಳೆ. ಅಮ್ಮ ಭೂಮಿ– ಸ್ವರ್ಗ ಒಂದು ಮಾಡಿದ ಶಕ್ತಿ ಎಂದು ಭಾವಿಸುವಳು. ಸದಾ ಅಮ್ಮ ನಮ್ಮನ್ನು ಇಬ್ಬನಿಯ ಕಣ್ಣಲ್ಲಿ ಕಾಣುತ್ತಿರುತ್ತಾಳೆ ಎಂದು ತಾಯಿ ಸಾಮೀಪ್ಯ ಬಯಸುತ್ತಾಳೆ.

ಎಂದೂ ಒಬ್ಬಳೆ ಮನೆ ಗೇಟೂ ದಾಟದವಳು ಇಂದು ಒಬ್ಬಳೇ ಎಲ್ಲಿಗೆ ಹೋದಳೆಂದು ಯೋಚಿಸುತ್ತಾಳೆ. ದಾರಿಯಿಲ್ಲದ ದಾರಿ ಹಿಡಿದು ಹೋದ ಅಮ್ಮ ಅಲ್ಲಿ ಒಬ್ಬಳೇ ಹೆದರಿ ನಿಂತಿರಬಹುದೇ ಎಂದು ಚಿಂತಿಸುತ್ತಾಳೆ.

ಅಮ್ಮನಿಗೆ ಸಾವು ಬರಬಾರದು ಎಂದು ಬಯಸಿದರೂ ಕಾಲವೆಂಬುವ ನಿಷ್ಠುರ ಕಾಯಕದವನು. ಯಾರಿಗೂ ಕರುಣೆ ತೋರಿಸನು. ಅಮ್ಮ ಈಗಿಲ್ಲದಿದ್ದರೂ ಮಿನುಗುವ ನಕ್ಷತ್ರವಾಗಿ ನಮ್ಮನ್ನೇ ನೋಡುತ್ತಿರುತ್ತಾಳೆ ಎಂದು ಅಮ್ಮನನ್ನು ಸದಾ ತನ್ನ ಬಳಿಯೇ ಇಟ್ಟುಕೊಳ್ಳುವ ಮಗಳ ಪ್ರೀತಿ.

ಊರೆಲ್ಲಾ ಬೆಳಕು ತುಂಬಿದ್ದರೂ ಬಡತನದ ಕತ್ತಲಲ್ಲಿ ಮುಳುಗಿರುವ ತಾಯಿಯೊಬ್ಬ ಅಳುವ ಕಂದನಿಗೆ 'ಲಾಲಿ ದೀಪ'ವನ್ನು ಹಚ್ಚಿ, ಬಡತಾಯಿಯ ವಾತ್ಸಲ್ಯವನ್ನು ಲಾಲಿದೀಪ ಕವನ ಚಿತ್ರಿಸುತ್ತದೆ. ಬಡವಳಾಗಲೀ ಶ್ರೀಮಂತಳಾಗಲೀ ತಾಯಿ ತಾಯಿಯೇ. ಅವಳ ವಾತ್ಸಲ್ಯಕೆ ಕೊನೆಯಿಲ್ಲ. ಅವಳ ಲಾಲಿ ಹಾಡಿಗೆ ಎಂಥ ಶಕ್ತಿ ಇದೆ ಎಂದರೆ ಹಸಿವನ್ನೂ ಮರೆತು ನಿದ್ರೆಗೆ ಜಾರಿಸಿ ಸವಿಗನಸನ್ನು ಕಾಣಿಸುತ್ತದೆ.

ತಾಯಿಗೆ ತಾನು ಹೆತ್ತ ಮಕ್ಕಳಷ್ಟೇ ಸುಖ ತರುವುದು, ತಾನು ಹೆತ್ತ ಮಗಳು ಹೆತ್ತರೆ ಅವಳಿಗೆ ಎಲ್ಲಿಲ್ಲದ ಸಂತೋಷ. ತಾನು ತಂದ ಜೀವ ಇನ್ನೊಂದು ಜೀವದ ಸೃಷ್ಟಿಗೆ ಕಾರಣವಾಗುವ ಸಂತೋಷದ ಜೊತೆಗೆ ಆ ನೆವದಲ್ಲಿ ಇನ್ನೊಮ್ಮೆ ಮಗಳು ಮನೆಗೆ ಬರುವ ಸಂಭ್ರಮವೂ ಸೇರಿಕೊಳ್ಳುತ್ತದೆ.

ಮಗಳಿಗಾಗಿ ಕಾದ ಈ ಶಬರಿ, ಮೊಮ್ಮಗು ಬಂದ ನಂತರ ಅದರ ಸನಿಹದಲ್ಲೇ ಇದ್ದು, ತನ್ನನ್ನು ತಾನು ಮರೆಯುತ್ತಾಳೆ. ಅವಳ ಹೆಚ್ಚಿನ ಸಮಯ ಮೊಮ್ಮಗುವಿನ ಬಳಿಯಲ್ಲಿಯೇ, ಜೋ ಲಾಲಿ ಹಾಡಿ ಮಲಗಿಸುವುದರಿಂದ ಹಿಡಿದು ಅದಕ್ಕೆ ಭಾಷೆಯ ಮೊದಲ ಪರಿಚಯ ಮಾಡಿಸುವುದು, ಹಾಡು ಕಟ್ಟುವುದು, ಕಥೆ ಹೇಳುವುದು, ಸುತ್ತಲಿನ ಪ್ರಪಂಚ ಪರಿಚಯ ಮಾಡಿಸುವವಳು, ನಮ್ಮ ನೆಲ, ಜಲ, ಭಾಷೆಯ ಪರಿಚಯ ಮಾಡಿಸುವವಳು ಎಲ್ಲವೂ ಅವಳೇ ಆಗಿ ಹೋಗುತ್ತಾಳೆ. ಬೆಳೆಯುವ ಕಂದನ ಜೊತೆ ತಾನು ಮಗುವಾಗಿಬಿಡುತ್ತಾಳೆ. ಹೀಗೆ ತಾಯಿಯೇ ಮೊದಲ ಗುರು ಎಂಬುದನ್ನು ಸ್ವಲ್ಪ ತಿರುಚಿದರೆ ಅಜ್ಜಿಯೇ ಮೊದಲ ಗುರುವಾಗಿ, ಮೊಮ್ಮಗನ ಬಾಲ್ಯದ ಪ್ರತಿ ಹೆಜ್ಜೆಯಲ್ಲಿಯೂ ಜೊತೆಯಿರುತ್ತಾಳೆ.

'ಓ ಬೇಲೇ ಅಂಗರೇ' ಎಂಬ ಕವನದಲ್ಲಿ ನಿರೂಪಕಿಯ ಅಜ್ಜನ ಗದ್ದೆ ಕೆಲಸದಾಕೆಯ ವ್ಯಕ್ತಿ ಚಿತ್ರವನ್ನು ಬಿಡಿಸುತ್ತಾ ಸ್ತ್ರೀ ವಿಶಿಷ್ಟತೆಯ ಕೆಲವು ಗುಣಗಳನ್ನು ವೈದೇಹಿಯವರು ಈ ಚಿತ್ರದ ಮೂಲಕ ಬಿಡಿಸುತ್ತಾರೆ.

ಅಮ್ಮನಿಗೂ ಅಮ್ಮನಂಥ ಅಂಗರೇ
ಅಜ್ಜಿ ಸತ್ತವರಿಗಜ್ಜಿ ಅಂಗರೇ[೧೭]

ಹೆಣ್ಣು ಮಕ್ಕಳಿಗೆ ಯಾರಿಗಾದರೂ ಅಮ್ಮನಾಗುವ, ಅಜ್ಜಿಯಾಗುವ ಪ್ರೀತಿ-ವಾತ್ಸಲ್ಯವಿರುತ್ತದೆ. ಈ ರೀತಿ ಅಮ್ಮನಾಗಿ ಅಜ್ಜಿಯಾಗಿ ಸಮಾಜವನ್ನು ಪೋಷಿಸುತ್ತಿರುವ ಶಕ್ತಿ ಹೆಣ್ಣಾಗಿದ್ದಾಳೆ.

ಹೀಗೆ ಇಡೀ ಸಮಾಜಕ್ಕೆ ಪ್ರೀತಿಯನ್ನು ಧಾರೆಯೆರದರೂ ಅವಳ ಬಾಳಿನ ಕೆಲವು ಆಕಸ್ಮಿಕ ಘಟನೆಗಳು, ಕತ್ತಲೆಯ ತೆರೆಯನ್ನೆಳೆದುಬಿಡುತ್ತವೆ. ವಿಧವೆಯಾಗಿ ಬದುಕಬೇಕಾದ ಹೆಣ್ಣು ಎಲ್ಲವೂ ಇದ್ದು, ಎಲ್ಲವೂ ಯಥಾಪ್ರಕಾರ ನಡೆಯುತ್ತಿದ್ದರೂ, ಇನಿಯನಿಲ್ಲದ ಬದುಕ ಬಂಡಿಯ ಪಯಣ ತ್ರಾಸಕರ ಎಂದು ತನ್ನ ಕತ್ತಲೆಯ ಬದುಕಿನ ನಿವೇದನೆಯನ್ನು 'ನೀನಿಲ್ಲದೆ' ಎಂಬ ಕವನವು ತೋಡಿಕೊಳ್ಳುತ್ತದೆ.

ಸ್ತ್ರೀ ಸಂಸ್ಕೃತಿಯ ಸಾರ ಸಂಗ್ರಹದಂತಿರುವ ಜಾನಪದ ಸಾಹಿತ್ಯದಲ್ಲಿ ಹೆಣ್ಣೊಬ್ಬಳು "ಹೆಣ್ಣು ಜನ್ಮಕ್ಕೆ ಅಣ್ಣ ತಮ್ಮಂದಿರು ಬೇಕು" ಎಂದು ಹೇಳುತ್ತಾಳೆ. ಸಂಬಂಧವನ್ನು ಬೆಸೆಯುವ ಹೆಣ್ಣು, ಅತಿಯಾಗಿ ಬಯಸುವುದು ತವರಿನ ಈ ಸಂಬಂಧವನ್ನು. ತಾಯಿ ಸತ್ತ ನಂತರ ಅವಳ ತವರಿನ ಕೊಂಡಿ ಅಣ್ಣ ತಮ್ಮಂದಿರಾಗಿರುತ್ತಾರೆ. ಅವರು ಯಾವಾಗಲೂ ಚೆನ್ನಾಗಿರಲಿ ಎಂದು ಬಯಸುತ್ತಾಳೆ. ಆಧುನಿಕ ಹೆಣ್ಣು ಕೂಡ ಈ ಭಾವನೆ ವ್ಯಕ್ತಪಡಿಸುತ್ತಿರುವುದನ್ನು ವೈದೇಹಿಯವರ 'ನಮ್ಮಣ್ಣನೆಂಬಾತ' ಎಂಬ ಪದ್ಯದಲ್ಲಿ ಕಾಣಬಹುದು. ಆದ್ದರಿಂದ ಸೋದರರ ಮೇಲಿನ ಅವಳ ಪ್ರೀತಿ ಕೂಡ, ಅವಳ ಸಂಸ್ಕೃತಿಯ ಭಾಗವಾಗಿದೆ. ಹುಟ್ಟುತ್ತಾ ಅಣ್ಣ-ತಮ್ಮಂದಿರು ಬೆಳೆಯುತ್ತಾ ದಾಯಾದಿಗಳು ಎಂಬುದಕ್ಕೆ ವಿರುದ್ಧವಾದ ಸಂಸ್ಕೃತಿ ಇದಾಗಿದೆ.

ಪ್ರತಿ ಪುರುಷನ ಹಿಂದೆ ಒಬ್ಬಳು ಹೆಣ್ಣು ಇರುತ್ತಾಳೆ ಎಂಬ ಮಾತೊಂದಿದೆ. ಒಬ್ಬಳು ಹೆಣ್ಣು ಎನ್ನುವುದಕ್ಕಿಂತ ಹಲವು ಹೆಣ್ಣುಗಳು- ತಾಯಿ, ತಂಗಿ, ಅಕ್ಕ, ಮಗಳು, ಹೆಂಡತಿ ಹೀಗೆ ನಾನಾ ರೂಪಗಳಲ್ಲಿ, ಅವನ ಯಶಸ್ಸಿನಲ್ಲಿ ತಮ್ಮ ಯಶಸ್ಸನ್ನು ಕಾಣುತ್ತಾರೆ. ಹೆಣ್ಣು ಆಕೆ ಸ್ವಾರ್ಥಿಯಂತೆ ತನ್ನ ಯಶಸ್ಸಿಗೆ, ಸಾಧನೆಗೆ ಮಾತ್ರ ಪ್ರಯತ್ನಿಸದೆ ಎಲ್ಲರ ಯಶಸ್ಸಿನಲ್ಲಿ ತನ್ನ ಯಶಸ್ಸಿದೆ ಎಂದು ಭಾವಿಸುತ್ತಾಳೆ. ಹಾಗಾಗಿಯೇ ಅನುಭಾವದ ಸೆಳೆತ ತೀವ್ರವಿದ್ದರೂ ಹೆಣ್ಣೊಬ್ಬಳು ಸಂಸಾರ ತ್ಯಜಿಸುವ ನಿರ್ಧಾರ ಮಾಡದ ಅವಳ ಕಾಳಜಿಯನ್ನು ವೈದೇಹಿಯವರ 'ಸಂಸ್ಕಾರಿಪದ' ಕವನದಲ್ಲಿ ಕಾಣಬಹುದು.

ಹೆಣ್ಣಿನ ಮನಸ್ಸು ಮತ್ತು ಅವಳ ಕನಸುಗಳನ್ನು ನವಿಲು ಮತ್ತು ಗಿಳಿಗಳ ಸಂಕೇತಗಳ ಮೂಲಕ ಅನಾವರಣಗೊಳ್ಳುತ್ತದೆ. ಗಿಳಿ ಮಾತನಾಡುವ ಏಕೈಕಪಕ್ಷಿ ಮತ್ತು ಸ್ವಾತಂತ್ರ್ಯ ಬಯಸುವ ಪಕ್ಷಿ. ಆದರೂ ಅದನ್ನು ಅಲಂಕಾರಕ್ಕಾಗಿ ಬಂಧನದಲಿಟ್ಟು ಸಾಕುತ್ತಾರೆ. ಬಂಧನದಲ್ಲಿದ್ದರೂ ಆ ಗಿಳಿ ಸ್ವಾತಂತ್ರ್ಯವನ್ನು ನೀರಿಕ್ಷಿಸುತ್ತಾ, ಅದನ್ನೇ ಜಾನಿಸುತ್ತಿರುತ್ತದೆ. ಹೆಣ್ಣಿನ ಸ್ಥಿತಿಯೂ ಇಂತಹದೇ ಆಗಿದೆ. ಹೊರಗಿನ ಗಾಳಿ ಬೆಳಕು ಒಳ ಪ್ರವೇಶಿಸಲು ಒಂದು ಸಣ್ಣ ಕಿಂಡಿಯೂ ಇಲ್ಲದೆ ಬಂದಿಯಾಗಿರುವ ಅಡುಗೆ ಮನೆಯ

ಹುಡುಗಿ ಕುಳಿತಲ್ಲೇ ಯಾರೂ ಕಾಣದಂಥ ಲೋಕಕ್ಕೆ ಹಾರಬಯಸುತ್ತಾಳೆ. ಆದರೆ ಹೀಗೆ ಹಾಡು ನೇಯುವ ಹುಡುಗಿಯ ಆಯುಷ್ಯ ಅಡುಗೆ ಮನೆಯಲ್ಲಿ ಹನಿಹನಿಯಾಗಿ ಸೋರಿ ಹೋಗುತ್ತದೆ.

ಹೆಣ್ಣಿನ ದೃಷ್ಟಿಕೋನದಿಂದಲೇ ನೋಡುವ ಈ ಕವನ ಅಡಿಗೆ ಮನೆಯೇ ಹೆಣ್ಣಿನ ಸಮಾಧಿಯೂ ಆಗಿದೆ ಎಂದು ಕಟುವಾಗಿ ನುಡಿಯುತ್ತದೆ.

ಇವೆಯಂತೆ ತರತರದ ಅರ್ಥ
ಅಡುಗೆ ಮನೆಗೆ ತರತರದ ಪದಾರ್ಥಗಳಂತೆ
ಆದರೆ ಆ ಹುಡುಗಿಗಂತೂ ಇದೇ
ಇದೇ ಮನೆ ಅಡುಗೆ ಮನೆ ಆ ಮನೆ ಈ ಮನೆ
ಗಟ್ಟಿಕೇಳಿದರೆ ಸ್ಮಶಾನವೂ ಸುಮ್ಮನೆ.[೧೮]

ಅವಳ ಆಸೆಗಳೆಲ್ಲವೂ ಅಡಿಗೆ ಮನೆಯ ನಾಲ್ಕು ಗೋಡೆಗಳ ನಡುವೆಯೇ ಮಣ್ಣಾಗುತ್ತದೆ. ಈ ಅಡುಗೆ ಮನೆಗೆ ಹೊರಜಗತ್ತಿನ ಸಂಪರ್ಕವೇ ಇಲ್ಲ. ಅವಳನ್ನು ಪುರುಷ ನಿರ್ಮಿತ ಕಟ್ಟುಪಾಡುಗಳು ಯಾವ ರೀತಿ ಬಂಧಿಸಿವೆ ಎಂದರೆ ಅವಳು ಅಲ್ಲಿಂದ ಹೊರಹೋಗಲು ಬಯಸಿದರೂ ದಾರಿಗಳಿಲ್ಲ. ಒಂದು ಸಣ್ಣ ಕಿಂಡಿಯೂ ಇಲ್ಲ. ಹೊರಗಿನ ಗಾಳಿ ಬೆಳಕು ಒಳಬರಲು "ಈ ಅಡಿಗೆ ಮನೆ ಬರೀ ಅಡಿಗೆ ಮನೆ ಅಲ್ಲ, 'ಸ್ತ್ರೀ' ಜಗತ್ತಿಗೆ ಅದರ ಕಟ್ಟುಪಾಡುಗಳಿಗೆ ನಿರ್ಮಿಸಿದ ಪ್ರತಿಮೆಯಾಗಿದೆ ಎಂಬುದಿಲ್ಲಿ ತಿಳಿಯುತ್ತದೆ" ಎಂದು ಎಲ್.ಸಿ.ಸುಮಿತ್ರಾ ಅಭಿಪ್ರಾಯ ಪಡುತ್ತಾರೆ.

ಹೊರಜಗತ್ತಿನ ಆಮಿಷಗಳಿಂದ ಆಕರ್ಷಿತಳಾದರೂ ಅವಳು 'ಅಭಾವ ವೈರಾಗ್ಯ' ವನ್ನು ವ್ಯಕ್ತಪಡಿಸಬೇಕಾಗಿದೆ. ಪ್ರಪಂಚವೇನೋ ಇಪ್ಪತ್ತೊಂದನೆಯ ಶತಮಾನದ ಕಡೆಗೆ ಸಾಗುತ್ತಿದೆ. ಆದರೆ ಅಡಿಗೆ ಮನೆಯಲ್ಲಿರುವ ಹೆಣ್ಣು ಮಾತ್ರ ಕ್ರಿಸ್ತಪೂರ್ವದ ಹೆಣ್ಣಿನಂತೆಯೇ ಒಲೆ ಊದುತ್ತ ಇದ್ದಾಳೆ. ಒಂದೇ ವ್ಯತ್ಯಾಸ ಎಂದರೆ ಅಡಿಗೆ ಮನೆಯಿಂದ ಬಿಡುಗಡೆ ಮಾಡಿ ಇಪ್ಪತ್ತೊಂದನೇ ಶತಮಾನಕ್ಕೆ ಕರೆದೊಯ್ಯುವ ವಿಮಾನದ ಕನಸು ಕಾಣುತ್ತಿದ್ದಾಳೆ ಈ ಹುಡುಗಿ.

ಯೋಚಿಸುವ ಧಾಟಿಯಲ್ಲಿಯೇ ರಾಮ ಅಥವಾ ರಾವಣ ಯಾರ ಗೊಡವೆಯೂ ಬೇಡ. ತನ್ನಿಚ್ಛೆ ಬಂದಲ್ಲಿಗೆ ವಿಮಾನ ಹಾರಲಿ ಎಂದು ಆಜ್ಞೆಮಾಡುತ್ತೇನೆ ಎಂಬಲ್ಲಿ ಆಧುನಿಕ ಹೆಣ್ಣಿನ ಸ್ವಾತಂತ್ರ್ಯದ ಹಂಬಲ ವ್ಯಕ್ತವಾಗಿದೆ. ಆದರೆ ಲಿಂಗಾಧಾರಿತ ಅಸಮಾನತೆಯ ಈ ಪ್ರಪಂಚದಲ್ಲಿ ಅವಳ ಕನಸು ಬರೀ ಕನಸಾಗಿಯೇ ಉಳಿಯುವುದೇ? ಕವಿತೆ ಒಂದು ಬಗೆಯ ವಿಷಾದದಲ್ಲಿ ಮುಗಿಯುತ್ತದೆ.

ಬಿಡುಗಡೆಯ, ಬದಲಾವಣೆಯ ನಿರೀಕ್ಷೆಯಲ್ಲಿಯೇ ಅವಳ ಆಯುಷ್ಯ ಹನಿ-ಹನಿಯಾಗಿ ಕಳೆದುಹೋಗುತ್ತದೆ. ಜೀವನದ್ರವವೆಲ್ಲ ಕಳೆದ ಮೇಲೆ ಆಕೆಗೆ ಸಿಗುವ ಬಿಡುಗಡೆ ಸಾವು ಮಾತ್ರ ಎಂಬುದು ಮೊದಲನೆಯ ಭಾಗದಲ್ಲೇ. 'ಗಟ್ಟಿ ಕೇಳಿದರೆ ಸ್ಮಶಾನವೂ ಸುಮ್ಮನೆ' ಎಂಬಲ್ಲಿ ಸೂಚಿತವಾಗಿದೆ.

"ಸಾಂಪ್ರದಾಯಿಕ ಗೃಹಕೃತ್ಯದ ಬೇಸರಗೊಳಿಸುವ ಏಕತಾನತೆಯಲ್ಲಿ ಹತ್ತಿಕ್ಕಲ್ಪಟ್ಟ ಜೀವವೊಂದರ ದನಿಯಾಗಿರುವ ಈ ಕವಿತೆ ಹೆಣ್ಣಿನ ಮನದೊಳಗಿನ ಭಾವನೆಗಳಿಗೆ ಅಕ್ಷರರೂಪ ಕೊಟ್ಟಂತಿದೆ."[೯]

"ಹೆಣ್ಣು ತನ್ನ ಒಳಲೋಕವನ್ನು ಕಾಪಾಡಿಕೊಳ್ಳುವುದು ರೂಪಕಗಳ ಮೂಲಕ. ಬಯಸಿದ ಯಾವುದನ್ನು ಗಂಡಿನಂತೆ ಬಿಡುಬೀಸಾಗಿ ಪಡೆಯಲಾರದ, ತನ್ನ ಬಯಕೆಗಳಿಗೂ, ಆಲೋಚನೆಗಳಿಗೂ, ಕನಸುಗಳಿಗೂ ಅಧಿಕೃತತೆ ಪಡೆಯಲಾರದ ಹೆಣ್ಣು ಆ ಎಲ್ಲವುಗಳನ್ನು ರೂಪಕಗಳಾಗಿಯೇ ತನ್ನ ಒಳಲೋಕವನ್ನು ಕಾಯ್ದುಟ್ಟುಕೊಳ್ಳುವುದರಲ್ಲಿ ಅವಳಿಗೆ ಅಷ್ಟೊಂದು ಆಸಕ್ತಿ. ಒಳಲೋಕದಲ್ಲಾದರೂ ಸ್ವತಂತ್ರವಾಗಿರಲು ಹೆಣ್ಣು ಬಯಸುತ್ತಾಳೆ. ಹಾಗೆಂದು ಇದನ್ನು ನಾವು ಅರ್ಥವಿಲ್ಲದ, ಸಾಧಿತವಾಗದ ಹಗಲುಗನಸುಗಳ ಲೋಕ ಎಂದೂ ವ್ಯಾಖ್ಯಾನಿಸಬೇಕಾಗಿಲ್ಲ. ಇಲ್ಲಿನ ಮುಖ್ಯ ಪ್ರಶ್ನೆ ಇರುವುದು, ಲೋಕ ಸುಲಭವಾಗಿ ಒಪ್ಪಲಾರದ, ಗ್ರಹಿಸಲಾರದ ವಿವರಗಳನ್ನು ಆ ವಿವರಗಳನ್ನು ಹೇಳದೆಯೇ ಅದಕ್ಕೆ ಅಧಿಕೃತವೆ ಪಡೆಯುವ ಹೆಣ್ಣಿನ ನಿರೀಕ್ಷೆಯಲ್ಲಿ, ಅಸಹಾಯಕತೆಯಲ್ಲಿ, ವ್ಯವಸ್ಥೆ ಒತ್ತಾಯಿಸುವ ಅಪರಾಧಿ ಪ್ರಜ್ಞೆಯಲ್ಲಿ ಅವಳು ತನ್ನ ಒಳಲೋಕವನ್ನು ಕಾಪಾಡಿಕೊಳ್ಳಲು ಬಯಸುವುದಿಲ್ಲ. ಒಳಗೇನಿದೆಯೇ ಇಲ್ಲವೋ ಅದು ಸರಿಯೋ ತಪ್ಪೋ, ಅದನ್ನು ನೋಡುವ ಅಧಿಕ ಪ್ರಸಂಗವನ್ನು, ಅನಾಗರಿಕತವನ್ನು, ವ್ಯರ್ಥ ಸಾಹಸವನ್ನು ಪುರುಷ ಮಾಡಬೇಕಿಲ್ಲ."[೨೦]

ನೋಡಬಾರದು ಚೀಲದೊಳಗನು ಎಂಬ ಕವಿತೆಯು ಹೆಣ್ಣನ್ನು ನೀವು ಅರ್ಥಮಾಡಿಕೊಳ್ಳಲಾಗದು. ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೂ ಅದು ನೀವು ಮಾಡಲಾಗದು, ಹೀಗಾಗಿ ಅವಳ ಚೀಲದೊಳಗನು ನೀವು ನೋಡಬಾರದು ಎಂದು ಹೇಳುತ್ತದೆ. ನೋಡಿದರೂ ನಿಮಗೆ ಅದರಲ್ಲಿ ಸಿಗುವುದಾದರೂ ಏನು?

ವ್ಯಾನಿಟಿ ಬ್ಯಾಗ್. ಹೆಣ್ಣು ತನ್ನ ಮನಸ್ಸಿಗೆ ಬಂದ ವಸ್ತುಗಳನ್ನು ಇಟ್ಟುಕೊಳ್ಳುವ ಒಂದು ಬ್ಯಾಗ್. ಅವಳ ಮನಸ್ಸಿನಂತೆ. ತನಗೆ ಯಾವುದೇ ವಸ್ತು ಅದು ಬೇಕಾಗಿರಲಿ ಬೇಡವಾಗಿರಲಿ ಮನಸ್ಸಿಗೆ ಬಂತೆಂದರೆ ಅದು ಅವಳ ವ್ಯಾನಿಟಿ ಬ್ಯಾಗಿನಲ್ಲಿ ಸ್ಥಳ ಪಡೆಯುತ್ತದೆ. ಅದು ಒಂದು ರೀತಿಯಲ್ಲಿ ಹೆಣ್ಣಿನ ಮನೋಲೋಕ, ಒಮ್ಮೆ ಸೇರಿದರೆ ಅದು ಅಲ್ಲಿಂದ ಹೊರಬರುವುದೇ ಇಲ್ಲ. ಇಂಥ ಲೋಕವನ್ನು ಪ್ರವೇಶಿಸಿ ಅಲ್ಲಿರುವುದನ್ನು ಬಯಲು ಮಾಡುವರೇ? ಏಕೆಂದರೆ ವ್ಯಾನಿಟಿ ಹೆಸರಲ್ಲಿ ಏನೆಲ್ಲ ಇರಬಹುದು, ಅದನ್ನು ಬಯಲು ಮಾಡಲು ಸಾಧ್ಯವಿಲ್ಲ. ಆ ಪ್ರಯತ್ನ ಕೇವಲ ವ್ಯರ್ಥ ಕಾಲಹರಣವಾಗುತ್ತದೆ. ಬದಲಾಗಿ ಯಾವ ಪ್ರಯೋಜನವೂ ಇಲ್ಲ. ಅದರಲ್ಲಿ ಕನ್ನಡಿ ಹಣಿಗೆ ಕಾಡಿಗೆ ಕರಡಿಗೆ ಪೆನ್ನು ಪೌಡರು ಕ್ಲಿಪ್ಪು ಸೆಂಟಿನಂತ ಹೆಣ್ಣಿನ ದೇಹ ಮಗ್ನತೆಯನ್ನು ಪ್ರತಿನಿಧಿಸುವ ವಸ್ತುಗಳು. ಅವಳ ವ್ಯಕ್ತಿತ್ವದ ಅವಿಭಾಜ್ಯ ಅಂಗಗಳು. ಅವಳಿಗೆ ಬೇಕಾದ ವಸ್ತುಗಳು. ಉಪಯೋಗಕ್ಕೆ ಬರುವ ವಸ್ತುಗಳು. ಇಂತದ್ದೇ ಇರಬೇಕು

ಎಂದೇನಿಲ್ಲ. ಅಲ್ಲಿ ಸೂಜಿ- ದಾರ ಹುಣಿಸೆ ಬೀಜಕ್ಕೂ ಜಾಗ ಉಂಟು. ಭಾವನಾಜೀವಿಯಾದ ಹೆಣ್ಣು ತನ್ನ ಬಳಿ ಯಾವಾಗಲೂ ಸೂಜಿ-ದಾರವನ್ನು ಇಟ್ಟು ಕೊಂಡಿರುತ್ತಾಳೆ. ಸಂಬಂಧದಲ್ಲಿ ಒಂದು ಚೂರು ಬಿರುಕು ಕಂಡರು ಅದನ್ನು ಸರಿಪಡಿಸದೆ ಬಿಡುವುದಿಲ್ಲ ಅವಳು.

ಹೀಗೆ ಬೇಡದ ಒಣಗಿದ ಹೂವುಗಳಲ್ಲೂ ಯಾರದೋ ನೆನಪು ಅವಳ ವ್ಯಾನಿಟಿಯಲ್ಲಿರಬಹುದು. ನೆನಪುಗಳ ಮರಿ ಇಡುವ ನವಿಲುಗರಿಯೂ ಇರಬಹುದು, ಇರಬಹುದು ಮರಳು-ಮಣ್ಣು ಕರವಸ್ತ್ರ, ಅರೆ ಬರೆದ ಕವನ ಏನೆಲ್ಲ.ವಿಳಾಸ ಹೊತ್ತಿರುವ ಖಾಲಿ ಲಕೋಟೆ, ಕೆಂಪು ಸೂರ್ಯನ ಚಿತ್ರ, ಬಂದ ಪತ್ರದ ಉಸಿರು ಒಗಟಾಗಿ ಇರಬಹುದು. ಕರಿಮೀಸೆಯಡಿಯಲ್ಲಿ ಮಿರಿಮಿಂಚು ನಗೆಯಲ್ಲಿ ಹೆಸರಿಲ್ಲದ ಫೋಟೋ ಕೂಡ ಇರಬಹುದು! ಹೀಗೆ ಬಾಲ್ಯ ಯೌವನ ವೃದ್ಧಾಪ್ಯದ ನೆರಳುಗಳು ಆ ಕೋಶದಲ್ಲಿ ಸೇರಿಕೊಂಡಿರಬಹುದು.

ಗಾರ್ಹಸ್ಥ್ಯ ವೇಶ್ಯಾ ಅಭಿಸಾರ ವಾಸನೆಗಳು
ಧರ್ಮ ಲಕ್ಷಣ ಅವಸ್ಥಾಂತರ ವೇಷದಲ್ಲಿ[೨೧]

ಹೀಗೆ, ಒಂದಕ್ಕೊಂದಕೆ ಅರ್ಥಾರ್ಥವಿಲ್ಲದಿದ್ದರೂ ಸೇರಿಕೊಂಡಿರಬಹುದು ಎಲ್ಲವೂ ಒಟ್ಟಿಗೆ. ಗೃಹಸ್ಥ ಧರ್ಮವು, ಅಭಿಸಾರ ವಾಸನೆಯೂ ಬೇರೆ ಬೇರೆ ಎನ್ನುವುದು ಆದರ್ಶದಲ್ಲಷ್ಟೇ ನಿಜ. ಬಾಲ್ಯ, ಯೌವನ ವೃದ್ದಾಪ್ಯ ಎಲ್ಲದರ ನೆರಳುಗಳು ಅಲ್ಲಿ ಸಿಕ್ಕರೂ ಹೆಣ್ಣಿನ ಮನೋಲೋಕ ಆ ಚೀಲದೊಳಗಿನ ಲೋಕ ಎರಡೂ ಒಂದೇ. ಎಂದು ತಿಳಿಯಲು ಸಾಧ್ಯವಿಲ್ಲ.

“ ಅಂತರಂಗದ ವಿವರಗಳನ್ನು ಕಾಪಿಟ್ಟುಕೊಳ್ಳುವ ಅವಳ ಬಯಕೆಯನ್ನು ಕವನವು ನೈತಿಕ ಹಕ್ಕಾಗಿ ಪ್ರತಿಪಾದಿಸುತ್ತದೆ. ಅದರ ನೈತಿಕ ಬಲವೇ ಅದನ್ನೊಂದು ಜೀವನ ಕ್ರಮವಾಗಿ ಪ್ರತಿಪಾದಿಸುವುದರಲ್ಲಿ ನೆರವು ನೀಡುತ್ತದೆ.”.[೪]

ಜೊತೆಗೆ, “ ಪರಸ್ಪರ ಅರ್ಥವಿಲ್ಲದ, ಜೊತೆಯಾಗದ, ಸಾಂಗತ್ಯವಿಲ್ಲದ, ಪೂರಕವಾದ, ಎಷ್ಟೆಲ್ಲ ವೈದೃಶ್ಯಗಳು ನಮ್ಮ ಮನಸ್ಸಿನಲ್ಲಿ ಹಾಸು ಹೊಕ್ಕಾಗಿರುತ್ತವೆ. ಹೊರ ಬದುಕಿನಲ್ಲಿ ಪರಸ್ಪರ ಪೂರಕವಾಗದ, ಬೆಳಗದ, ಬೆಳೆಸದ ಎಷ್ಟೋ ಜೊತೆಗಳಿರುವಂತೆ ಒಳ ಬದುಕಿನಲ್ಲಿಯೂ ಇಂತಹ ವಿಲಕ್ಷಣಗಳು ಒಟ್ಟೊಟ್ಟಾಗಿಯೇ ನಮ್ಮ ಕೋಶವನ್ನು ರೂಪಿಸುತ್ತವೆ. ಬದುಕಿನ ಅಸಂಗತತೆ ಕವನದ ಮುಖ್ಯವಾದ ಕೇಂದ್ರಗಳಲ್ಲಿ ಒಂದು.”[೨೨]

ಮನಸ್ಸಿನೊಳಗಡೆ ಎಂದೂ ಇಣುಕಲಾರಿರಿ ನೀವು ಹುಡುಕಿ ಎಂದು ನಿಶ್ಚಯವಾಗಿ ಕವನ ಹೇಳುತ್ತದೆ. ಒಳ ಲೋಕವನ್ನು ರೂಪಕಗಳ ಬೆಡಗಿನಲ್ಲಿ ಸುರಕ್ಷಿತವಾಗಿ ಇರಿಸಿಕೊಂಡಿರುವ ಅವಳ

ಗೋಚರ ರೂಪಕಗಳನ್ನು, ಅಗೋಚರ ಒಳಬರುವ ವಾಹಕಗಳು ಎಂದು ತಿಳಿಯುವ ಪುರುಷರ ಅಜ್ಞಾನವನ್ನು ನೋಡಿ ಮರುಕಪಡಬಹುದಷ್ಟೇ. ಎಂದೇ ತಪ್ಪು ಸಮೀಕರಣ ಮಾಡುವ ವ್ಯರ್ಥ ಕೆಲಸದಲ್ಲಿ ಕೈಹಾಕಬೇಡಿ ಎಂದು ಎಚ್ಚರಿಸುತ್ತದೆ ಕವಿತೆ.

ಹೀಗೆ ರೂಪಾಕಾತ್ಮಕವಾಗಿಯೇ ತನ್ನ ಆಸೆ– ಕನಸುಗಳನ್ನು ಸಂರಕ್ಷಿಸಿಕೊಳ್ಳುವುದು, ಅಸಂಗತತೆ ಸ್ತ್ರೀ ಸಂಸ್ಕೃತಿಯ ವಿಶೇಷ ಗುಣವಾಗಿದೆ.

"ಮಣ್ಣಿಂದ ಬಂದೆ ಮಣ್ಣ ಪ್ರೀತಿಸಿದೆ
ಮರಳಬೇಕಲ್ಲವೆ ಮರಳಿ ಮಣ್ಣಿಗೆ
ಮಗಳೆ
ನನ್ನಂತೆ ನನ್ನ ಮರುಳೂ?
ಹೆಚ್ಚು ವಿವರ ಯಾಕೆ ಹೇಳು![೨೪]

ಎಂದು 'ಅವಳ ಉಯಿಲು' ಎಂಬ ಕವನದಲ್ಲಿ ಆಸ್ತಿಯ ಹಕ್ಕೇ ಇಲ್ಲದ ಹೆಣ್ಣೊಬ್ಬಳು ಉಯಿಲು ಬರೆದು ತನ್ನದನ್ನು ತನ್ನ ಹೆಣ್ಣುಮಕ್ಕಳು ಸಮವಾಗಿ ಹಂಚಿಕೊಳ್ಳಲು ಹೇಳುತ್ತಿದ್ದಾಳೆ. ಅವಳ ಉಯಿಲಿನಲ್ಲಿ ಇರುವ ವಿವರಗಳೆಲ್ಲಾ, ಅವಳು ಇದುವರೆಗೂ ಧರಿಸಿದ ಚಿನ್ನದ ಆಭರಣಗಳೇ ಆಗಿವೆ. ಅದೇ ಅವಳ ಆಸ್ತಿ. ಎಲ್ಲವೂ ಬೇರೆಯವರಿಂದ ಪಡೆದದ್ದು. ತಾನು ಸಂಪಾದಿಸಿದ್ದಲ್ಲ. ಅವಳಾಗಿ ಸಂಪಾದಿಸಿರುವುದು ಒಂದು ಚಿಕ್ಕ ಪೆಟ್ಟಿಗೆ, ಅದರಲ್ಲಿ ಕಲ್ಲು ಮಣ್ಣುಗಳು ಇರಬಹುದು ಎನ್ನುತ್ತಾಳೆ. ಅದನ್ನು ತನ್ನ ಚಿತೆಯ ಮೇಲೆ ಇರಿಸು ಎಂಬ ಕೊನೆ ಇಚ್ಛೆಯನ್ನು ನಿವೇದಿಸಿಕೊಳ್ಳುತ್ತಾಳೆ. ಬದುಕಿನುದ್ದಕ್ಕೂ ಭೂಮಿ ಮಾಡುವ, ಸ್ಥಿರಾಸ್ತಿ ಹೊಂದುವ ಕನಸು ಕಂಡ ಆಕೆ, ಆ ಕನಸು ಹೆಣ್ಣಿಗೆ ಕನಸಾಗಿಯೇ ಉಳಿದು ಬಿಡುವ ವಾಸ್ತವವನ್ನು ಕಾಣಿಸುತ್ತಾಳೆ. ಅವಳಿಗೆ ಭೂಮಿ ಹೊಂದುವ ಆಸೆ ಈಡೇರುವುದು ಅವಳ ಸಾವಿನಲ್ಲಿ ಮಾತ್ರ ಎಂಬುದನ್ನು ಕವಿತೆ ಧ್ವನಿಸುತ್ತದೆ.

೩. <u>ಮಹಿಳಾ ಕಾವ್ಯದ ಸಮರ್ಥನೆ</u>

ಭೂಮಿಯ ಮೊದಲ ಹಾಡು ಜೋಗುಳವಾದರೂ. ಮಹಿಳಾ ಕವನಗಳು, ಕವಯಿತ್ರಿಯರು ಅವಜ್ಞೆ, ಅಸಡ್ಡೆಯನ್ನು ಎದುರಿಸಬೇಕಾಗುತ್ತದೆ. ಎಷ್ಟೋ ಬಾರಿ ಅನಾಮಧೇಯವಾಗಿ ತನ್ನ ಕವನಗಳನ್ನು ರಚಿಸಬೇಕಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಜಾನಪದ ಸಾಹಿತ್ಯದಲ್ಲಿ ಕಾಣಬಹುದು. ಅಲ್ಲಿಯ ಗೀತೆಗಳು ಯಾರು ರಚಿಸಿದರೊ ತಿಳಿಯದು, ಆದರೆ ಎಲ್ಲ ಹೆಣ್ಣಿನ ಭಾವನೆಗಳನ್ನು, ಬದುಕನ್ನು ಬಿಂಬಿಸುವ ಸಾರ್ವತ್ರಿಕತೆಯಿಂದ ಕೂಡಿವೆ. ವೈದೇಹಿಯವರಲ್ಲಿ ಸ್ತ್ರೀ ಕಾವ್ಯ ಸರ್ಥತನೆ ಮತ್ತುಅದರ ವೈಶಿಷ್ಟ್ಯವನ್ನು ಪ್ರತಿಪಾದಿಸುವ ಕವನಗಳನ್ನು ಕಾಣಬಹುದು.

'ತಿಳಿದವರೇ .... ಹೇಳಿ' ಕಾವ್ಯ ಎಂದರೇನು? ಯಾವುದು ಕಾವ್ಯ ಎನಿಸಿಕೊಳ್ಳುತ್ತದೆ; ಎಂಬುದರ ಬಗ್ಗೆ ನನಗೆ ತಿಳಿದಿಲ್ಲ. ನನಗೆ ತಿಳಿದಿರುವುದು ತಿಳಿಸಾರು ಎನ್ನುವ ನಿರೂಪಕಿ. ತಿಳಿಸಾರು ಮಾಡುವುದು ಅಷ್ಟು ಸುಲಭವಲ್ಲ, ಅದಕ್ಕೂ ಕೂಡ ಒಂದು ಹದಬೇಕು. ಜಲತತ್ವ, ಗಂಧತತ್ವ, ಸಾರತತ್ವ ಬೇಕು ಎಂದು, ಪುರುಷರ ದೃಷ್ಟಿಯಲ್ಲಿ ಸಾಮಾನ್ಯ ಎನಿಸಿಕೊಳ್ಳುವ ವಿಚಾರಗಳ ಮಹತ್ವವನ್ನು ತಾತ್ವಿಕರಿಸಿರುತ್ತಾರೆ. ಹಾಗೆಯೇ ಮುಂದುವರಿದು ಬೆಳಗಿನಿಂದ ಯಾವುದೋ ಮೂಲೆಯ, ಬೂದಿ ಮುಚ್ಚಿದ ಕೆಂಡದೊಲೆಯ ಮೇಲೆ ಎಲ್ಲರ ನಿರ್ಲಕ್ಷ್ಯಕ್ಕೊಳಗಾಗಿ ಕಾಯುತ್ತಿತ್ತು, ಕುದಿಯುತ್ತಿತ್ತು, ಆದರೂ ಅದರ ಕಾದಗುಣ ವ್ಯರ್ಥವಾಗುವುದಿಲ್ಲ. ಅದರ ರುಚಿ ಇನ್ನಷ್ಟೂ ಹೆಚ್ಚಾಯಿತು. ಅದರ ತಾಳಿಕೆ ಮತ್ತು ಬಾಳಿಕೆ ಇನ್ನಷ್ಟು ಹೆಚ್ಚಾಯಿತು. ಒಡ್ಡೋಲಗದಲ್ಲಿ ತಿಳಿಸಾರಿಗೆ. ಜಾಗವಿಲ್ಲದಿದ್ದರೂ, ತಿಳಿಸಾರು ಬೇಸರಿಸಿ ಹಾಳಾಗಲಿಲ್ಲ. ತನ್ನ ರುಚಿಶಕ್ತಿ ಹೆಚ್ಚಿಸಿಕೊಂಡಿತು ಎಂದು ಹೇಳಿ ಕಾವ್ಯದ ಬಗ್ಗೆ ತಿಳಿದವರೇ ಕಾವ್ಯ ನನಗೆ ಗೊತ್ತಿಲ್ಲ, ತಿಳಿಸಾರು ನಿಮಗೆ ಗೊತ್ತೇ ಎಂದುಪ್ರಶ್ನೆ ಮಾಡುತ್ತಾರೆ. ಇದರ ಜೊತೆಗೆ ತಿಳಿಸಾರನ್ನು ಕಾವ್ಯ ವಸ್ತುವಾಗಿಸುತ್ತಲೇ ಮಹೀಳಾ ಸಾಹಿತ್ಯದ ಬಗೆಗೆ ಇರುವ ಅಸಡ್ಡೆಗಳನ್ನು ಕೂಡ ಸಮರ್ಥವಾಗಿ ಪ್ರಶ್ನಿಸುತ್ತಾರೆ. ಭೂಮಿಯ ಮೊದಲ ಗೀತೆ 'ಜೋಗುಳ' ಹಾಡುವ ಹೆಣ್ಣು ಬರೆವ ಸಾಹಿತ್ಯದ ಸತ್ವವನ್ನು ತಿಳಿಸಾರಿನ ಸತ್ವದೊಡನೆ ಹೋಲಿಸುತ್ತದೆ. ಕಾಲದ ಕಠಿಣ ಪರೀಕ್ಷೆಯಲ್ಲಿ ಕಾದು, ಕುದಿದು ಉಳಿದು ಬಂದಿರುವ ಸಾಹಿತ್ಯವೇ ಶ್ರೇಷ್ಠ ಸಾಹಿತ್ಯ ಎಂದಾದರೆ, ತಿಳಿಸಾರಿಗೆ ಮತ್ತು ಮಹಿಳಾ ಸಾಹಿತ್ಯಕ್ಕೆ ಆ ಶಕ್ತಿ ಇದೆ ಎಂಬುದನ್ನು ಕವನ ಹೊರಗೆಡಹುತ್ತದೆ.

> "ನಂಗದೆಯೂ ನಂಗಿದಂತಿದ್ದ ಕೆಂಡದೊಲೆಯ ಮೇಲೆ
> ಕುದಿಕುದಿದು ಬತ್ತಿ
> ರಾತ್ರಿಯಾದರೂ ಹಳಸದೆ!"[೨೫]

ಹೆಣ್ಣಿನ ಮಾತೇ ಹಾಡಾಗುವ ಬಗೆಯನ್ನು 'ಹಾಡುವುದೆಂದರೆ' ಎಂಬ ಕವನದಲ್ಲಿ ವಿವರಿಸುತ್ತಾರೆ.

> "ಹಾಡು ಹೇಳಲು ಏಕೆ ಶಬ್ದಾಲಂಕಾರ
> ಹಾಡುವುದೆ ಹಕ್ಕಿ ರಾಗ ಪ್ರಸ್ತಾರದನುಸಾರ?".

ಎಂಬ ಪ್ರಶ್ನೆಯ ಹಿಂದ ಹೊರಡುವ ಅವರು, ಭಾವಕೋಶ ಒಡೆದು ಹೊಮ್ಮಿದ ಸ್ವರ ತನ್ನಿಂದತಾನೆ ಹಾಡಾಗುವುದನ್ನು ಹೇಳುತ್ತಾರೆ.

> ಹಾಡಿಗೆಲ್ಲಿದೆ ಕೊರತೆ ನಮಗೆ ನಾರಿಯರಿಗೆ
> ಬೀಸಿ ತೂಗಲು, ಮುಟ್ಟ ಕೂಸುಮರಿಯ ತೊದಲು
> ನುಡಿಯೊಂದೆ ಸಾಲದೆ, ಕಡೆವಾಯಿ ನಗೆಯೊಂದೆ ಸಾಲದೆ
> ಹಾಡು ಹೊಮ್ಮುವ ಸಣ್ಣ ಉದಾಹರಣೆಗೆ?"[೨೬]

ಎಂದು ಸ್ತ್ರೀಗೆ ಇರುವ ಹಾಡು ಹೊಮ್ಮುವ ಸಹಜ ಲಯವನ್ನು ಹೇಳುತ್ತಾ ನಮ್ಮ ಹಿರಿಯರಿಗೆ ಹಾಡು ಹೊಸೆಯಲಿಕ್ಕೆ ಎಲ್ಲ ಗೊತ್ತಿತ್ತು. ಅವರು ಮಾಡುವ ಕೆಲಸದೊಂದಿಗೆ, ಆಡಿದ ಮಾತುಗಳೇ ಹಾಡಾದವು. ಕೃತಕವಾಗಿ ಹಾಡನ್ನು ಕಟ್ಟಲಾಗುವುದಿಲ್ಲ. ಜೀವನದ ಪ್ರತಿ ಲಯದೊಂದಿಗೆ ಹಾಡು ಹುಟ್ಟುತ್ತದೆ.

ಹಾಡೆಂದರೇನು ಕಾಗದದ ಕುಸುಮ? ಎಂದು ಪ್ರಶ್ನಿಸುವ ಕವನ ಅದು ರಕ್ತ ಮಾಂಸಗಳಿಂದ ಕೂಡಿದ ಆರ್ದ್ರ ದನಿ ಎಂದು ಹೇಳುತ್ತದೆ.

ಹೊನಲ ನಡುವಿನ ಬಾಳ ದೋಣಿ ಮನೆ ನಾವು
ನೋವು ನಲಿವಾದಾಗ ನರಳುವೆವು ಬಿರಿಯುವೆವು
ನರಳು ಬಿರಿವುಗಳೇ ಹಾಡಾಗಿ ಘಮಿಸಿದರೆ
ಕಾವ್ಯದೇವತೆಗೆಂದು ಅರ್ಪಿಸುವೆವು.[೨೭]

ಎಂದು ಮಹಿಳಾ ಕಾವ್ಯದ ವಿಶೇಷತೆಯನ್ನು ಸಾರುತ್ತದೆ.

೪. ಕಾಡುವ ಜ್ಞಾನದ ಹಂಬಲ.

ಜ್ಞಾನ ಎಂಬುದು ಎಲ್ಲರ ಸೊತ್ತಾದರು ಪುರುಷ ಪ್ರಧಾನ ವ್ಯವಸ್ಥೆ ಅದನ್ನು ಹೆಣ್ಣಿಗೆ ನಿರಾಕರಸಿತು. ಅದರ ಬೆಲೆ ಗೊತ್ತಿರುವ ಹೆಣ್ಣು, ಅಕ್ಷರ ಜ್ಞಾನಕ್ಕೆ ಹಂಬಲಿಸಿ ಅದನ್ನು ಪಡೆಯುವಲ್ಲಿ ಯಶಸ್ಸು ಕಾಣುತ್ತಾಳೆ. ಆದರೆ ಈ ಹೋರಾಟದ ಹಾದಿ ಸುಲಭದಾಗಿರಲಿಲ್ಲ.

ಜ್ಞಾನ ಸೂರ್ಯನನ್ನು ಕೇಳುವ ಹುಡುಗಿಯ ಕಥೆಯನ್ನು 'ಹುಡುಗಿ ಹೇಳಿದ ಕಥೆ' ಕವನದಲ್ಲಿ ಕಾಣಬಹುದು.

"ಎದ್ದಾಗ ಕೇಳಿದರು
ನಿನಗೇನು ಬೇಕು
-ಸೂರ್ಯ"[೨೮]

ಎಂದು ಪ್ರತಿ ಕ್ಷಣಕ್ಕೂ ಕೇಳುವ ಹುಡುಗಿಗೆ, ಜ್ಞಾನದ ಬದಲು ಬೇರೆ ಏನನ್ನಾದರೂ ಕೇಳು ಕೊಡುತ್ತೇವೆ, ಎಂದರೂ ಕೇಳುವುದು ಕೇವಲ ಸೂರ್ಯನನ್ನು ಮಾತ್ರ.

ಅಗೋ ಬಾನು ದೊಡ್ಡದು
ಭೂಮಿ ದೊಡ್ಡದು
ಅವನೇನು ಮಹಾ, ಇದು ತಗೋ
ಬ್ರಹ್ಮಾಂಡವೇ ನಿನಗೆಂದರು[೨೯]

ಎಲ್ಲವನ್ನು ಕೊಡಲು ಸಿದ್ಧರಿರುವ ಜನ, ಜ್ಞಾನ ಸೂರ್ಯನನ್ನು ಕೊಡಲು ಮಾತ್ರ ಇಷ್ಟವಿಲ್ಲ. ಆದರೆ ಹುಡುಗಿಗೆ ಸೂರ್ಯನನ್ನು ಬಿಟ್ಟರೆ ಬೇರಾವುದೂ ಬೇಕಾಗಿಲ್ಲ. ಕೆನ್ನೆಕೆನ್ನೆಗೆ ಹೊಡೆದು ಪುನಪುನಾ ಕೇಳಿದರು, ಅವಳು ಕೇಳುವುದು ಸೂರ್ಯನನ್ನೇ.

ಮರುಳು ಜನರು ಸೂರ್ಯನ ಬೆಲೆ ಅರಿಯರು ಎನ್ನುತ್ತಾ ಸೂರ್ಯನನ್ನೇ ತೀವ್ರವಾಗಿ ಬಯಸುವ ಹುಡುಗಿಗೆ ಅದರ ಬೆಲೆ ಗೊತ್ತಿದೆ. ಶಾಲೆ ಗೋಡೆಯ ಮೇಲೆ ಸೆಗಣಿ ಬೆರಣಿಯ ತಟ್ಟಿ ಬಚ್ಚಲೊಲೆಯಲ್ಲಿ ಸುಟ್ಟು ಬೂದಿ ಮಾಡಿದ ಜ್ಞಾನದ ಹೆಬ್ಬಯಕೆಯನ್ನು ಅವಳು ನನಸಾಗಿಸಿಕೊಳ್ಳುತ್ತಾಳೆ. ಅವಳ ಈ ಪ್ರಯತ್ನದಲ್ಲಿ ತಾಯಿಯ ಬೆಂಬಲ ಬಹು ಮುಖ್ಯವಾಗಿರುತ್ತದೆ.

ನನ್ನ ಮಗಳೇ ಕೇಳು ನಮ್ಮ ಹಿರಿಯರ ಹಾದಿ
ರಕ್ತ ಒಣಗಿದ ಸರಳು
ಒಣ ಮರಮರಮರಾಮ ಮಂತ್ರದ ಮರಳು
ಸಾಲು ಉರುಳು
ನಡೆ ಮಗೂ, ಹೆಗಲಲಿದೆ
ಸಾವಿರ ಸವಾಲು[೩೦]

ಎಂದು ಹಿಂದಿನವರು ರಾಮಧ್ಯಾನದಲ್ಲಿ ಸೊರಗಿದ ಕತೆ ಹೇಳಿ ತನ್ನ ಮಗಳನ್ನು ಶಾಲೆಗೆ ಕಳುಹಿಸುತ್ತಿರುವ ತಾಯಿ. ಪುರುಷ ಪ್ರಧಾನ ವ್ಯವಸ್ಥೆಯನ್ನು ಮೀರಲು ಹೆಣ್ಣಿನ ಸಾಮಾಜೀಕರಣದಲ್ಲಿ ತಾಯಿ ಪಾತ್ರದ ಮಹತ್ವವನ್ನು ಮತ್ತು ತಾಯಿಯೊಬ್ಬಳ ಕೆಲಸದಲ್ಲಿ ಮುಂದಿನ ಬದಲಾವಣೆಯ ಆಶಾಭಾವನೆಯನ್ನು ಸೂಚಿಸಿದೆ. ಈ ಜ್ಞಾನದ ಬಲದಿಂದ ಹೆಣ್ಣು ಜೀವನದಲ್ಲಿ ಅಸಾಧ್ಯವಾದುದನ್ನು ಸಾಧಿಸುತ್ತಾಳೆ. ಇದರ ಬಲದಿಂದಲೇ ಅವಳಿಗೆ ಗೃಹಬಂಧನದಿಂದ ಬಿಡುಗಡೆ ಸಿಗುತ್ತದೆ.

೫. <u>ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ.</u>

ಮಗು ಮತ್ತು ಈಶ್ವರ ಲಿಂಗ ಕವನದಲ್ಲಿ ಭಕ್ತ-ಭಗವಂತನ ನಡುವಿನ ಕಂದರವನ್ನು ತಿಳಿಸುತ್ತಾ ಸಾಮಾಜೀಕರಣದ ಪ್ರಕ್ರಿಯೆಯನ್ನು ತಿಳಿಸುತ್ತದೆ. ಈಶ್ವರ ಲಿಂಗಕ್ಕೆ ನಡೆಯುತ್ತಿದ್ದ ಅಭಿಶೇಕವನ್ನು ನೋಡುತ್ತಾ ಲಿಂಗದ ಜೊತೆ ಸಖ್ಯ ಬೆಳೆಸಿ ಮಗು ಆನಂದಿಸುತ್ತದೆ. ಕ್ಷಣ ಹೊತ್ತಿನಲ್ಲಿಯೇ ಅಲ್ಲಿ ಸಿದ್ಧ ನಗುವಿನ ಮುಖವಾಡ ಕಂಡು ಅಳುವ ಮಗುವಿಗೆ ತೀರ್ಥ ಪ್ರೋಕ್ಷಣೆ ಮಾಡಿ, ಎಲ್ಲವೂ ಸರಿಯಾಗುತ್ತದೆ ಎಂದು ಹೇಳಿ, ಮಗುವನ್ನು ಮುಖವಾಡದ ದೇವರನ್ನು ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ಹಾಗೆಯೇ ಗಂಡು-ಹೆಣ್ಣು ಎಂಬ ಕೃತಕ ಭೇದದಲ್ಲಿ ಗಂಡಿನ ಅಧಿಕಾರವನ್ನು ಹೆಣ್ಣು ಸಹಜ ಎಂಬಂತೆ ಸ್ವೀಕರಿಸುವ ಹಾಗೆ ಬಾಲ್ಯದಿಂದಲೇ ಅವರನ್ನು ತಯಾರು ಮಾಡಲಾಗುತ್ತದೆ. ಮೊದಲು ಮಂತ್ರ-ತಂತ್ರ, ನಂತರ ದಂಡ-ಶಿಕ್ಷೆಗಳಿಂದ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಕ್ಕಳ ಸಾಮಾಜೀಕರಣದಲ್ಲಿಯೇ ತನ್ನ ರೀತಿನೀತಿಗಳನ್ನು ಗೌಪ್ಯವಾಗಿ ಮತ್ತೊಬ್ಬ ಸ್ತ್ರೀಯಿಂದಲೇ ಹೇರುತ್ತಾ ಹೋಗುವುದನ್ನು ಕಾಣಬಹುದು. ತಾಯಿ ಮಗಳಿಗೆ ಮೊದಲು ಸಮಾಜದ ರೀತಿ ರಿವಾಜುಗಳನ್ನು ಹೇಳಿಕೊಡುತ್ತಾ ಹೋಗುತ್ತಾಳೆ. ಅವರ "ನಮ್ಮ ಹಿರಿಯರು

ಯಾರು ಕೇಳು ಮಗಳೇ" ಎಂಬ ಕವಿತೆಯು ಪುರುಷ ಪ್ರಧಾನ ವ್ಯವಸ್ಥೆಯು ಸ್ತ್ರೀಯನ್ನು ನಿರ್ವಚಿಸಿ ನಿಯಂತ್ರಿಸಿದ ಬಗೆಯನ್ನು ತೆರೆದು ತೋರಿಸುತ್ತದೆ.

'ಯಾಕಳುವೆ ಎಲೆ ಮದ್ದು
ನಿನಗುಂಟು ಬೇಕಾದ್ದು'
ಎಂಬ ಜೋಗುಳ ಕೇಳಿ ಹಾಡಿ ಬೆಳೆದವರು
ಹೊಸಿಲಾಚೆಯೇನುಂಟು?
ಪ್ರಶ್ನಾರ್ಥಕವ ಚಿವುಟಿ
ಕೆನ್ನೆ ತಟ್ಟಿಸಿಕೊಂಡು ಬಾಡಿದವರು, ಒಳಗೋಡಿದವರು[೩೧]

ಎಂದು ಪ್ರಾರಂಭವಾಗುವ ಈ ಕವನ ತೊಟ್ಟಿಲಿಂದಲೇ ನಿನಗೆ ಬೇಕಾದುದೆಲ್ಲಾ ಮನೆಯಲ್ಲಿಯೇ ಇದೆ ಎಂದು ಹಾಡುವ ತಾಯಿಯ ಜೋಗುಳ ಕೇಳಿ ಬೆಳೆಯುತ್ತಾ ವಯೋಸಹಜ ಕುತೂಹಲದಿಂದ ಹುಟ್ಟುವ 'ಹೊಸಿಲಾಚೆನೇನುಂಟು?' ಎಂಬ ಪ್ರಶ್ನೆಗೆ ಉತ್ತರವಾಗಿ ಒಡೆತವನ್ನು ತಿಂದು ಒಳಗೆ ಇರುವ ಬದುಕನ್ನು ಆರಿಸಿಕೊಂಡವರಾಗಿದ್ದಾರೆ.

ಜ್ಞಾನ ಪಡೆಯುವ ಹಂಬಲ ಚೆಂಗರುವಿನಂತೆ ಮನಸ್ಸಿನಲ್ಲಿ ಕುಣಿಯುತ್ತಿದ್ದರೂ ಆ ಆಸೆಯನ್ನು ಬಚ್ಚಲ ಒಲೆಯಲ್ಲಿ ಸುಟ್ಟು ಬೂದಿ ಮಾಡಿ. ಮುದ್ದೆ ಕಟ್ಟುವ ಬದುಕನ್ನು ಆಯ್ದುಕೊಂಡು ಅತ್ತವರು ನಮ್ಮ ಹಿರಿಯರು. ಬೆಳಗಿನ ಸೂರ್ಯ ಹುಟ್ಟುವ ಮೊದಲೇ ಇವರ ಕೆಲಸ ಶುರುವಾದರೂ ಇವರ ಬಾಳಿನಲ್ಲಿ ಸೂರ್ಯನ ಮಂದ ಕಿರಣವೂ ಇಲ್ಲ. ಮಾನ ಮರ್ಯಾದೆಗಳ ಗುತ್ತಿಗೆ ಹಿಡಿದು ಅದಕ್ಕಾಗಿಯೇ ಬದುಕಿ ಸತ್ತವರು.

ರಾತ್ರಿ ಹಾಸಿಗೆಯಾಗಿ, ಹಗಲು ದಾಸಿಯಾ ಆಗಿ
ಶ್ಲೋಕಕ್ಕೆ ತಕ್ಕಂತೆ ಪಾಕ ಮುಗುಚಿದರು
ಅಟ್ಟರೂ ಬರಿಯ ಒಗ್ಗರಣೆಯಾದರು
ಉಟ್ಟ ಸೀರೆ ತೊಟ್ಟ ಆಭರಣವಾದರು
ಬಾಣಂತಿ ಕೋಣೆಯಲ್ಲಿ ಅಜ್ಞಾತವಾದರು![೩೨]

ಈ ರೀತಿಯ ಇದ್ದೂ ಇಲ್ಲದ ಅಜ್ಞಾತ ಜೀವನದಲ್ಲಿ ಸವೆದ ನಮ್ಮ ಹಿರಿಯರು ನಮಗೆ ಆದರ್ಶವಾದರು. ಇವರ ಭಕ್ತಿಭಾವ ಎಷ್ಟಿತ್ತು ಎಂದರೆ, ಗಂಡ ಸತ್ತ ಕ್ಷಣವೇ ಅವನಿಗೆ ನಿಷ್ಠೆ ತೋರಿದ ಅವರು ಮಂಡೆ ಬೋಳಿಸಿ, ವ್ರತೋಪವಾಸದಲ್ಲಿ ಹಸಿವು ಗೆದ್ದೆವು ಎಂದು ಮಡಿ ಮುಸುಕಿನಡಿಯಲ್ಲಿ ಕಣ್ಣಿರು ಸುರಿಸಿದರು. 'ಮುಂಡೆ' ಗಾದೆಗೆ ಮೂಲವಾದರು.

ಈ ರೀತಿಯ ಬದುಕಿಗೆ ಬೇಸತ್ತು ತಮ್ಮ ಆಯ್ಕೆಗೆ ಬಾಗಿಲಾಚೆ ಹೊರಟರೆ ಅವರಿಗೆ ಸರಿಯಾದ ಶಿಕ್ಷೆ ಸಿಗುತ್ತಿತ್ತು. ಎಂದು ಹಿಂದಿನವರ ರಾಮಧ್ಯಾನದಲ್ಲಿ ಸೊರಗಿದ ಕತೆ ಹೇಳಿ ತನ್ನ ಮಗಳನ್ನು ಪುರುಷ ಪ್ರಧಾನ ವ್ಯವಸ್ಥೆಗೆ ತಕ್ಕಂತೆ ತಾಯಿಯೇ ಬೆಳೆಸುತ್ತಾಳೆ. ಹೆಣ್ಣಿನ ಸಾಮಾಜೀಕರಣದಲ್ಲಿ ತಾಯಿ ಪಾತ್ರದ

ಮಹತ್ವವನ್ನು ಇಲ್ಲಿ ತಿಳಿಯಬಹುದು. ಮಗಳಿಗೆ ಎಂಬ ಕವನದಲ್ಲಿ ತಾಯಿಯೊಬ್ಬಳು ಮಗಳನ್ನು ಗಂಡನ ಮನೆಗೆ ಕಳುಹಿಸಿಕೊಡುವ ಸಂದರ್ಭದಲ್ಲಿ ಮಗಳಿಗೆ ಕೆಲವು ಹಾರೈಕೆಗಳನ್ನು ಕೆಲವು ಉಪಾಯಗಳನ್ನು ಹೇಳಿಕೊಡುತ್ತಾ "ನಿನ್ನೆ ನಾವಾಗಿ ಬೇರಾಗುವವರು" ನಾವು ಎಂಬ ದುಃಖವನ್ನು ಹೇಳಿಕೊಳ್ಳುತ್ತಾಳೆ. ಸಮಾಜದ ರೀತಿ ನೀತಿಗಳೆನ್ನುವ ಕಲ್ಲು ಮುಳ್ಳಿನ ಹಾದಿ ಬೀದಿಯಲ್ಲಿ ನಡೆಸಿ ಕರೆತಂದ ಅವರು ಒಮ್ಮೆಯೂ ಅವಳಿಗೆ ನೋವಾಯಿತೆ ಎಂದು ಕೇಳದ ಕೊರಗು ಉಳಿಯುತ್ತದೆ. ಆಕೆಯು ಅವಳಿಗಾದ ನೋವನ್ನು ಹೇಳಿಕೊಳ್ಳುವುದಿಲ್ಲ.

ಸಮಾಜದ ಕ್ರೂರ ನಿಯಮಗಳನ್ನು ಮಗಳ ಮೇಲೆ ತಾಯಿಯ ಮೂಲಕ ಹೇರಲ್ಪಡುವ (ರೀತಿಯ) ವಿಷಯದ ಮೇಲೆ ಕವನ ಬೆಳಕು ಚೆಲ್ಲುತ್ತದೆ. ಮಿತ್ರರೋ ಶತೃಗಳೋ ಎಂಬಂತೆ ಜಗಳ ಮಾಡುತ್ತಿದ್ದ ಅವರು ಆ ಕತ್ತಲೆಯಲ್ಲಿಯೇ ಹೊರಗಿನ ಕತ್ತಲೆಯನ್ನು ಚರ್ಚಿಸುತ್ತಿದ್ದರು. ತಾಯಿ ಆ ಕತ್ತಲೆಯಲ್ಲಿ ಬದುಕುವುದು ಹೇಗೆ ಎಂಬುದನ್ನು ಹೇಳಿಕೊಡುತ್ತಾಳೆ.

ಮುತ್ತು ಮಾಣಿಕ್ಯಗಳ ಅರ್ಥಗೊತ್ತಿದೆ ತಾನೆ
ಸೊಲ್ಲ ಮರೆತರೂ ಇರಲಿ ರಾಗ ಸ್ಮರಣೆ
ಶೃತಿಬದ್ಧ ಧೃತಿ ಸ್ವೈರಣೆ.[೩೩]

ಎಂದು ಮಾತಿಗಿಂತ ರಾಗದ[ಹಾಡಿನ] ಜೊತೆ ಬದುಕಲು ಕಲಿಸುತ್ತಾಳೆ.

ಹೆಣ್ಣು ಕಳೆದು ಹೋಗುವ ಸ್ಥಿತಿ ಆಕೆಯ ಮದುವೆಯ ಜೊತೆಗೆ ಪ್ರಾರಂಭವಾಗುತ್ತದೆ. ಮದುವೆಯ ಶಾಸ್ತ್ರದ ಹೆಸರಿನಲ್ಲಿ ನಡೆಯುವ ಹೆಸರು ಹೇಳಿ ಹೊಸಿಲು ದಾಟುವ ಸಂದರ್ಭದಲ್ಲಿ ಹೆಣ್ಣಿನ ಹೆಸರಿಗೆ ಯಾವ ಬೆಲೆಯೂ ಇಲ್ಲ ಎಂಬ ದುಃಖವನ್ನು ಹೇಳಿಕೊಳ್ಳುತ್ತಾಳೆ.

ನಿಂತ ನೆಲದವಳೋ, ನಿಲದ ನೆಲದವಳೋ, ಯಾವ ನೆಲಕೆ ಸಲುವ ಕೂಸು ನಾನು. ಎಂಬ ಹೆಣ್ಣು, ಗಂಡನ ಮನೆ-ತವರಿನ ಮನೆ ಎರಡನ್ನೂ ತನ್ನದಾಗಿಸಿಕೊಳ್ಳುತ್ತಾಳೆ. ಇದು ಕೂಡ ಹೆಣ್ಣಿನ ಜೀವನದ ವಿಶಿಷ್ಟಭಾಗವಾಗಿದೆ. ಆದರೆ ಈ ಜೀವನಕ್ಕೆ ಪುರುಷ ಪ್ರಧಾನ ವ್ಯವಸ್ಥೆ ಬಲವಂತವಾಗಿ ದೂಡಿತ್ತಿದೆ. ಆದರೆ ಹೆಣ್ಣು ಇದಕ್ಕೆ ಪ್ರತಿರೋಧ ತೋರುವ ವ್ಯರ್ಥಕಾರ್ಯಕ್ಕೆ ಬದಲಾಗಿ, ತನ್ನ ಎಲ್ಲ ಸಂಕಟಗಳನ್ನು ಮರೆಮಾಚಿ, ಅಲ್ಲಿಯು ಬದುಕುವ ತನ್ನದೇ ರೀತಿಯನ್ನು ಕಂಡುಕೊಳ್ಳುತ್ತಾಳೆ. ಹೀಗಾಗಿ ಅವಳು ಸಂಬಂಧಗಳನ್ನು ಬೆಸೆಯುವವಳಾಗಿದ್ದಾಳೆ.

ಪುರುಷ ಪ್ರಧಾನ ವ್ಯವಸ್ಥೆಯು ಹೆಣ್ಣಿನ ಆಯ್ಕೆಗೆ ಸ್ವಾತಂತ್ರ್ಯ ನೀಡಿರುವ 'ಸ್ವಯಂವರ' ಎಂಬ ನಾಟಕವನ್ನು "ಸ್ವಯಂವರ ಗೀತೆ" ಎಂಬ ಪದ್ಯವೂ ಬಯಲಿಗೆಳೆಯುತ್ತದೆ. ಸ್ವಯಂವರಕ್ಕೆ ಬಂದ ರಾಜಕುಮಾರರು ರಾಜನ ಆಯ್ಕೆ, ರಾಜಕುಮಾರಿಯ ಆಯ್ಕೆಯಾಗದೇ ಉಳಿಯುತ್ತಾರೆ. ತಂದೆಯ ಆಯ್ಕೆಯ ಅವರೆಲ್ಲ ಅವಳಿಗೆ ಬೇಟೆಯವರಾಗಿ ಕಾಣುತ್ತಾರೆ.

ಅಡಿ ಟಿಪ್ಪಣಿಗಳು

೧. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, (ಸಂ) ಎಚ್.ಎಸ್.ಪಾರ್ವತಿ, ಪು-೩೮೬
೨. ವೈದೇಹಿಯವರ ಆಯ್ದ ಕವಿತೆಗಳು, ವೈದೇಹಿ, ಪು-೧೨
೩. ಅದೇ ಪು-೧೧
೪. ಅದೇ ಪು-೧೧
೫. ಅದೇ ಪು-೧೨
೬. ಅದೇ ಪು-೨೫
೭. ಅದೇ ಪು-೩೮
೪. ಅದೇ ಪು-೦೭
೯. ಅದೇ ಪು-೧೯
೧೦. ಅದೇ ಪು-೨೧
೧೧. ಅದೇ ಪು-೧೭
೧೨. ಅದೇ ಪು-೧೭
೧೩. ಅದೇ ಪು-೧೭
೧೪. ಅದೇ ಪು-೫೦
೧೫. ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ, ಎಲ್.ಜೆ.ಮೀರಾ. ಪು-೩೪
೧೬. ವೈದೇಹಿಯವರ ಆಯ್ದ ಕವಿತೆಗಳು-ವೈದೇಹಿ. ಪು-೮೧
೧೭. ಅದೇ ಪು-೯೧
೧೮. ಅದೇ ಪು-೨೨
೧೯. ವಿಭಾವ, ಎಲ್.ಸಿ.ಸುಮಿತ್ರಾ, ಪು-೧೦೨
೨೦. ಸ್ತ್ರೀಮತವನುತ್ತರಿಸಲಾಗದೆ, ಎಂ.ಎಸ್. ಆಶಾದೇವಿ, ಪು-೧೧೧
೨೧. ವೈದೇಹಿ ಅವರ ಆಯ್ದ ಕವಿತೆಗಳು, ವೈದೇಹಿ, ಪು-೨೯
೨೨. ಸ್ತ್ರೀಮತವನುತ್ತರಿಸಲಾಗದೆ, ಎಂ.ಎಸ್. ಆಶಾದೇವಿ, ಪು-೧೧೧
೨೩. ಅದೇ ಪು-೧೧೧
೨೪. ವೈದೇಹಿ ಅವರ ಆಯ್ದ ಕವಿತೆಗಳು, ವೈದೇಹಿ, ಪು-೩೧
೨೫. ಅದೇ ಪುಟ-೧೦
೨೬. ಅದೇ ಪು-೫೮
೨೭. ಅದೇ ಪು-೫೯
೨೮. ಅದೇ ಪು-೧೦೭
೨೯. ಅದೇ ಪು-೧೦೭
೩೦. ಅದೇ ಪು-೬೧
೩೧. ಅದೇ ಪು-೫೯
೩೨. ಅದೇ ಪು-೬೦
೩೩. ಅದೇ ಪು-೮೩

೪. ವೈದೇಹಿಯವರ ಕತೆಗಳಲ್ಲಿ ಸ್ತ್ರೀ.

ಪ್ರತಿಯೊಬ್ಬ ಹೆಣ್ಣು ತನ್ನ ಕಥೆಗಳನ್ನು ಮಾತ್ರವಲ್ಲದೆ ಅನೇಕರ ಕಥೆಗಳನ್ನು ತನ್ನಲ್ಲಿ ಹುದುಗಿಸಿಕೊಂಡಿರುತ್ತಾಳೆ. ಪ್ರತಿಯೊಬ್ಬ ಹೆಣ್ಣಿನ ಬದುಕು ಒಂದು ಬರೆದಿಡದ ಕಥೆಯಾಗಿರುತ್ತದೆ. ಬದುಕೇ ಒಂದು ಕಥೆ ಯಾವಾಗ ಆಗುತ್ತದೆಂದರೆ ಅದರಲ್ಲಿ ಅನೇಕ ಅನಿರೀಕ್ಷಿತ ತಿರುವುಗಳು ಇದ್ದಾಗ ಹೆಣ್ಣಿನ ಬದುಕಿನ ಪ್ರತಿಯೊಂದು ಹಂತವೂ ಇಂತಹ ತಿರುವುಗಳನ್ನು ಪಡೆಯುತ್ತಿರುತ್ತದೆ. ಅವಳು ಯೌವನಕ್ಕೆ ಕಾಲಿರಿಸುವುದರೊಂದಿಗೆ ಇದು ಆರಂಭವಾಗುತ್ತದೆ. ಹೆಣ್ಣೊಬ್ಬಳು ಹೆಂಡತಿಯಾಗುತ್ತಾಳೆ, ತಾಯಿಯಾಗುತ್ತಾಳೆ, ಸೊಸೆಯಾಗುತ್ತಾಳೆ, ವಿಧವೆಯಾಗುತ್ತಾಳೆ, ಪರಿತ್ಯಕ್ತಳಾಗುತ್ತಾಳೆ.... ಈ ಒಂದೊಂದು ಘಟನೆಯೂ ಅವಳ ಬದುಕಿನಲ್ಲಿ ಬಹುದೊಡ್ಡ ಪಲ್ಲಟವನ್ನು ಉಂಟುಮಾಡುವಂಥದು. ಇದಕ್ಕೆ ಪ್ರತಿಯಾಗಿ ಪುರುಷನ ಬದುಕಿನಲ್ಲಿ ಹೆಚ್ಚಿನ ತಿರುವುಗಳಿಲ್ಲ. ಅವನ ಪಾತ್ರಗಳು ಹೆಚ್ಚು ಬದಲಾಗುವುದಿಲ್ಲ. ಹೆಣ್ಣು ಮಾತ್ರ ತನಗೆ ಬೇಕಿರಲಿ ಬೇಡದಿರಲಿ ವಿವಿಧ ಪಾತ್ರಗಳನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇದರಿಂದ ಪ್ರತಿಯೊಂದು ಹೆಣ್ಣಿಗೂ ತನ್ನದೇ ಆದ ಕಥೆ ರೂಪುಗೊಂಡು ಅವಳ ಕಥೆಯೇ ಕಥೆಗೆ ವಸ್ತುವೂ ಆಗಿಬಿಡುತ್ತದೆ.

ಹೆಣ್ಣು ಲೇಖಕಿಯಾದರೂ ಪಿತೃಪ್ರಧಾನ ಸಮಾಜ ಅವಳನ್ನು ಹೆಣ್ಣಾಗಿಯೇ ಕಾಣುವುದರಿಂದ ಆಕೆಯ ಅನುಭವಗಳು ಕೌಟುಂಬಿಕ ವಲಯದೊಳಗೇ ಇರುತ್ತವೆ. ಅಡುಗೆ ಮನೆ, ಕುಟುಂಬಗಳು ಆಕೆಗೆ ಕಥಾ ಸಾಮಗ್ರಿಯನ್ನು ಒದಗಿಸುವ ಆಕರಗಳಾಗಿವೆ.

ಅಧ್ಯಯನದ ಅನುಕೂಲಕ್ಕಾಗಿ ಕೆಳಗಿನಂತೆ ವಿಭಾಗಿಸಲಾಗಿದೆ.

೧. ಬಡತನ, ಅಂತಸ್ತು ಮತ್ತು ಸ್ತ್ರೀ.
೨. ಸ್ತ್ರೀ ಅನನ್ಯತೆ
೩. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ
೪. ಮದುವೆ ಮತ್ತು ಹೆಣ್ಣು
೫. ವೈದೇಹಿವರ ಸ್ತ್ರೀ ವಾದದ ದರ್ಶನ

೧. <u>ಬಡತನ, ಅಂತಸ್ತು ಮತ್ತು ಸ್ತ್ರೀ.</u>

ವೈದೇಹಿಯವರ ಕತೆಗಳಲ್ಲಿ ದುಡಿತವೇ ಬದುಕೆಂದು ಬಾಳಿದ ಹೆಣ್ಣುಗಳಿಗೆ ತಮ್ಮ ದುಡಿಮೆಯ ಪ್ರತಿಫಲದ ಮೇಲೆ ಯಾವುದೇ ಹಕ್ಕಿಲ್ಲವೆಂಬ ವಾಸ್ತವವನ್ನು ಅವರ ಬಾಬುಲಿ, ತಾಯಿ ಮತ್ತು ನಸೀಬು, ಹಕ್ಕಿಲ್ಲದವರು ಕಥೆಗಳು ಚಿತ್ರಿಸುತ್ತವೆ.

ಒಂದು ಮನೆ ಕಟ್ಟುವ ಆಸೆಯನ್ನು ಹೊಂದಿದ್ದ ಬಾಬುಲಿಯ ತಾಯಿ, ಒಂದು ಮನೆಯನ್ನು ಸಾಲ ಮಾಡಿ ಕೊಳ್ಳುತ್ತಾಳೆ. ಆ ಸಾಲ ತೀರಿಸಲು ಅವಳು ಮತ್ತು ಅವಳ ಮಗಳು ಹಗಲು ರಾತ್ರಿಯೆನ್ನದೆ ದುಡಿಯುತ್ತಾರೆ. ಶಾಲೆಯಿಂದ ಬರುತ್ತಿದ್ದ ಬಾಬುಲಿ ಹಾಲು, ಎಣ್ಣೆ, ಹೂ ಇತ್ಯಾದಿಗಳನ್ನು ಮಾರಲು ಹೋಗುತ್ತಿದ್ದಳು. ಬಂದ ಕೂಡಲೇ ಅವರ ಮನೆಯ ಸುತ್ತ ಆಗ ತಾನೇ ನೆಟ್ಟು ಬೆಳಸುತ್ತಿದ್ದ ತೆಂಗಿನ ಸಸಿಗಳಿಗೆ ಬಾವಿಯಿಂದ ನೀರು ಹಾಕುತ್ತಿದ್ದರು. ಕಸೂತಿ ಹಾಕಿ ಮಾರುತ್ತಿದ್ದ ಬಾಬುಲಿಯನ್ನು ಅವಳ ತಾಯಿಯನ್ನು ಊರಿನವರು ಜಿಪುಣಿ ಎಂದು ಕರೆಯುತ್ತಿದ್ದರು. ಈ ಜಿಪುಣತನದಿಂದ ತನ್ನ ಹೊಟ್ಟೆ ಬಟ್ಟೆ, ವಿಶ್ರಾಂತಿ, ಆಟ-ಪಾಠಗಳನ್ನು ಬದಿಗಿಟ್ಟು ಮಾಡಿದ ಮನೆ ಕಡೆಗೆ ಅಗ್ಗದ ಬೆಲೆಗೆ ಬೇರೆಯವರ ಪಾಲಾಗುತ್ತದೆ. ಅವರು ಕಷ್ಟಪಟ್ಟು ಬೆಳೆಸಿದ ತೆಂಗಿನ ಮರಗಳಲ್ಲಿ ಸೊಗಸಾದ ತೆಂಗಿನಕಾಯಿಗಳು ಬಿಡುತ್ತಿವೆ. ಆದರೆ ಅದರ ಫಲ ಸಿಗುತ್ತಿರುವುದಿ ಆ ಮನೆಕೊಂಡ ವತ್ಸಲಾಳಿಗೆ. ಅವಳು ಕಡಿಮೆ ಕ್ರಯಕ್ಕೆ ಮನೆ ಕೊಂಡ ಖುಷಿಯನ್ನು ನಿರೂಪಕಿಗೆ ಹೇಳಿಕೊಳ್ಳುತ್ತಿದ್ದರೂ, ನಿರೂಪಕಿಯ ಮನಸ್ಸು ಬಾಬಲಿ ಮತ್ತು ಅವಳ ತಾಯಿಯ ಬಗ್ಗೆಯೇ ಯೋಚಿಸುತ್ತಿದೆ. ಅಷ್ಟು ಪ್ರೀತಿಯಿಂದ ತೆಗೆದುಕೊಂಡ ಮನೆಯನ್ನು ಮಾರಲು ಎದುರಾದ ಕಷ್ಟಗಳ ಕಡೆಗೆ ಯೋಚಿಸುತ್ತಾಳೆ.

ಮಗಳಿಗೆ ಮದುವೆ ಮಾಡಿ ತಾಯಿ, ಮಗಳ ಜೀವನ ಸರಿದಾರಿಯಲ್ಲಿ ಸಾಗದೇ ಹಿಂದಕ್ಕೆ ಬಂದಾಗ ನಿರ್ವಾಹವಿಲ್ಲದೆ ಮನೆ ಮಾರಿ ಬಾಡಿಗೆಮನೆಯಲ್ಲಿ ಕಾಲ ತಳ್ಳುತ್ತಿದ್ದಾರೆ. ಮನೆಯವರನ್ನು ಇಕ್ಕಟ್ಟಿಗೆ ಸಿಲುಕಿಸಿ ಮನೆಕೊಂಡ ವತ್ಸಲಾಳ ಸಂತೋಷದಲ್ಲಿ ಪಾಲ್ಗೊಳ್ಳಲು ಅಸಹ್ಯವಾಗುತ್ತದೆ.

ಜೀವನದಲ್ಲಿ ಎಷ್ಟು ಬಾರಿ ಸೋತರೂ ಗೆಲ್ಲುವ ಛಲಬಿಡದೆ ಬದುಕು ಸಾಗಿಸುತ್ತಿರುವ ಬಾಬುಲಿ ವಿಶಿಷ್ಟವಾಗಿ ಕಥೆಯಲ್ಲಿ ಚಿತ್ರಿತವಾಗುತ್ತಾಳೆ. ಚಿಕ್ಕಂದಿನಲ್ಲಿಯೇ ಬದುಕಿನ ಹೋರಾಟವನ್ನು ಎದುರಿಸುವ ಪಾಠಗಳನ್ನು ತಾಯಿಂದ ಕಲಿತ ಅವಳು, ಈಗಲೂ ಮುಂದುವರೆಸಿದ್ದಾಳೆ. ಮದುವೆಯ ಸೋಲಿನ ನಂತರ ಏಕಾಂಗಿಯಾಗಿ ಸ್ವಾಭಿಮಾನದ ಬದುಕು ಸಾಗಿಸುತ್ತಿದ್ದಾಳೆ. ಸಂಗೀತ ಶಾಲೆ ಇತ್ಯಾದಿ ಇತ್ಯಾದಿಗಳ ಮೂಲಕ ಬದುಕನ್ನು ಪುನಃ ಕಟ್ಟುವ ಪ್ರಯತ್ನ ಮಾಡುತ್ತಿದ್ದಾಳೆ. ಇಲೆಕ್ಷನ್‌ನಲ್ಲಿ ಎರಡು ಬಾರಿ ಸೋತರೂ ಮತ್ತೆ ನಿಂತಿದ್ದಾಳೆ, ಇಲ್ಲಿ ಕಾಣುವುದು ಬಾಬುಲಿಯಲ್ಲಿ ಬದುಕನ್ನು ಗೆಲ್ಲುವ ಛಲವೇ ಹೊರತು ಬದುಕಿಗೆ ಬೆನ್ನು ತಿರುಗಿಸಿ ಸೋಲುವವಳಲ್ಲ. ಇದು ಹೆಮ್ಮೆ ಪಡುವ ವಿಷಯವಾಗಿದೆ. ಆದ್ದರಿಂದ ಅವಳನ್ನು ಗೆಲ್ಲಿಸಿ ಎಂದು ನಿರೂಪಕಿ ಕೇಳಿಕೋಂಡು ಅಲ್ಲಿಂದ ಹೊರಡುತ್ತಾಳೆ.

ಹಕ್ಕಿಲ್ಲದವರು ಕತೆಯ ಸಿರಿ, ಹೆಸರು ಸಿರಿ ಎಂದಿದ್ದರೂ ಬಡತನದಲ್ಲಿ ತನ್ನದೆಲ್ಲ ಕಳೆದುಕೊಂಡು ಬದುಕಿನ ಜೊತೆ ಹೋರಾಡುತ್ತಿದ್ದಾಳೆ. ತನ್ನ ಬೆಂಡೋಲೆ ಮಾರಿ ಅಡಿಕೆ ಸಸಿಗಳನ್ನು ನೆಡಿಸಿದ್ದಾಳೆ. ಮದುವೆಯಾಗಿಯೂ ಅಪ್ಪನ ಮನೆಯಲ್ಲಿ ನಿಂತಿರುವ ಅವಳಿಗೆ ಭೂಮಿಯನ್ನು ನೋಡಿಕೊಳ್ಳುವ, ಹಾರೈಕೆ

ಮಾಡುವ ಹಕ್ಕಿದೆಯೇ ಹೊರತು ತನ್ನದೆಂಬುವ ಹಕ್ಕಿಲ್ಲ. ಅವಳ ಮನೆಗೆ ಬರುವ ಶ್ರೀಮಂತ ಬಂಧುಗಳಾದ ಪದ್ಮಮಾವ ಮತ್ತು ಮಕ್ಕಳಿಗೆ ಸಿರಿಯ ಬದುಕು ಅವಳ ಹೋರಾಟ ಅರ್ಥವಾಗುವುದಿಲ್ಲ. ಅವಳನ್ನು, ಅವಳ ಬದುಕನ್ನು ಟೀಕಿಸಲೆಂದೇ ಬಂದವರಂತೆ ಕಾಣುತ್ತಾರೆ. ಬಂದವರಿಗೆ ತಮ್ಮ ಹಿರಿಮೆಯನ್ನು ಹೇಳಿಕೊಳ್ಳುವುದರಲ್ಲಿಯೇ ಹೆಚ್ಚು ಆಸಕ್ತಿ.

ಮನೆಯ ಗಂಡಸಿನಂತೆ ಜವಾಬ್ದಾರಿಗಳನ್ನು ನಿರ್ವಹಿಸುತ್ತಿರುವ ಸಿರಿಗೆ "ತನ್ನದೇ ವಯಸ್ಸಿನ ಮಾಧುರಿಯ ಹತ್ತಿರ ಅಮ್ಮ ತನ್ನ ದೂರು ಹೇಳುವುದು ಬೇಡವಿತ್ತು. ಕಡೆಗೂ ...... ಮನೆಯಲ್ಲೇ ಮುಚ್ಚಟೆಯಾಗಿ ಕುಳಿತು ಗಂಡ ತಂದ ಸಂಪಾದನೆಯಲ್ಲಿ ಜೀವನ ಕಳೆಯುವ ಇವರೇ ಶ್ರೇಷ್ಠರು; ಎಲ್ಲರ ದೃಷ್ಟಿಯಲ್ಲಿಯೂ ಸಂಪಾದನೆ ಮಾಡದ ಪ್ರೀತಿಯೆಂದರೆ ದೇಹ ಎಂದುಕೊಂಡಂತಹ ಗಂಡಸನ್ನು ಕಟ್ಟಿಕೊಂಡು ಗಂಡುಬಲವಿಲ್ಲದ ನೋವನ್ನು ಒಳಗೇ ನುಂಬಿ, ತೋಟ ಗದ್ದೆ ಎಂದು ಇಪ್ಪತ್ತನಾಲ್ಕು ಗಂಟೆ ದುಡಿಯುವ ತಾನು ಏನೂ ಅಲ್ಲ! ಅಮ್ಮನ ಕಣ್ಣಿನಲ್ಲಿಯೂ"[೧] ಎಂದು ಯೋಚಿಸುತ್ತಾಳೆ.

"ಕತೆಯ ಶೀರ್ಷಿಕೆಯೇ ತನ್ನಲ್ಲಿ ಅನೇಕ ಅರ್ಥಗಳನ್ನು ಒಳಗೊಂಡಿದೆ.

೧] ಹೇಗೋ ಸಾಗುತ್ತಿದ್ದ ಸಿರಿಯ ಜೀವನವನ್ನು ಟೀಕಿಸಲು ಅಪರೂಪಕ್ಕೊಮ್ಮೆ ಅವಳ ಮನೆಗೆ ಬಂದ ಅವಳ ಶ್ರೀಮಂತ ಬಂಧುಗಳಾದ ಪದ್ಮಮಾವ ಮತ್ತು ಮಕ್ಕಳಿಗೆ ಹಕ್ಕಿಲ್ಲ.

೨] ಸಿರಿಗೆ ತಾನು ದುಡಿಯುತ್ತಿದ್ದ ತೋಟ ಅಪ್ಪನ ನಂತರ ಅಣ್ಣನಿಗೆ ಸೇರಬೇಕಾದುದರಿಂದ ಅದರ ಮೇಲೆ ಹಕ್ಕಿಲ್ಲ.

೩] ಸಿರಿಯ ತಾಯಿ ತವರಿನವರಿಂದ ದೊಡ್ಡಕ್ಕ ಎಂದು ಕರೆಸಿಕೊಳ್ಳುವವಳಿಗೆ ತವರೂರಿನ್ಲಿ ಬೇಕಾದಷ್ಟು ಶ್ರೀಮಂತಿಕೆ ಇದ್ದರೂ ಅದರ ಮೇಲೆ ಹಕ್ಕಿಲ್ಲ.

೪] ಸಿರಿಗೆ ಹೆಣ್ಣಾದುದರಿಂದ ವ್ಯವಸ್ಥೆಯ ವಿರುದ್ಧ ಮಾತಾಡಲು ಹಕ್ಕಿಲ್ಲ."[೨]

ಚಿಕ್ಕನ ಸತ್ಯಾಗ್ರಹ ಕತೆಯು ಬಡವರ ಬದುಕಿನ ಹಕ್ಕು ನಿರಾಕರಣೆಯಾಗುವ ವ್ಯವಸ್ಥೆಯ ಚಿತ್ರಣವನ್ನು ನೀಡುತ್ತದೆ. ಬೇರೆಯವರ ಕಸ-ಮುಸುರೆ ಮಾಡಿಕೊಂಡಿದ್ದ ಚಿಕ್ಕನ ಮನೆಯ ಮುಂದೆ ಬಂಗಲೆಯಂತ ಮನೆ ಕಟ್ಟುವಾಗ ಚಿಕ್ಕನ ಸಂತೋಷಕ್ಕೆ ಪಾರವೇ ಇರಲಿಲ್ಲ. ನಾಳೆ ಈ ಮನೆ ಕಟ್ಟಿದ ಮೇಲೆ ಅಲ್ಲಿಯೂ ತನ್ನನ್ನೇ ಕೆಲಸಕ್ಕೆ ಕರೆಯುತ್ತಾರೆ ಎಂಬ ನಿರೀಕ್ಷೆಯಲ್ಲಿದ್ದಳು. ಆದರೆ ಆ ಮನೆ ಕೆಲಸಕ್ಕೆ ಬೇರೆ ವಕ್ಕಲು ಬಂದು ಸೇರಿದ್ದು, ಅದರ ಜೊತೆಗೆ ಮನೆಯ ಪ್ರವೇಶದ ದಿನದಂದು ಎಂಜಲು ಎಲೆಯನ್ನೆಲ್ಲಾ ಇವಳ ಮನೆಯ ಮುಂದೆ ಎಸೆದುಹೋಗಿದ್ದು ಚಿಕ್ಕನಿಗೆ ಸಹಿಸಲಾಗಲಿಲ್ಲ. ಮನೆಯಲ್ಲಿ ಯಜಮಾನ ಇನ್ನಿಸಿಕೊಂಡ ಗಂಡ ಸುಮ್ಮನಿದ್ದಾಗ ತನ್ನ ಮನೆ ಉಳಿಸಿಕೊಳ್ಳುವ ಕೆಲಸವನ್ನು ಅವಳೇ ಮಾಡಬೇಕಾಗುತ್ತದೆ. ಎಷ್ಟು ಹೇಳಿದರೂ ಅವಳ ಮನೆಯ ಕಡೆ ಕಸ ಬಿಸಾಕುವುದನ್ನು ಬಿಡದ ಆ ದೊಡ್ಡ ಮೇಲೆ ದರ್ಪ ತೋರಿಸುತ್ತಾರೆ. ಚಿಕ್ಕನನ್ನು ಬಂದೂಕು ತೋರಿಸಿ ಬಾಯಿ ಮುಚ್ಚಿಸುತ್ತಾರೆ.

ಹೀಗೆ ಆ ಗುಡಿಸಲಿನ ಗಾಳಿ-ಬೆಳಕು ಎಲ್ಲದಕ್ಕೂ ಆ ದೊಡ್ಡಮನೆ ಅಡ್ಡಿಯಾಗಿ, ಕಸದ ತೊಟ್ಟಿಯಂತಾಗಿ, ಚಿಕ್ಕ ಮತ್ತು ಅವಳ ಸಂಸಾರ ಉಸಿರುಗಟ್ಟಿದಂತೆ ಬಾಳಬೇಕಾದ ಅನಿವಾರ್ಯತೆಯಲ್ಲಿಯೂ ಸಮಾಜ ಅವಳ ಜೊತೆ ಕೈಗೂಡಿಸಿ ನ್ಯಾಯ ಕೊಡಿಸುವುದಿಲ್ಲ. ಅವಳ ಪ್ರತಿಭಟನೆಯನ್ನು ನಿಲ್ಲಿಸುವ ಪ್ರಯತ್ನದಲ್ಲಿಯೇ ತೊಡಗುತ್ತದೆ. ಈ ಕತೆ ಒಂದೆಡೆ ಚಿಕ್ಕ ಮತ್ತು ಅವಳ ಮಗಳ ಸಂತೋಷ-ಸಂಭ್ರಮ ಯಾತನೆಗಳನ್ನು ಚಿತ್ರಿಸಿದರೆ, ಮತ್ತೊಂದೆಡೆ ಇಂತಹವರ ಮೇಲೆ ಸಮಾಜ ನಡೆಸುತ್ತಿರುವ ದೌರ್ಜನ್ಯ ಮತ್ತು ನಿರ್ಲಕ್ಷ್ಯವನ್ನು ಚಿತ್ರಿಸುತ್ತದೆ.

ಒಂದು ಕಳ್ಳ ವೃತ್ತಾಂತ ಕಥೆಯು ಬಚ್ಚಮ್ಮ ಕದಿಯುವ ಚಟಕ್ಕೆ ಬೀಳುತ್ತಾಳೆ. ಅವಳು ಕುದಿಯುತ್ತಿದ್ದುದು ತಿಂಡಿಗಳ ಮತ್ತು ಅಡುಗೆ ಮಾಡಲು ಬೇಕಾದ ಸಣ್ಣ ಪುಟ್ಟ ವಸ್ತುಗಳ (ದ್ರಾಕ್ಷಿ, ಗೋಡಂಬಿಯಂತಹ)ನ್ನು ಮಾತ್ರ. ಅವಳೇನು ಹುಟ್ಟನಿಂದ ಕಳ್ಳಿಯಲ್ಲ, ಆದರೆ ಅವಳು ಹುಟ್ಟಿದ್ದ ಪ್ರಪಂಚದಲ್ಲಿ ಎಲ್ಲದಕ್ಕೂ ತತ್ವಾರವೇ ಇತ್ತು. ಮದುವೆಯ ನಂತರ ಬದುಕಿನಲ್ಲಿ ಬೇಕಾದ ಹಾಗೆ ಉಂಡುಟ್ಟು ತಿರುಗುವೆ ಎಂಬ ಅವಳ ಆಸೆ ವಾಚಣ್ಣನೊಡನೆ ಮದುವೆಯ ನಂತರ ಹುಸಿಯಾಯಿತು. ಬದುಕಿನಲ್ಲಿ ಮುಂದೆ ಬರುವ ಎಲ್ಲ ಒಳ್ಳೆಯ ದಾರಿಗಳೂ ಮುಚ್ಚಿಹೋದಾಗ ಅವಳು ಈ ದಾರಿ ತುಳಿಯುತ್ತಾಳೆ.

ಬಚ್ಚಮ್ಮನ ಗಂಡ ವಾಚಣ್ಣ ದಿನಸಿ ಅಂಗಡಿಯಲ್ಲಿ ಕೆಲಸದಲ್ಲಿದ್ದ. ಅವನ ರಟ್ಟೆಯ ಬಲದಿಂದ ಅವನ ಸಾಹುಕಾರ ಬೆಳೆಯುತ್ತಿದ್ದ. ಅಲ್ಲಿ ಕೊಡುತ್ತಿದ್ದ ಸಂಬಳವೂ ಕಡಿಮೆ. ವಾಚಣ್ಣನೂ ಚುರುಕಿಲ್ಲದ ಕಾರಣ ಬಚ್ಚಮ್ಮನ ಬೇಕು ಬೇಕಾದುದನ್ನು ಉಂಡುಟ್ಟು ತಿರುಗುವ ಕನಸು ಕನಸಾಗಿಯೇ ಉಳಿಯಿತು. ತನ್ನದೇ ಒಂದು ಪುಟ್ಟ ಅಂಗಡಿ ತೆರೆಯಲು ಒತ್ತಾಯಿಸಿದ ಬಚ್ಚಮ್ಮನಿಗೆ ಗಂಡ ಪ್ರೋತ್ಸಾಹಿಸುವುದಿಲ್ಲ. ವಾಚಣ್ಣನ ಅಧೈರ್ಯದಿಂದಾಗಿ ಬದುಕಿನಲ್ಲಿ ಒಳ್ಳೆ ದಿನಗಳನ್ನು ಕಾಣುವ ಅವಳ ಕನಸು ಚೂರು ಚೂರಾಯಿತು.

ವಿಶೇಷ ಅಡಿಗೆಯ ಸಹಾಯಕ್ಕೆಂದು ದೊಡ್ಡವರ ಮನೆಗೆ ಹೋಗುತ್ತಿದ್ದ ಬಚ್ಚಮ್ಮ, ಮಕ್ಕಳಿಗೆ ಕೆಲವು ತಿಂಡಿಗಳನ್ನು ಕದಿಯಲು ಪ್ರಾರಂಭಿಸಿದಳು. ಇದು ಹಾಗೆಯೇ ಮುಂದುವರಿಯಿತು. ಅವಳ ಈ ಕೆಲಸ ಊರಿಗೆಲ್ಲ ಗೊತ್ತಾಗಿ ಎಲ್ಲರೂ ಅವಳಿಗೆ ಕದಿಯಬೇಡ, ಇಲ್ಲವೆಂದರೆ ಕೇಳು ಕೊಡುತ್ತೇನೆ ಎಂದು ಉಪದೇಶಿಸುವಂತಾಯಿತು. "ಆದರೆ ಯಾವುದನ್ನೆಲ್ಲಾ ಇಲ್ಲ ಎಂದು ಕೇಳುವುದು? ಎಷ್ಟು ಸಲ ಕೇಳಬಹುದು? ಒಂದು ಸಲ, ಎರಡು ಸಲ, ಸಮ. ಮೂರನೆಯ ಸಲ 'ಅಯ್ಯ, ಇದೆಲ್ಲಿಯ ನಾರಟೆ!' ಎನ್ನುವುದಿಲ್ಲವೇ ಇದೇ ಜನಗಳು? ಅದಕ್ಕಿಂತ ಅವರ ಉಪದೇಶವನ್ನು ಮಾತೆತ್ತದೆ ಕೇಳುವುದು ಮತ್ತು ತಾನು ಕಲಿತ ವಿದ್ಯೆ ಮುಂದುವರಿಸುವುದೇ ಅವಳಿಗೆ ಸುಖ ಕಾಣುತ್ತದೆ. ಕದ್ದರೆ ತಾನು ಏನು ಕದ್ದೇನು?

ಒಂದಿಷ್ಟು ತಿಂಡಿ ತೀರ್ಥ ದಿನಸು. ಇನ್ನೇನು? ದೊಡ್ಡದೆ ಚಿನ್ನ ಬಣ್ಣವೇನೂ ಅಲ್ಲವಲ್ಲ ಎಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳುವಳು ಬಚ್ಚಮ್ಮ."[೩]

ಒಮ್ಮೆ ತಿಮ್ಮರಾಯರ ಮನೆಯಲ್ಲಿ ಅಡುಗೆಗೆ ಹೋದಾಗ ಮಕ್ಕಳ ಮೇಲಿನ ಮಮತೆಯಿಂದ "ಇಷ್ಟಪ್ಪ ತಿಂಡಿ ಇದ್ರೂ ಗಂಗಮ್ಮ 'ಇಗಾ, ಮಕ್ಕಳ ಕೈ ಮೇಲೆ ಹಾಕು'–ಎಂದು ಕಟ್ಟಿಕೊಡುವವರಲ್ಲ. ಬೇಕಾದರೆ ಬಾಯಿಂದ ಉದ್ದ ಹಂಗಿಸಿಯಾರು, ಹಂಗಿಸಿದರಲ್ಲ ಈ ಭಟ್ಟನೆದುರಿಗೆ? ಹಸಿದವರೆದುರು ಉಂಡವರ ತೇಗಿನಂತಹ ಠೇಂಕಾರವಲ್ಲವೆ ಅದು?"[೪] ಎಂದು ಯೋಚಿಸಿ ಕೆಲವು ತಿಂಡಿಗಳನ್ನು ತೆಗೆದಿಟ್ಟುಕೊಂಡಳು. ಈ ವಿಷಯ ಅಡುಗೆ ಭಟ್ಟನಿಂದ ಗಂಗಮ್ಮನಿಗೆ ತಿಳಿದು ಅವಳ ಜಪ್ತಿ ನಡೆಯಿತು. ಕಳ್ಳಿಯೆನ್ನು ಹಿಡಿದ ರೋಮಾಂಚನದಲ್ಲಿ ಎಲ್ಲರೂ ಇರುವಾಗ ಈ ಘಟನೆ ಬಚ್ಚಮ್ಮನ ಮಗ ಮಂಜುನಾಥನಿಗೆ ತೀವ್ರವಾದ ಆಘಾತವನ್ನುಂಟುಮಾಡಿತು. ಅಂದಿನ ದಿನವೇ ಅವನು ಅಮ್ಮನಿಗೆ ಎಲ್ಲಿಯೂ ಕೆಲಸಕ್ಕೆ ಹೋಗಬೇಡ ಎಂದು ಹೇಳಿದ, ಮನೆಯಿಂದ ದೂರ ಹೋಗಿ ಹೋಟೆಲಿನಲ್ಲಿ ಕೆಲಸಕ್ಕೆ ಸೇರಿಕೊಂಡ. ಈ ಘಟನೆಯೂ ವಾಚಣ್ಣನ ಮನಸ್ಸಿನಲ್ಲಿ ಒಂದು ಸಣ್ಣ ದುಃಖವನ್ನುಂಟುಮಾಡಿದೆ. ಹೊರತು ಬೇರೆ ಯಾವ ಬದಲಾವಣೆಯೂ ಇಲ್ಲ.

ಬಚ್ಚಮ್ಮ ಅವಳ ಬಡತನದಿಂದ ದಿನೇ ದಿನೇ ಇನ್ನಷ್ಟು ಅನುಮಾನಗಳಿಗೆ ಈಡಾಗಬೇಕಾಯಿತು. ಯಜ್ಞೇಶನ ಮದುವೆಯ ಸಂದರ್ಭದಲ್ಲಿ ಮಳೆ ಬಂದು, ಓಡುತ್ತಿದ್ದ ಬಚ್ಚಮ್ಮನನ್ನು ನರಸಿಂಹರಾಯ ದೂಡಿ "ಎಂತೆಂತಹ ಮನೆಯವರೆಲ್ಲ ಇನ್ನೂ ಚಪ್ಪರದಲ್ಲಿ ಒದ್ದೆ ಆಗುತ್ತಿದ್ದಾರೆ. ಇದು ನೋಡು! ದೊಡ್ಡ ಪಟ್ಟೆ ಸೀರೆ ತೋಯ್ದುಬಿಟ್ಟಿತು ಇವಳದು!"[೫] ಎಂದು ತಳ್ಳಿದ ರಭಸಕ್ಕೆ ಬಚ್ಚಮ್ಮ ಕೆಳಕ್ಕೆ ಬಿದ್ದು ಹೋದಳು. ಇದನ್ನು ಕಾಣುತ್ತಿದ್ದ ಮಂಜುನಾಥನಿಗೆ ಅಲ್ಲಿ ನಿಲ್ಲಲಾಗದೆ ತನ್ನದೆ ಒಂದು ಹೋಟಲಿಡುವ ಕನಸ್ಸಿನಲ್ಲಿ ಹೊರಟುಹೋದ.

ಈ ದಿನದ ಘಟನೆ ವಾಚಣ್ಣನಲ್ಲಿಯೂ ಬದಲಾವಣೆ ತಂದಿದೆ. ಎಲ್ಲರೂ ಚಪ್ಪರದಲ್ಲಿನ ಸೀರೆ ಮೆರವಣಿಗೆ ನೋಡುತ್ತಿರುವಾಗ. ಅಡುಗೆ ಮನೆಗೆ ಹೋಗಿ ಟರ್ಪಾಲನ್ನು ತಪ್ಪಿಸಿ, ಎಲೆಹಾಕಿ ಬಿಡಿಸಬೇಕಂತೆ ಎಂದು ಬಂದ ವಾಚ್ಚಣ್ಣ. ಆದರೆ ಮಾಡಿದ ಅಡುಗೆಯೆಲ್ಲ ಮಳೆಯಲ್ಲಿ ಹರಿದು ಹೋಗಿತ್ತು. ಅಲ್ಲಿದ್ದವರೆಲ್ಲರನ್ನು ಮುಜುಗರಕ್ಕೆ ನೂಕುವ ಕೆಲಸದೊಂದಿಗೆ ತಣ್ಣಗೆ ಪ್ರತಿಕ್ರಿಯಿಸಿದ್ದ ವಾಚಣ್ಣ. ಅದೇ ವೇಳೆಗೆ ಅಲ್ಲಿ ಬೆಳ್ಳಿ ಪಾತ್ರೆಗಳು ಕಾಣೆಯಾಗಿ ಗಂಗಮ್ಮನಿಗೆ ಮೂರ್ಛೆ ತಪ್ಪಿ ಬೀಳುತ್ತಾಳೆ. ಬಂದವರೆಲ್ಲ ಅತಿಥಿಗಳಲ್ಲ. ಅವರಲ್ಲಿ ಕಳ್ಳರು ಯಾರು ಎಂದು ಹೇಳಲಾಗದೆ ಅವು ಪತ್ತೆಯಾಗುವುದೇ ಇಲ್ಲ.

ಹೀಗೆ ಬಚ್ಚಮ್ಮ ನೇರವಾಗಿ ಪಡೆಯಲಾರದ್ದನ್ನು ಕಣ್ಣು ತಪ್ಪಿಸಿ ಪಡೆಯಲು ಪ್ರಯತ್ನಿಸುತ್ತಾಳೆ. ತನ್ನ ಅಧೀನ ಬದುಕಿನಲ್ಲೂ ಸುಖವಾಗಿರಲು ಪ್ರಯತ್ನಿಸುತ್ತಾಳೆ.

ಸಾಮಾಜಿಕ ಶೋಷಣೆಯ ಭಿನ್ನ ನೆಲೆಗಳನ್ನು ಅವಲಂಬಿತರು ಕತೆ ತೋರುತ್ತವೆ. ಮಾನವೀಯ ಮೌಲ್ಯಗಳನ್ನು ಕಳೆದುಕೊಂಡ ಮಧ್ಯಮವರ್ಗದ ಕುಟುಂಬವೊಂದು ಪ್ರಬುದ್ಧತೆಯ ಹೊಸ್ತಿಲಲ್ಲಿರುವ ಅಮಾಯಕ ಹುಡುಗಿಯೊಬ್ಬಳನ್ನು ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ವಿಧಾನದ ಅನಾವರಣ ಮಾಡುತ್ತದೆ. ಈ ಅನಾವರಣ ನಡೆಯುವುದು ಈ ಕುಟುಂಬದ ನೆರೆಯಲ್ಲಿಯೇ ವಾಸಿಸುವ ಸುಶೀಲಳಿಂದ. ಅವಳೇ ಈ ಕತೆಯ ನಿವೇದಕಿ. ಸುಶೀಲಳ ಸ್ವಭಾವದಲ್ಲಿ ಸಹಜವಾದ ಮಾನವೀಯ ಅನುಕಂಪವಿದೆ. ಆದರೆ ನೆರೆಯವಳನ್ನು ಎದುರು ಹಾಕಿಕೊಳ್ಳಬಾರದೆಂಬ ವ್ಯವಹಾರ ಬುದ್ಧಿಯೂ ಇದೆ. ಇದರಿಂದಾಗಿ ಅವಳ ನಿವೇದನೆಯಲ್ಲಿ ಒಂದು ರೀತಿಯ ನಿರ್ಲಿಪ್ತತೆ ತಾನಾಗಿಯೇ ಬಂದುಬಿಡುತ್ತದೆ. ಈ ಕತೆಯ ನಿಜವಾದ ಸತ್ವವಿರುವುದು ಅಹಲ್ಯೆಯ ಪಾತ್ರಲದಲ್ಲಿ. ಅವಳು 'ಅವಲಂಬಿತ'ಳಾದರೂ ಮಾನವೀಯ ಗುಣಗಳಲ್ಲಿ ಶ್ರೀಮಂತಳು. ಶಾರದೆಯ ಸಣ್ಣತನವನ್ನು ಅಲಕ್ಷಿಸಿ ಅವಳು ತನಗೊಪ್ಪಿಸಿದ ಮಗುವನ್ನು ಪ್ರೀತಿಸುತ್ತಾಳೆ. ತನ್ನ ವಯಸ್ಸಿಗೆ ಮೀರಿದ ತಿಳುವಳಿಕೆ ಅವಳಲ್ಲಿದೆ. ಬಡವಳಾದರೂ ಬದುಕನ್ನು ಎದುರಿಸುವ ಧೈರ್ಯವಿದೆ. ತನ್ನ ಭವಿಷ್ಯದ ಬಗ್ಗೆ ಭರವಸೆಯಿದೆ. ಅವಳಲ್ಲಿ ಜೀವನದಲ್ಲಿ ಏನನ್ನಾದರೂ ಸಾಧಿಸಲೇಬೇಕು ಎನ್ನುವ ಹಠವಿದೆ, ಸುಶೀಲಳ ಎಚ್ಚರದ ನಿವೇದನೆಯನ್ನು ಮೀರಿ ಅವಳ ಪಾತ್ರ ಕತೆಯನ್ನು ತುಂಬಿಕೊಳ್ಳುತ್ತದೆ. ಅಸಮಾನತೆಯ ನಡುವೆಯೂ ಸ್ವಾಭಿಮಾನದ ಬದುಕನ್ನು ಬಯಸುವ ಪ್ರಬುದ್ಧ ಹೆಣ್ಣಾಗಿ ಅಹಲ್ಯೆ ಇಲ್ಲಿ ಕಾಣಿಸುತ್ತಾಳೆ.

ಪುರುಷಾನುಕೂಲಿಯಾದ ವ್ಯವಸ್ಥೆಯು ಅಧೀನ ಸ್ತ್ರೀಯರ ಮೇಲೆ ಎಸಗುವ ಕಾರ್ಯವು ಇವರ ಕತೆಗಳಲ್ಲಿ ಅವಾಕ್ಕಾಗುವಂತೆ ಚಿತ್ರಿತವಾಗಿದೆ. ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು ಕತೆಯಲ್ಲಿ "ಮೂರು ಮಾವಿನ ಮಿಡಿಯಷ್ಟಿದ್ದ ಪುಟ್ಟಮ್ಮತ್ತೆಯ ಅಜ್ಜಿಯನ್ನು ಅವಳ ಗಂಡ ಕ್ಷುಲ್ಲಕ ಕಾರಣಕ್ಕಾಗಿ ಬಾವಿಗೆ ಎತ್ತಿ ಹಾಕುತ್ತಾನೆ "ಪುಟ್ಟಮ್ಮತ್ತೆಯ ಅಜ್ಜಿ ಒಂದೇ ಮುಳುಕಿಗೆ ಕಣ್ಣುಮುಚ್ಚಿತ್ತು" ಒಂದು ಮಾತು ಇದುರುತ್ತರ ಕೊಟ್ಟಿದ್ದಕ್ಕೆ ಸಿಕ್ಕಿದ ಶಿಕ್ಷೆ ಇದು.

ಅಸಹಾಯಕತೆ, ಪರಾಧಿನತೆಗಳೊಂದಿಗೆ ಬಡತನವೂ ಸೇರಿಬಿಟ್ಟರೆ ಹೆಣ್ಣಿನ ಕಷ್ಟ ಇದ್ದದ್ದೂ ಹೆಚ್ಚು. ಹದಿಹರೆಯದಲ್ಲಿ ಪುಟ್ಟಮ್ಮ ತನ್ನ ಮೈಮೇಲೆ ಬೀಳುವ ಗಂಡಸರಿಂದ ತಪ್ಪಿಸಿಕೊಳ್ಳಲು ಹೆಣಗಿದರೆ, ಅವಳು ವಿಧವೆಯಾದಾಗ ಸಮಸ್ಯೆಗಳು ಇನ್ನೂ ಹೆಚ್ಚುತ್ತವೆ: ಉದ್ದಕ್ಕೂ ಅವಮಾನ, ಮೂದಲಿಕೆ, ಕೊಳಕು ಮಾತು ಮತ್ತು ಮೈ ತುಂಬ ದುಡಿಮೆಗಳ ಗಾಣಕ್ಕೆ ಸಿಕ್ಕಿ ಸವೆಯಬೇಕಾಗುತ್ತದೆ. ಬಡತನದ ಹಿನ್ನೆಲೆಯಿಂದಾಗಿ ಅವಳ ಮೊಮ್ಮಗಳಿಗೂ ಕಷ್ಟಗಳು ತಪ್ಪುವುದಿಲ್ಲ. ಆದರೂ ಇವರಿಬ್ಬರೂ ಬದುಕದೆ ಬೆನ್ನು ತಿರುಗಿಸಿದವರು ಅಲ್ಲ, ಎಂಥ ಹೊತ್ತಿನಲ್ಲಿಯೂ ತಿರುಗಿಸುವವರೂ ಅಲ್ಲ. ಆದರೆ ಇಬ್ಬರೂ ಬದುಕನ್ನು ಸ್ವೀಕರಿಸುವಲ್ಲಿ ವ್ಯತ್ಯಾಸವಿದೆ. ಪುಟ್ಟಮ್ಮತ್ತೆ ಬದುಕನ್ನು ಬಂದ ಹಾಗೆ ಸ್ವೀಕರಿಸಿದರೆ ಅವಳ ಮೊಮ್ಮಗಳು ಕಮಲಾವತಿ

ಅದನ್ನು ನಿರಾಕರಿಸಿ, ತನಗೆ ಬೇಕಾದಂತೆ ಕಟ್ಟಲು ಪ್ರಯತ್ನಿಸುತ್ತಾಳೆ. ಕಮಲಾವತಿಗೆ ಎರಡು ಮುಖ್ಯ ಸಮಸ್ಯೆಗಳಿವೆ, ಒಂದು ಹೆಣ್ಣಾಗಿರುವುದು, ಇನ್ನೊಂದು ಬಡತನ.

"ಹೆಣ್ಣಾಗಿರುವ ಕಾರಣದಿಂದಲೇ ಎದುರಾಗುವ ಸಮಸ್ಯೆಗಳನ್ನು ಹೆಣ್ಣು ಎನ್ನುವ ಕಾರಣಕ್ಕೆ ಪರಿಹರಿಸಿಕೊಳ್ಳಲು ಯತ್ನಿಸುವುದೇ ಕಮಲಾವತಿಯ ವಿಶೇಷ. ಬಗ್ಗುವುದನ್ನಾಗಲೀ, ತಗ್ಗುವುದನ್ನಾಗಲೀ ಅವಳು ಒಪ್ಪುವುದಿಲ್ಲ. ತಮಗೆ ಆಶ್ರಯ ಕೊಟ್ಟವರ ಮಗಳನ್ನು ಗಂಡು ನೋಡಲು ಬರುವ ಪ್ರಸಂಗದಲ್ಲಿನ ಕಮಲಾವತಿಯ ನಡವಳಿಕೆ ಇದಕ್ಕೆ ಒಳ್ಳೆ ಉದಾಹರಣೆ. ತನ್ನ ಸೌಂದರ್ಯದ ಆಕರ್ಷಕ ವ್ಯಕ್ತಿತ್ವದ ಸಂಪೂರ್ಣ ಅರಿವಿರುವ ಅವಳು ತನ್ನ ಕಾರಣಕ್ಕೆ ಬಂದ ಗಂಡು ನೋಡಲು ಬಂದಿರುವ ಹುಡುಗಿಯನ್ನು ತಿರಸ್ಕರಿಸಬಹುದು ಎನ್ನುವ ಸಾಧ್ಯತೆ ಗೊತ್ತಿದ್ದೂ ಅಲ್ಲೇ ಉಳಿಯಲು ಹಠ ಮಾಡುತ್ತಾಳೆ. ಅಜ್ಜಿಯ ಬಲವಂತಕ್ಕೆ ಅಲ್ಲಿಂದ ಹೊರಬೀಳುವ ಅವಳು ಇನ್ನೊಂದು ಸಾಹಸಕ್ಕೆ ತೊಡಗುತ್ತಾಳೆ. ಅವಳಲ್ಲಿರುವ ಬಂಡಾಯ ವಯಸ್ಸಿನ ಮೂಲದ್ದೂ ಹೌದು. ಬೆಳೆಯುತ್ತಿರುವ 'ಸ್ವಪ್ರಜ್ಞೆಯ'ಯ ಮೂಲದ್ದೂ ಹೌದು. ಬದುಕು ಕೊಡದಿದ್ದರೂ ಅದರಿಂದ ಕಿತ್ತಾದರೂ ತಿನ್ನಬೇಕೆನ್ನುವ ತಹತಹ ಕಮಲಾವತಿಯಲ್ಲಿ ಕಾಣುತ್ತದೆ. ಅಪಾರ ಚೈತನ್ಯದ ಈ ಹುಡುಗಿಯನ್ನು ಹಿಡಿಯುವುದೇ ಪುಟ್ಟಮ್ಮತ್ತೆಗೆ ಕಷ್ಟವಾಗಿಬಿಡುತ್ತದೆ. ಕಮಲಾವತಿಯ ವ್ಯಕ್ತಿತ್ವ ಅವಳಿಗೆ ಅರ್ಥವಾಗುವುದಿಲ್ಲವೆಂದಲ್ಲ. ಆದರೆ ಸಮಾಜ ಒಪ್ಪದ ಅದಕ್ಕೆ ಕಮಲಾವತಿ ಹಂಬಲಿಸುವುದು ಬೇಡವೆಂದೇ ಅವಳಿಗೆ ಕಾಣುತ್ತದೆ. ಬದುಕಿನ ಹೋರಾಟದಲ್ಲಿ ಪುಟ್ಟಮ್ಮತ್ತೆ ಸಮಾಜದ ನಿರ್ಬಂಧಗಳನ್ನು ಮೀರಲು ಹೆದರುತ್ತಾಳೆ. ಆದರೆ ಮೊಮ್ಮಗಳಿಗೆ ಸಾಮಾಜಿಕ ನಿರ್ಬಂಧಗಳೋ, ನೈತಿಕ ನಿಯಮಗಳೋ, ಮೂರು ಕಾಸಿಗೂ ಬೇಡದವು. ಬದುಕಿನ ಸುಖದ ಹುಡುಕಾಟದಲ್ಲಿ ಬರುವ ಅಡಚಣೆಗಳು ಅವು ಎನಿಸುತ್ತದೆ. ಎಂದರೆ ನಿರ್ದಿಷ್ಟ ಚೌಕಟ್ಟಿನೊಳಗೆ ಪುಟ್ಟಮ್ಮತ್ತೆ ತನ್ನ ಬದುಕನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿದರೆ, ಮೊಮ್ಮಗಳು ಸಮಾಜಕ್ಕೆ ಸೆಡ್ಡು ಹೊಡೆದು ನಿಂತು ತನ್ನ ಸವಾಲನ್ನು ಘೋಷಿಸಬಲ್ಲವಳು. ಇಲ್ಲಿ ಇವರಿಬ್ಬರ ನಡುವೆ ಕೇವಲ 'ತಲೆಮಾರಿನ ಅಂತರ' ಮಾತ್ರವಲ್ಲ. ಕಮಲಾವತಿಯ ವ್ಯಕ್ತಿತ್ವವನ್ನು ಕುರಿತು ಪುಟ್ಟಮ್ಮತ್ತೆ ಅಷ್ಟು ಒದ್ದಾಡುವುದೇ, ಅವಳ ಮನಸ್ಸಿಗೆ ತನ್ನ ಮೊಮ್ಮಗಳ ಮನಸ್ಸು ಅರ್ಥವಾಗಿರುವುದರ ಸಂಕೇತ. ಕಮಲಾವತಿಯಲ್ಲಿ 'ಹೊಸ ಹೆಣ್ಣಿ'ನ ಉಗಮವೂ ಕಾಣಿಸುತ್ತದೆ. ಇಲ್ಲಿ ಕಮಲಾವತಿಗೆ ಯಾರೂ ಸ್ತ್ರೀವಾದದ ಪಾಠಗಳನ್ನು ಹೇಳಿಕೊಡುತ್ತಿಲ್ಲ ಅತ್ಯಂತ ಸಹಜವೆನ್ನುವ ಹಾಗೆ ಅವಳ ವ್ಯಕ್ತಿತ್ವ ಇಲ್ಲಿ ಅರಳುತ್ತಾ ಹೋಗುತ್ತದೆ. ತನ್ನಿಂತಾನೇ ಮಾಡುವ ಇಂತಹ 'ಅರಿವಿ'ನ ಬಗ್ಗೆ ವೈದೇಹಿಯವರಿಗೆ ತುಂಬ ಆಸಕ್ತಿ. ಇಂಥ ಸ್ವಮೂಲಕವಾದ ಅರಿವು ಮಾತ್ರ ಅವರ ವ್ಯಕ್ತಿತ್ವವನ್ನು ಕೊನೆಯವರೆಗೂ ರೂಪಿಸುತ್ತದೆ ಎಂದು ವೈದೇಹಿ ಭಾವಿಸುತ್ತಾರೆ. ಇದು ಶೋಷಣೆಯೆಂದೋ, ತಪ್ಪೆಂದೋ ಸ್ವತಃ ಅವಳಿಗೆ ಅನಿಸಬೇಕು. ಅದರ ತೀವ್ರತೆಯಲ್ಲಿ 'ಹೊಸ ಹೆಣ್ಣು' ಹುಟ್ಟುತ್ತಾಳೆ."[4]

ಹಲವು ಶೋಷಣೆಗಳ ನಡುವೆಯೂ ಇಲ್ಲಿನ ಹೆಣ್ಣು ಮಗಳು ಬದುಕುವ ಛಲ ಬಿಟ್ಟಿಲ್ಲ. ಹೆಣ್ಣಿನ ಸ್ಥಾನ-ಮಾನ ಗಂಡಿನ ಅಳತೆಗೋಲಿನಲ್ಲಿ ಅಳೆಯುವ ಸಮಾಜದಲ್ಲಿ ಗಂಡು ವಿಫಲನಾದರೂ ಹೆಣ್ಣು ಬದುಕನ್ನು ತನ್ನದಾಗಿಸಿಕೊಳ್ಳಲು ನಡೆಸುವ ಹೋರಾಟದಲ್ಲಿ ಹೆಣ್ಣಿನ ಜೀವನಮಗ್ನತೆ, ಜೀವನ ಪ್ರೀತಿ, ಶ್ರದ್ಧೆಗಳು ಗೋಚರಿಸುತ್ತವೆ. ಈ ಪ್ರೀತಿಯು ಅವಳಲ್ಲಿ ಜಾಗೃತವಾಗಲು ದೊಡ್ಡ ಆಮಿಷಗಳೇ ಬೇಡ, ಸಣ್ಣ ಸಣ್ಣ ಆಸೆಗಳು ಸಾಕು. ತಿಂಡಿ ಕದಿಯುವ ಬಚ್ಚಮ್ಮ, ಸಣ್ಣ ಗುಡಿಸಲಿಗಾಗಿ ಹೋರಾಡುವ ಚಿಕ್ಕ ಇವರೆಲ್ಲ ತೋರಿಸುವ ಜೀವನ ಪ್ರೀತಿಗೆ, ಕಷ್ಟಗಳನ್ನು ಸಹಿಸುವ, ಎದುರಿಸುವ ಶಕ್ತಿಗೆ ಅವರ ಈ ಆಸೆಗಳೇ ಮೂಲವಾಗಿರುತ್ತವೆ.

ಮದುವೆ ಮನೆಗಳು ಹಲವು ರೀತಿಯ ವಾಸ್ತವಗಳಿಗೆ ವೇದಿಕೆಯಾಗಿ ನಿಲ್ಲುತ್ತದೆ. ಅಲ್ಲಿ ಪುರಸ್ಕರಿಸುವ ಸಂಗತಿಗಳು, ತಿರಸ್ಕರಿಸುವ ವಿಷಯಗಳು, ಉಳ್ಳವರು – ಇಲ್ಲದವರಿನ ಅಂತರ, ಹೊಸ ಮದುವೆಗೆ ತಯಾರಿ, ಎಲ್ಲರ ಮನೆಯ ಬವಣೆಗಳ ನಿವೇದನೆಯ ಸ್ಥಳ ಹೀಗೆ ಎಲ್ಲಕ್ಕೂ ಜಾಗ ಅಲ್ಲುಂಟು.

ಮದುವೆ ಎಂಬುದು ಎರಡೂ ಜೀವಗಳು ಒಂದಾಗುವ ಸಮಾರಂಭ. ಇಂತಹ ಸಮಾರಂಭವೂ ಹಲವು ರೀತಿಯ ತಾರತಮ್ಯಗಳಿಗೆ ಕಾರಣವಾಗುತ್ತದೆ. 'ಮದುವೆ-ಹೆಣ್ಣು-ಸೀರೆ' ಕತೆಯು ಮದುವೆಗೆ ಹೋಗುವ ಮುನ್ನವೇ ಒಂದು ಹೆಣ್ಣು ತಾನು ಎಲ್ಲರ ಗಮನ ಸೆಳೆಯಬೇಕಾಗಿದೆ. ಏನೇನು ತಯಾರಿ ಮಾಡಬೇಕು ಎಂಬುದನ್ನು ತೋರಿಸುತ್ತದೆ. ಅಣ್ಣನ ಮದುವೆ, ಪ್ರೀತಿಯಿಂದ ಕರೆದು ಹೋಗಿದ್ದಾನೆ, ಹೋಗಲೇ ಬೇಕು ಎಂದುಕೊಳ್ಳುವ ಸುಮ ಒಂದು ಒಳ್ಳೆಯ ಸೀರೆಯನ್ನು ಕಷ್ಟದಲ್ಲಿಯೂ ಕೊಂಡುಕೊಳ್ಳುತ್ತಾಳೆ. ಆದರೂ ಮದುವೆಯಲ್ಲಿ ದೊಡ್ಡಂಚಿನ ಸೀರೆಯ ಮಧ್ಯೆ ಇವಳ ಸೀರೆ ಯಾರ ಗಮನಕ್ಕೂ ಬಾರದೇ, ಇವಳು ಕಡೆಗಣಿಸಲ್ಪಡುತ್ತಾಳೆ.

ಮದುವೆಯೊಂದನ್ನು ನೋಡುತ್ತಾ ಕುಳಿತಿರುವ ವಿಧವೆಯರು ತಮ್ಮ ಕಾಲದ ಮದುವೆಯನ್ನು ನೆನಪಿಸಿಕೊಳ್ಳುತ್ತಾ ವರ್ತಮಾನವನ್ನು ಹಳಿಯುತ್ತಾ ಇರುವ ಚಿತ್ರವೊಂದರಿಂದ ಪ್ರಾರಂಭವಾಗುವ 'ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ' ಎಂಬ ಕತೆ ಅದೇ ಹಳತಿನಲ್ಲಿರುವ ಹುಳುಕನ್ನು ಎಲ್ಲಾ ಕಾಲಕ್ಕೂ ಮನುಷ್ಯ ಮೂಲಭೂತವಾಗಿ ಒಂದೇ ಎಂಬುದನ್ನು ಅದೇ ವಿಧವೆಯರ ಸ್ಥಿತಿಯಿಂದ ಅಭಿವ್ಯಕ್ತಿಸುತ್ತದೆ.

"ವಾಗತ್ತೆಯ ನೇತೃತ್ವದಲ್ಲಿ ಒಂದು ಮೂಲೆಯಲ್ಲಿ ಕುಳಿತ ಈ ಅಜ್ಜಿಯರೆಲ್ಲ ವಾಗತ್ತೆ ಹೇಳಿದ್ದಕ್ಕೆಲ್ಲ ಹೂಂಗುಡುತ್ತಾ ತಮ್ಮದೇ ಒಂದು ಮಾತಿನ ಭಾರ ಸೇರಿಸುತ್ತಾ ಇದ್ದಾರೆ, ಅವರುಟ್ಟಿರುವುದೆಲ್ಲ ಹೆಚ್ಚು ಕಡಿಮೆ ಒಂದೇ ಬಣ್ಣದ ಸೀರೆಯಾದರೂ, ಸೀರೆಯ ನೂಲಿನಲ್ಲಿ ವ್ಯತ್ಯಾಸವಿದೆ. ಸುಮಾರು ಎಂಬತ್ತು ನಂಬರಿನ ನೂಲಿನಿಂದ ಹಿಡಿದು ಬಹಳ ಮೆತ್ತಗಿನ ಸೀರೆಯುಟ್ಟವರೂ ಉಇದ್ದಾರೆ, ರೇಷ್ಮೆ ಸೀರೆಯುಟ್ಟವರೂಉ ಇದ್ದಾರೆ. ರೇಷ್ಮೆಯಲ್ಲಿ ಹೆಬ್ಬೆಟ್ಟಗಲದ, ಕಿರುಬೆಟ್ಟಗಲದ ಜರಿ ಅಂಚಿನ ವ್ಯತ್ಯಾಸದಲ್ಲೇ

ಅಂತಸ್ತುಗಳ ಹೆಚ್ಚು ಕಡಿಮೆ ಸೂಚಿಸುವವರಿದ್ದಾರೆ. ಇಷ್ಟರಲ್ಲಿ ಕಾಟಜ್ಜಿ ಉಟ್ಟ ಸೀರೆ ಮಾತ್ರ ನಲ್ವತ್ತು ನಂಬರಿನ ನೂಲಿನದು. ಒಂದು ಒಳ್ಳೆಯ ಸೀರೆಯುಡಬೇಕೆಂಬ ಆಸೆಯಲ್ಲಿಯೆ ಕಾಟಜ್ಜಿಯ ದಿನಗಳೆಲ್ಲ ಸವೆದು ಕಾಲಿನ ಕಸದ ಬುಟ್ಟಿಯಲ್ಲಿ ಸೇರಿ ಹೋಗಿದೆ. ಈಗ ಅವಳಿಗೆ ಆ ಆಸೆಯೇ ಇಲ್ಲ ಅಂತ ಅನಿಸಿದರೂ ನೋವಿನ ಎಳೆಯೊಂದು ಆದಾಗ ಭಳಕ್ ಎಂದು ಬಳಲಿಸಿ ಹೋಗುವುದಿದೆ."

ಈ ರೀತಿ ಮದುವೆ ಮನೆಗಳು ಮಾಸಿದ ಗಾಯವನ್ನು ಹಸಿಗೊಳಿಸುವ ಪರಿಯೂ ಇದೆ. ಅದರ ಜೊತೆಗೆ ಅಂತಸ್ತನ್ನು ಬಯಲು ಮಾಡುವ ಸಾಧನಗಳು ಆಗಿವೆ. ಒಂದು ಕಳ್ಳ ವೃತ್ತಾಂತ ಕತೆಯಲ್ಲಿ ಬಚ್ಚಮ್ಮನನ್ನು ದೂಡಿ ನರಸಿಂಹರಾಯರು ಮೊದಲು ದೊಡ್ಡ ಅಂಚಿನ ಸೀರೆಯವರನ್ನು ಮಳೆಯಿಂದ ರಕ್ಷಿಸಲು ಮಾಡಿದ ಕೆಲಸವನ್ನು ಮಾಡುವುದು ನೆನಪಿಸಿಕೊಳ್ಳಬಹುದು. ಮದುವೆಯಲ್ಲಿ ಅಂತಸ್ತಿನ ಪಾತ್ರನವನು ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು ಕತೆ ತೆರೆದಿಡುತ್ತದೆ.

ಸಮಾಜ ಶಾಸ್ತ್ರಜ್ಞೆಯ ಟಿಪ್ಪಣಿಗೆ ಕಥೆಯು ಎಂತಹ ಹೆಣ್ಣನ್ನು ಗಂಡಿನವರು ಆರಿಸಿಕೊಳ್ಳುತ್ತಾರೆ ಎಂಬುದನ್ನು ನಿರೂಪಿಸುತ್ತದೆ. ಸ್ಥಿತಿವಂತರ ಮನೆಯ ಜಾನಕಿ ಎಲ್ಲದಕ್ಕು ತಲೆಬಾಗುವ ತನ್ನ ಗುಣದಿಂದಲೇ ಅಲ್ಲಿ ಯೋಗ್ಯ ಕನ್ಯೆಯಾಗಿ ಕಾಣುತ್ತಾಳೆ. ಪ್ರತಿಯೊಂದನ್ನೂ ಪ್ರಶ್ನಿಸುವ ಹುಡುಗಿ ಸಮಾಜ ಶಾಸ್ತ್ರಜ್ಞೆ ಅಧಿಕ ಪ್ರಸಂಗಿಯಾಗಿ ಕಾಣುತ್ತಾಳೆ.

"ಭೂತ" ಕತೆಯು ಮೀರಾ ಎಂಬ ಹುಡುಗಿಯ ನೆನಪುಗಳೊಂದಿಗೆ ತೆರೆದುಕೊಳ್ಳುತ್ತದೆ. ಒಂದು ಕಾಲದಲ್ಲಿ ಚೆನ್ನಾಗಿ ಬಾಳಿ ಬದುಕಿದ ಮನೆಯಿಂದು ಬಡತನದಲ್ಲಿ ಸಿಲುಕಿದೆ. ಈ ಕತೆಯ ನಾಯಕಿ ಪಾರ್ವತಿ, ಗಂಡಿನಂತೆ ದುಡಿಯುತ್ತಾ ಮನೆಗೆ ಆಧಾರವಾಗಿದ್ದಾಳೆ. ಮದುವೆಯಾದರೂ ಅವಳ ಜೀವನದಲ್ಲಿ ಯಾವುದೇ ಬದಲಾವಣೆ ಆಗದೇ ಅವಳ ದುಃಖ ಅವಳಲ್ಲೇ ನುಂಗಿ ಬದುಕುತ್ತಾಳೆ. ಆದರೆ ಅವಳ ತಾಯಿ ದೊಡ್ಡಮ್ಮ ಹಗಲೆಲ್ಲ ನಗುತ್ತಾ ಇದ್ದರೂ ರಾತ್ರಿಯಾದೊಡನೆ ಮನೆತನದ ಅವನತಿಗೆ; ಮಗಳ ದುಃಖಕ್ಕೆ ಕೊರಗಿ ಮನದ ತಾಪ ತಡೆಯಲಾರದೆ ಅರ್ಧ ರಾತ್ರಿಯಲ್ಲಿ ತಲೆಗೆ ತಣ್ಣೀರು ಸುರುದುಕೊಳ್ಳುತ್ತಾ, ಬಾವಿಯ ಬಳಿ ಅಳುತ್ತಾ ಕುಳಿತಿರುವಾಗ ನಿದ್ದೆಯ ಗುರುತೇ ಇಲ್ಲದ ಚೊಕ್ಕ ಸ್ವರದಲ್ಲಿ ಪಾರ್ವತಿ 'ಸುರುವಾಯಿತು ಇವಳ ರಂಪ' ಅನ್ನುತ್ತಾಳೆ. ನಿದ್ದೆ ಇಲ್ಲದ ಚಿಂತೆಯ ಬೆಂಕಿಯಲ್ಲಿ ಬೇಯುವ ಇವರಿಬ್ಬರಿಗೂ ಬಡತನ ನಿಜವಾದ ಭೂತದಂತೆ ಕಾಡುತ್ತದೆ.

ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು ಕತೆಯೂ ಚಾಲೋಟದಲ್ಲಿ ಎದ್ದ ಸಣ್ಣ ಅಲೆಗಳು. ಮಹಿಳಾ ಲೋಕದಲ್ಲಿ ಉಂಟುಮಾಡಿದ ಅಲೆಗಳನ್ನು ಚಿತ್ರಿಸುತ್ತದೆ. ಮನೆಯೊಳಗಿನ ಲೋಕವೆಲ್ಲಾ ಹೆಣ್ಣಿನದು. ಹೊರಲೋಕವೆಲ್ಲ ಗಂಡಸ್ಸಿನದು ಎಂದು ಇದ್ದಂತಹ ಊರಿನಲ್ಲಿ ಒಂದು ಟಾಕೀಸು ಬರುತ್ತದೆ. ಅದು ಬರುವಾಗಲೇ ಆ ಊರ ನಡುವಿನಲ್ಲಿ ಮುತ್ತಜ್ಜನಂತೆ ದೊಡ್ಡಕೆ ಹರಡಿಕೊಂಡು ನಿಂತಿದ್ದ ಧೂಪದ

ಮರದ ದಪ್ಪ ಕಾಂಡಕ್ಕೆ ಕೊಡಲಿ ಪೆಟ್ಟು ಕೊಡುತ್ತದೆ. ಈ ಕ್ರಿಯೆಯ ನಂತರವೇ ಮನೆಯೊಳಗಿನ ಪ್ರಪಂಚದಲ್ಲಿದ್ದ ಹೆಂಗಳೆಯರು ಸ್ವಂತ ಕಾಲುಗಳಿಂದ ಹೊರಗೆ ಹೆಜ್ಜೆಯಿಡಲಾರಂಭಿಸಿದರು. ಮುಂದೆ ಈ ಟಾಕೀಸಿನ ಕಾರಣದಿಂದಲೇ ಪುರುಷಪ್ರಧಾನ ವ್ಯವಸ್ಥೆಯ ಬೇರು ಕೂಡ ಅದುರುತ್ತದೆ.

ಟಾಕೀಸು ಮೊದಲು ಊರಿನ ಸೂಲಗಿತ್ತಿ ಲಿಲ್ಲೀಬಾಯಿಯನ್ನು ತನ್ನೆಡೆಗೆ ಸೆಳೆದುಕೊಳ್ಳುತ್ತದೆ. ಲಿಲ್ಲೀಬಾಯಿ ಊರಿನ ಸೂಲಗಿತ್ತಿ. ಅವಳು ಸ್ವತಃ ಸೂಲಗಿತ್ತಿ ಅಲ್ಲ, ಆದರೆ ಅಗತ್ಯ ಬಿದ್ದರೆ ಅದೂ ಆಗುವವಳು. ಮತ್ತು ಮೂರು ತಿಂಗಳಿಡೀ ತಾಯಿ-ಮಗುವಿನ ಚಾಕರಿ ಮಾಡಿ ಮುಗಿಸುವವಳು. ಸಿನೇಮಾ ಎಂದರೆ ಪ್ರಾಣ. ಟೆಂಟಿನಲ್ಲಿ ಬಂದ ಯಾವ ಸಿನಿಮಾವನ್ನೂ ಆಕೆ ನೋಡದೆ ಬಿಟ್ಟಿಲ್ಲ. ಸಿನೆಮಾ ನೋಡುವಾಗ ಹೊಟ್ಟನೋವಿನ ಮನೆಯಿಂದ ಕರೆ ಬಂದರೂ ಅಲ್ಲಿಂದ ಮಿಸುಕಾಡುವುದುದಿಲ್ಲ. ಈ ಲಿಲ್ಲೀಬಾಯಿಗೆ ಬೇಗ ಶ್ರೀಮಂತಳಾಗಬೇಕೆಂಬ ಆಸೆ. ಆದರೆ ಅವಳ ಗಂಡ ಕಲಾಯಿ ನಾಯಕ, ದುಡಿಯುವುದರಲ್ಲಿ ದಡ್ಡ. ಇವಳ ಕಣ್ಣಮುಂದೆ ಊರುಬಿಟ್ಟು ಹೊಗಿ ಶ್ರೀಮಂತರಾದುದ್ದನ್ನು ಕಂಡು ಗಂಡನನ್ನು ಮನೆ ಬಿಟ್ಟು ಓಡಿಸಿದ್ದಾಳೆ. "ಇದು ಕಲಿ ಊರು, ಇಲ್ಲೇ ಇದ್ದರೆ ಬರ್‍ಕತ್ತಿಲ್ಲ" ಒಂದಷ್ಟು ಸಮಯ ಎಲ್ಲಾದರೂ ಹೋಗಬೇಕು, ಮತ್ತೆ ಬರಬೇಕು, ಎಲ್ಲ ಒಳ್ಳೆಯದಾಗುತ್ತದೆ"[೮] ಎಂದು ಅವನನ್ನು ಪ್ರಚೋಧಿಸಿ ಕಳಿಸಿದ್ದಾಳೆ, ಅವನು ಹೋದವನು ಪತ್ತೆಯಿಲ್ಲ.

ಹಾಗಾಗಿ ತಾನಾದರೂ ಬೆಳೆಯಬೇಕು ಎಂದುಕೊಂಡರೂ ಆ ಸುಟ್ಟ ಊರಲ್ಲಿ ಏನೂ ಇರಲಿಲ್ಲ. ಈ ಟಾಕೀಸು ಬಂದಾಗ ಹೆಚ್ಚು ಸಂತೋಷ ಪಟ್ಟವಳು ಅವಳೇ. ಗುಲಾಬಿಯ ಶಿಫಾರಸ್ಸಿನಂತೆ ಅವಳನ್ನು ಹೆಂಗಸರ ಬಿಳಿಯ ಗೇಟ್‌ಕೀಪರ್ ಆಗಿ ನೇಮಕವೂ ಆದಳು. ಇದರಿಂದ ಆ ಊರಿನಲ್ಲಿ ಬಾಣಂತನದ ಜನ ತಪ್ಪಿಯೋಯಿತು. ತನ್ನ ಒಂದು ತಿಂಗಳ ಸಂಬಳ ಬಾಣಂತನದ ಮೂರು ತಿಂಗಳ ಸಂಬಳಕ್ಕಿಂತಲೂ ಹೆಚ್ಚು ಎಂದು ಬಾಣಂತನದ ಕೆಲಸವನ್ನು ತೀರಾ ಜುಜುಬಿ ಮಾಡಿಬಿಟ್ಟಳು ಲಿಲ್ಲೀಬಾಯಿ. ಇದರಿಂದ 'ಗಂಡಸರೆದುರು ಹೆರುವುದೆ? ಎಂಬ ಕಾರಣಕ್ಕಾಗಿ ಮೂಲೆಗೊತ್ತಲ್ಪಟ್ಟ ಆ ಊರಿನ ಡಾಕ್ಟ್ರ ಶಾಪು ಸುಣ್ಣ-ಬಣ್ಣದಿಂದ ಶೋಭಿಸಲಾರಂಭಿಸಿದವು. ಆ ಊರಿಗೆ ಬರುತ್ತಿದ್ದ ಹೊಸ ಸಿನೆಮಾಗಳನ್ನು ನೋಡಲು ಗಂಡಸರಿಲ್ಲದೆ ಹೊರಗೆ ಕಾಲಿಡದ ಹೆಂಗಸರು ಲಿಲ್ಲೀಬಾಯಿ ಇದ್ದಾಳೆ ಎಂಬ ಧೈರ್ಯದ ಮೇಲೆ ತಾವಾಗಿ ರಸ್ತೆಗಿಳಿಯುವ ಧೈರ್ಯವನ್ನು ಸಂಪಾದಿಸಿದರು.

ತಾನು ಶ್ರೀಮಂತಳಾಗಬೇಕೆಂಬ ಆಸೆಯಿದ್ದ ಲಿಲ್ಲೀಬಾಯಿಗೆ, ಆ ಹೆಂಗಸರ ಹಣದ ಮುಗ್ಗಟ್ಟು ಮತ್ತು ಸಿನೆಮಾ ನೋಡುವ ಆಸೆ ಎರಡೂ ಸೇರಿಕೊಂಡು, ಅವಳ ಒಳಹುಂಡಿ ವ್ಯಾಪಾರ ಜೋರಾಗಿ ನಡೆಯಿತು. ಈ ಹಣದಿಂದ ಲಿಲ್ಲೀಬಾಯಿ ವಾಯಿಲ್ ಸೀರೆಯನ್ನು ಖರೀದಿಸಿದಳು. ಸ್ಟೀಲಿನ ಪಾತ್ರಗಳನ್ನು ಕೊಂಡಳು. ಕಿವಿಗೆ ಹೊಸ ಕುಡುಕುಗಳು ಬಂದವು. ಮೀನು ಪೇಟೆಗೆ ಹೋಗುವುದು

ಸಾಮಾನ್ಯವಾಯಿತು. ಮನೆಯ ಹಿಂಬದಿಯಲ್ಲಿ ಮೊಣಕಾಲೆತ್ತರದ ಒಗೆಯುವ ಕಲ್ಲುಹಾಕಿಸಿ ಎರಡು ಬಾಳೆಕಂದುಗಳನ್ನು ನೆಟ್ಟಳು. ಹೀಗೆ ಅವಳ ಜೀವನ ಸುಧಾರಿಸುತ್ತಿತ್ತು.

ಹೀಗಿರಲು ಒಂದು ದಿನ ಟ್ಯಾಕೀಸಿನ ಮ್ಯಾನೇಜರ್‌ಗೂ ಅವಳಿಗೂ ಯಾವುದೇ ವಿಷಯಕ್ಕೆ ಮನಸ್ತಾಪ ಬಂದು ಲಿಲ್ಲೀಬಾಯಿ ತನ್ನ ಒಳಹುಂಡಿ ವ್ಯಾಪಾರ ನಿಲ್ಲಿಸಿದಳು. ಅದೇ ದಿನ ಆ ಊರಿನ ದೊಡ್ಡಮನೆ ಮಂಜುನಾಥಯ್ಯನ ಹೆಂಡತಿ ಮತ್ತು ಮನೆಯವರು ಸಿನಿಮಾ ನೋಡುವುದಕ್ಕೆ ಬಂದರು. ಲಿಲ್ಲೀಬಾಯಿ ಅವರ ಮುಖವನ್ನು ನೋಡದೆ ತಿಕೇಟು ಮಾಡಿಕೊಂಡು ಬಂದು ಸಿನಿಮಾ ನೋಡಿ ಎಂದಳು. 'ದೊಡ್ಡವರ ಮನೆಯಾದರೇನು! ಕೈಯಲ್ಲಿ ದುಡ್ಡಿಲ್ಲದ ಮೇಲೆ!'– ಎಂಬ ಹಂಗು ನುಡಿಯನ್ನು ಆಡಿದ ಲಿಲ್ಲೀಬಾಯಿಯ ಮಾತುಗಳು ಆ ಹೆಂಗಸರು ತಮ್ಮ ಸ್ಥಿತಿಯನ್ನು ತಾವೇ ನೋಡಿ ಅರಿತುಕೊಳ್ಳುವಂತೆ ಮಾಡಿದವು.

"ಎಷ್ಟು ನೂರು ಮುಡಿ ಹುಟ್ಟುವಳಿ ಇದ್ದರೇನಾಯಿತು? ಮನೆಯಲ್ಲಿ ತಾವು ಬಗ್ಗಿದ ಬೆನ್ನು ಎತ್ತದೆ ಗೇಯ್ದುರೇನಾಯಿತು? ಹಾಗಾದರೆ ಒಂದು ದಮಡಿಯಾದರೂ ಹೆಚ್ಚಿಗೆ ತನ್ನ ಬಳಿ? ಇರುವಷ್ಟನ್ನಾದರೂ ತಾನು ಬೇಡಿ ಪರದೇಶಿಯಂತೆ ಕೇಳಿ ತೆಗೆದುಕೊಳ್ಳಬೇಕಾಯಿತಲ್ಲವೆ?"

ಎಂದು ಮಂಜುನಾಥಯ್ಯನ ಹೆಂಡತಿ ತನ್ನ ಸ್ಥಿತಿಯನ್ನು ಸಂಕಟದಿಂದ ಹಳಿದುಕೊಂಡರೆ, "ಒಟ್ಟಾರೆ ಅತಂತ್ರರಾದೆವಲ್ಲ; ಕೈ ತುಂಬ ದುಡ್ಡನ್ನು ಗಂಡಸರು ಕೊಟ್ಟಿದ್ದರೆ ಅವರ ಮರ್ಯಾದೆಯೇ ಉಳಿಯುತ್ತಿತ್ತು" ಎಂದಾಗ ವಾರಗಿತ್ತಿಯರಲ್ಲೊಬ್ಬಳು, 'ಸುಮ್ಮನಿರಿ ಅಕ್ಕ, ಊರವರು ಏನು ಹೇಳುತ್ತಾರೆ 'ಮಂಜುನಾಥಯ್ಯನ ಮನೆಯವರು' ಎನ್ನುತ್ತಾರೆ. ನಮ್ಮ ಹೆಸರು ಹೇಳುತ್ತಾರೆಯೋ? ಅಂದ ಮೇಲೆ ನಮ್ಮ ಮರ್ಯಾದೆ ಎಲ್ಲಿ ಹೋಯಿತು? – ಎಂದು ಕೇಳಿದಳು. ಒಂದು ನಮೂನೆ, ನಾವು ಹೇಗೂ ಯಾವ ಲೆಕ್ಕಕ್ಕೂ ಇಲ್ಲದವರಲ್ಲವೆ ಎಂಬಂಥ ಕಹಿ ಬೆರಸಿ, ಆ ಕಹಿ ಇಷ್ಟು ದಿನ ಎಲ್ಲಿತ್ತೋ, 'ಆದರೂ ಇದು ಸಮನಲ್ಲ' – ಎಂದು ಹಲುಬಿದರು ಮಂಜುನಾಥಯ್ಯನ ಹೆಂಡತಿ."[5] ಈ ರೀತಿಯ ಚರ್ಚೆಯನ್ನೇ ಅವರಲ್ಲಿ ಹುಟ್ಟಿಸಿ, ತಮ್ಮ ಸ್ಥಿತಿಯ ಬಗೆಗಿನ ಎಚ್ಚರ ನೀಡಿದ ಘಟನೆನೆಯಾಯಿತು. ಈ ಘಟನೆಯಿಂದ ಬುದ್ಧಿ ಕಲಿತ ಹೆಂಗಸರು ಮುಂದಿನ ದಿನಗಳಲ್ಲಿ ಬುದ್ಧಿವಂತರೂ ಆದರು. ಇಬ್ಬರೂ ಹೋಗುತ್ತಿದ್ದರೆ ಮೂವರು ಹೋಗುತ್ತಿದ್ದೇವೆ ಎಂದು ದುಡ್ಡು ಪಡೆದು ಉಳಿಸಿ, ಮತ್ತೊಂದು ಸಿನಿಮಾಕ್ಕೆ ಹೋಗುವ ಬುದ್ಧಿ ಕಲಿತರು.

ಇಷ್ಟೆಲ್ಲ ಪರಿವರ್ತನೆಗೆ ಕಾರಣವಾದ ಗುಲಾಬಿ ಟಾಕೀಸನ್ನು ಗುಲಾಬಿಯ ಮಗ ದೂರದಿಂದ ನೋಡಿಕೊಳ್ಳಲಾಗದೆ ಪರಭಾರೆ ಮಾಡಿದ. ಲಿಲ್ಲೀಬಾಯಿಯ ಕೆಲಸವೂ ಹೋಯಿತು. ಅವಳಿಗೆ ತನ್ನ ಹಿಂದಿನ ಸೂಲಗಿತ್ತಿಯ ಕೆಲಸವು ಕಡಿಮೆಯಾಗಿ ಲಿಲ್ಲೀಬಾಯಿಯ ಜೀವನ ಸ್ವಲ್ಪ ಅತಂತ್ರವಾಯಿತು.

ಆದರೂ ಅವಳು ಮತ್ತು ಗುಲಾಬಿ ಟಾಕೀಸು ಸಣ್ಣ ಪರಿವರ್ತನೆಯನ್ನು ಮಾಡಿಬಿಟ್ಟಿತ್ತು. ಸ್ತ್ರೀ ವಿಮೋಚನೆಯನ್ನು ಯಾವುದೇ ಘೋಷಣೆಯನ್ನೂ ಹೇಳದೆ ಮಾಡಿಬಿಟ್ಟಿತು.

೨. ಸ್ತ್ರೀ ಅನನ್ಯತೆ

ವೈದೇಹಿಯವರ ಕಥೆಗಳು ಅನೇಕ ನೆಲೆಯಲ್ಲಿ ಬದುಕನ್ನು ಶೋಧಿಸತ್ತಾ ಸ್ತ್ರೀ ಚೈತನ್ಯದ ವಿಶಿಷ್ಟ ಕಾಳಜಿಗಳನ್ನು ದರ್ಶಿಸುತ್ತವೆ. ಅವರ ಕಥೆಗಳು ಹೆಣ್ಣು ಗಂಡಿನ ಸಂಬಂಧವನ್ನು ಹಲವು ನೆಲೆಯಲ್ಲಿ ಶೋಧಿಸುತ್ತವೆ.

"ವೈದೇಹಿಯವರ ಸಾಹಿತ್ಯದ ಮೂಲ ನೆಲೆ ಎಂದರೆ ಬದುಕನ್ನು ಕುರಿತ ನಿರಂತರವಾದ ಶ್ರದ್ಧೆ. ಎಂತಹ ಬಿಕಟ್ಟಿನ ಸಂಕಷ್ಟದ ಹೊತ್ತಿನಲ್ಲಿಯೂ ಬದುಕಿಗೆ ಬೆನ್ನು ತಿರಿಗಿಸಿದ ಪಾತ್ರಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಇದನ್ನೇ ಶಿಷ್ಟ ಸಾಹಿತ್ಯಿಕ ಮಾತುಗಳಲ್ಲಿ ಸೈದ್ಧಾಂತಿಕವಾಗಿ ಹೇಳುವುದಾದರೆ, ಅವರ ಇಡೀ ಸಾಹಿತ್ಯ ಅಧೀನ ಬದುಕಿನೊಳಗಿನ ಸುಖದ ನೆಲೆಗಳ ಹುಡುಕಾಟ"[೧೦]

ಸ್ತ್ರೀ ವಿಶಿಷ್ಟತೆಯು ಅವರ ಕಥೆಗಳಲ್ಲಿ ಸ್ತ್ರೀ ಲೋಕದ ಅನಾವರಣದ ಮೂಲಕವೇ ಸಿಗುತ್ತದೆ. ಅವರ ಕತೆಗಳಲ್ಲಿನ ಹೆಚ್ಚು ಭಾಗ ಸ್ತ್ರೀಯರ ವಿಶಿಷ್ಟಲೋಕವನ್ನು ಪರಿಚಯಿಸುವುದರಲ್ಲಿಯೇ ನಡೆಯುತ್ತದೆ. ದಿನನಿತ್ಯದ ಕೆಲಸಗಳಲ್ಲಿ ಅವಳ ತೊಡಗುವಿಕೆ, ಸಣ್ಣ ಸಣ್ಣ ಕೆಲಸಗಳಲ್ಲಿಯೂ ಅವಳು ತೋರುವ ಶ್ರದ್ಧೆ ಬದುಕನ್ನು ಕುರಿತ ಶ್ರದ್ಧೆಯಾಗಿ ಮಾರ್ಪಡುತ್ತದೆ. ಅವರು ಬಳಸುವ ಭಾಷೆಯು ಈ ಹೆಣ್ಣಿನ ಭಾಷೆಯೇ ಆಗಿ ಎಲ್ಲಿಯೂ ಕೃತಕವಾಗಿ ಕಾಣುವುದೇ ಇಲ್ಲ. ಅವರು ಬಳಸುವ ಉಪಮೆ ರೂಪಕಗಳು ಕೂಡ ಸ್ತ್ರೀಭಾಷೆಯಲ್ಲಿಯೇ ಇರುವುದು ವಿಶೇಷ.

ಹೀಗೆ ಅಂತರ್ಪ್ರವಹಿಸುವ ಸ್ತ್ರೀಪ್ರಜ್ಞೆಯಲ್ಲಿ ಕಡೆದಿರುವ ಒಂದೊಂದು ಕತೆಯು ಹೆಣ್ಣಿನ ಬಗ್ಗೆ ಅನೇಕ ವಿವರಗಳನ್ನು ತೆರೆದಿಡುತ್ತವೆ. ಪುರುಷ ಪ್ರಧಾನ ವ್ಯವಸ್ಥೆ ಕಲ್ಪಿಸಿದ ಸ್ತ್ರೀಪ್ರತಿಮೆಗಳಿಗಿಂತಲೂ ಸತ್ವಪೂರಿತವಾದ ಹೆಣ್ಣುಗಳ ಚಿತ್ರಣ ಸಿಗುತ್ತದೆ. ಇಲ್ಲಿ ಎಲ್ಲ ಜಾತಿ, ವರ್ಗ, ವಯಸ್ಸಿನ, ಮದುವೆಯಾದ, ಮದುವೆಯಾಗದ, ಗಂಡನಿಂದ ಮೋಸಹೋದ, ಗಂಡನನ್ನು ಕಳೆದು ಕೊಂಡ, ಗಂಡನಿದ್ದು ಇಲ್ಲದ ಸ್ಥಿತಿಯಲ್ಲಿರುವ, ವಿದ್ಯಾವಂತ, ಅವಿದ್ಯಾವಂತ, ಉದ್ಯೋಗಸ್ಥ, ಕಳ್ಳರು, ಹುಚ್ಚರು ಮನೆವಾರ್ತೆಯಲ್ಲಿ ಮುಳುಗಿದ ಎಲ್ಲ ನೆಲೆಯ ಹೆಣ್ಣುಗಳು ಕತೆಗಳಾಗಿದ್ದಾರೆ. ಅವರಿಗೆ ಯವುದೇ ಸಿದ್ಧಾಂತದ ರಗಳೆಯಿಲ್ಲದೆಯೂ ತಮ್ಮತನವನ್ನು ಕಾಯ್ದುಕೊಂಡು, ತಮ್ಮದೇ ದನಿಯಲ್ಲಿ ಹಾಡುತ್ತಾ ಬದುಕಿರುವುದನ್ನು ಸೂಕ್ಷ್ಮ ಮನಸ್ಸಿನ ಸ್ತ್ರೀಪ್ರಜ್ಞೆ ಆರಿಸಿ ಪೋಣಿಸಿಟ್ಟಂತೆ ವೈದೇಹಿಯವರ ಕತೆಗಳಲ್ಲಿ ಸ್ತ್ರೀಸಂಸ್ಕೃತಿ ಕಾಣುತ್ತದೆ.

ಸ್ತ್ರೀ ಬದುಕಿನ ಪುಳಕಗಲ್ಲಿ ತಾಯ್ತನವು ವಿಶಿಷ್ಟವಾದುದಾಗಿದೆ. ಈ ತಾಯ್ತನದ ಹಂಬಲದಲ್ಲಿ ಮುಳುಗಿರುವ ಹೆಣ್ಣುಗಳನ್ನು, ಆ ಶಕ್ತಿಗೂಡಿಸಿಕೊಂಡು ಲೋಕವನ್ನು ಮತ್ತು ಅದರ ನಿಯಮಗಳನ್ನು ಧಿಕ್ಕರಿಸುವ ಸ್ತ್ರೀಚೈತನ್ಯದ ಅನಾವರಣ 'ಗುಲಾಬಿ ಮೃದುಪಾದಗಳು; ಅಲ್ಲಲ್ಲಿನ ಲೋಕದವರು, ಶಕುಂತಲೆಯೊಂದಿಗೆ ಕಳೆದ ಅಪರಾಹ್ನ, ಮರಗಿಡ ಬಳ್ಳಿ ಕತೆಗಳಲ್ಲಿ ಕಾಣಬಹುದು.

ಗುಲಾಬಿ ಮೃದುಪಾದಗಳು ಕಥೆಯ ನಾಯಕಿ ಸರಿತಾ, ಅಕೆಗೆ ಮದುವೆಯಾಗಿದೆಯೋ ಇಲ್ಲವೋ ಅವಳ ವಯಸ್ಸು, ಕೌಟುಂಬಿಕ ಹಿನ್ನೆಲೆ, ಅವಳ ಆತಂಕಗಳು, ನಿರಾಸೆಗಳು ಯಾವುದೂ ಕತೆಯಲ್ಲಿ ಇಲ್ಲ. ಅದೇ ಕತೆಯ ವಿಶೇಷವೂ ಹೌದು. ಯಾಕೆಂದರೆ ಯವಿದೇ ವಯಸ್ಸಿನ, ಬದುಕಿನ ಯಾವುದೇ ಘಟ್ಟದಲ್ಲಿಯೂ ಹೆಣ್ಣು ತಾಯ್ತನಕ್ಕೆ ಹಂಬಲಿಸುತ್ತಾಳೆ. ತನ್ನ ದೇಹದಿಂದಲೇ ಹೊರಬರುವ ಈ ಜೀವಸೃಷ್ಟಿಯ ಅನುಭವಕ್ಕೆ ಸಮನಾದದ್ದು ಯಾವುದೂ ಇಲ್ಲವೆನ್ನುವುದನ್ನು ಇನ್ನೂ ತಾಯ್ತನದ ಅನುಭವವನ್ನು ಪಡೆಯದೇ ಇರುವ ನಾಯಕಿ ಕತೆಯುದ್ದಕ್ಕೂ ಅನುಭವಿಸುತ್ತಾ ಹೋಗುತ್ತಾಳೆ. ಆ ಮಗುವಿನ ತಾಯಿ ಅನುಭವಿಸುವಷ್ಟೇ ತೀವ್ರವಾಗಿ ಆಪ್ತವಾಗಿ ಅವಳು ಮಗುವಿನ ಬದುಕಿಗೆ ಸ್ಪಂದಿಸಲು ಹಂಬಲಿಸುತ್ತಾಳೆ.

ಪ್ರತಿದಿನ ಆಫೀಸಿಗೆ ಹೋಗುವಾಗಲು ಆ ಮನೆ ಮುಂದಿನ ಸಂಭ್ರಮ ಕಾಣುತ್ತಾ ಸಂಭ್ರಮಿಸುತ್ತಾಳೆ. ಆ ಎಳೆ ಜೀವದ ಜೊತೆಗಿನ ಮೃದುತ್ವವನ್ನು ದೂರದಿಂದಲೇ ಅನುಭವಿ ಸಂತೋಷಿಸುತ್ತಾಳೆ.

ಅಲ್ಲಲ್ಲಿನ ಲೋಕದವರು ಕತೆಯಲ್ಲಿ ಮಾಂಕಾಳಿಯಮ್ಮ, ಗಂಡಿನ ಮೂಲಕ ಹೆಣ್ಣನ್ನು ಅಲೆಯುವ ಲೋಕದಲ್ಲಿನ ಕ್ರೂರುತೆಗೆ ಸಿಕ್ಕು ಬೀಳುತ್ತಾಳೆ. ಸ್ವಂತ ದುಡಿಮೆಯಿಲ್ಲದೆ ಅವರಿವರ ಮನೆಯಲ್ಲಿ ಕೆಲಸಕ್ಕೆಬಾರದ ಮಾತುಗಳನ್ನಾಡುತ್ತಾ ಅಲ್ಲಿಯೇ ಕೊಟ್ಟದ್ದು ಉಂಡು ಬರುವ ಜವಾಬ್ದಾರಿಯಿಲ್ಲದ ನಾರಾಯಣನನ್ನು 'ಬಳುವಟೆ ನಾರಾಯಣ' ಎಂತಲೇ ಕರೆಯುತ್ತಾರೆ. ಅವನ ಹೆಂಡತಿಯಾಗಿ ಬರುವ ಮಾಂಕಾಳಿಯಮ್ಮನಿಗೆ ಯವುದೇ ಗೌರವ ಸಿಕ್ಕುವುದಿಲ್ಲ. ದಕ್ಷಿಣೆಯಲ್ಲಿಯೂ ನಾಲ್ಕಾಣೆಯ ಮರ್ಯಾದೆಗೆ ಮಾತ್ರ ಬರುವವಳು. ಇಂತಹ ಅವಮಾನದ ಬದುಕಿನಲ್ಲಿ ಬಾಳುವ ಸ್ಥೈರ್ಯ ನೀಡುವುದು ಅವಳ ತಾಯ್ತನ. ಈ ಸುಖವೇ ಅವಳು ಜಾತಿವ್ಯವಸ್ಥೆಯ ಗೆರೆಗಳನ್ನು ದಾಟಲು ಪ್ರೇರೇಪಿಸುತ್ತದೆ. ಬ್ರಾಹ್ಮಣಳಾದ ಅವಳು ಎಲ್ಲ ವಿರೋಧಗಳ ನಡುವೆಯು ಶೂದ್ರನ ಹೋಟೆಲಿನಲ್ಲಿ ದೋಸೆ ಹಿಟ್ಟು ರುಬ್ಬುವ ಕೆಲಸಕ್ಕೆ ಹೋಗಲು ನಿರ್ಧರಿಸುವ ಹಿಂದಿನ ತುಡಿತ ತಾಯ್ತನವೇ ಆಗಿದೆ.

ಶಕುಂತಲೆಯು ದುಷ್ಯಂತನ ಮರೆವೆಯನ್ನು ಲೋಕದ ಕುಹಕಗಳನ್ನು ಎದುರಿಸಲು ಸಾಧ್ಯವಾದದು ಈ ಅನಂತ ಸುಖದ ಬಲದಿಂದಲೇ. 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ'ದಲ್ಲಿ ತನ್ನ

ಬದುಕಿನ ಪುನರಾವಲೋಕನಕ್ಕೆ ತೊಡಗಿಕೊಳ್ಳುವ ಶಕುಂತಲೆ ದುಷ್ಯಂತ ಹಾಗೂ ತನ್ನ ನಡುವಿನ ಸಂಬಂಧವನ್ನು ಕುರಿತು ಯೋಚಿಸುವಾಗ ದುಷ್ಯಂತ ಹಾಗೂ ತನ್ನ ನಡುವಿನ ಸಂಬಂಧವನ್ನು ಕುರಿತು ಯೋಚಿಸುವಾಗ ದುಷ್ಯಂತನ ಮೇಲೆ ಆರೋಪ ಹೊರಿಸುವುದಕ್ಕೆ ಕಾರಣಗಳೇ ಎಲ್ಲ ಎನಿಸುತ್ತದೆ. ಪ್ರೀತಿಯ ದಿವ್ಯವಾದ ಅನುಭವವನ್ನು ಒದಗಿಸಿಕೊಟ್ಟ ಅವನಿಗೆ ತಾನು ಕೃತಜ್ಞನಾಗಿರಬೇಕೆಂದೆ ಅವಳಿಗೆ ಆನಿಸುತ್ತದೆ. ತುಂಬಿದ ಸಭೆಯಲ್ಲಿ ಅವಳನ್ನು ದುಷ್ಯಂತ ನಿರಾಕರಿಸಿದಾಗ ಉಂಗುರವನ್ನು ತೋರಿಸಿ ತಮ್ಮಿಬ್ಬರ ಸಂಬಂಧವನ್ನು ಸಾಬೀತುಪಡಿಸುವುದು ಅವಳಿಗೆ ಹೇಸಿಗೆಯೆನ್ನಿಸಿ ಅಲ್ಲಿಂದ ಹೊರಬರುತ್ತಾಳೆ. ಇಡೀ ಲೋಕ ದುಷ್ಯಂತನನ್ನು ಅಪರಾಧಿ ಎಂದು ಸಾರುತ್ತಿದ್ದಾಗಲೂ ಶಕುಂತಲೆ ಅದಕ್ಕೆ ದನಿಗೂಡಿಸುವುದಿಲ್ಲ. ಈ ಘಟ್ಟದಲ್ಲಿ ತಾನು ಅದರ ಬಗ್ಗೆ ಅಷ್ಟೊಂದು ಯೋಚಿಸದೇ ಇರುವುದಕ್ಕೆ ಅವಳು ಕೊಡುವ ಕಾರಣ. ಲೋಕವನ್ನೇ ಧಿಕ್ಕರಿಸುವಂತಹ ಸುಖ ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿತ್ತು. 'ಆ ಸುಖದೆದುರಿಗೆ ದುಷ್ಯಂತನ ನಿರಾಕರಣೆ ಲೋಕಾಪವಾದ ಎಲ್ಲವೂ ಅವಳಿಗೆ ಎರಡನೆಯದಾಗಿ ಕಾಣಿಸುತ್ತದೆ. ಬದುಕಿನಲ್ಲಿ ಮಗು ಆಸೆಯನ್ನೂ, ಉತ್ಸಾಹವನ್ನೂ ಬೆಳಕನ್ನು ತರುವ ಸಾಧನವಾಗುತ್ತದೆ. ಆದ್ದರಿಂದಲೇ ತಾಯ್ತನ ಅವಳಿಗೆ ಸರ್ವಸ್ವ

ತಾಯ್ತನ ಎಂಬುದು ಕೇವಲ ಸುಖವನಷ್ಟೇ ನೀಡದೆ ಅವಳ ವ್ಯಕ್ತಿತ್ವಕ್ಕೆ ಶ್ರದ್ಧೆ, ಏಕಾಗ್ರತೆ, ಸೃಜನಶೀಲತೆಯಂತಹ ಕೆಲವು ಕೊಡುಗೆಗಳನ್ನು ನೀಡುತ್ತದೆ.

ಮರಗಿಡ ಬಳ್ಳಿ ಎಂಬ ಕತೆಯು ತಾಯ್ತನದ ಸುಖದ ಮತ್ತೊಂದು ವಾಸ್ತವಕ್ಕೆ ಕರೆದೊಯ್ಯುತ್ತದೆ ಬಾಯಿ ಕಳೆದು ಮಲಗಿದ ಮಂದಕ್ಕ ತಾಯ್ತನವೆಂಬುದು ಭ್ರಮೆ ಎಂಬುದನ್ನು ಒಂದೂ ಮಾತಾಡದೆಯೇ ತೋರಿಸುತ್ತಾ ಹೋಗುತ್ತಾಳೆ. ಹಾಸಿಗೆ ಹಿಡಿದು ಮಲಗಿ ಸಾವಿನ ದಿನಗಳನ್ನು ಎಣಿಸುತ್ತಿರುವ ಮಂದಕ್ಕ ಸಾಯುವುದನ್ನೇ ಕಾಯುತ್ತಿರುವ ಅವಳ ಮೂವರು ಮಕ್ಕಳು.ಮಂದಕ್ಕನಿಗೆ ಸಾವಿನ ಅಂಚಿನಲ್ಲಿ ತಾಯ್ತನದ ಭ್ರಮೆಯನ್ನು ಕಳೆದರೂ, ಅವು ನೀಡಿದ ಸುಖವನ್ನು ನೆನೆಯುತ್ತಾಳೆ. ಮಗಳ ಅವಜ್ಞೆಯ ಜೊತೆಗೆ ತನ್ನ ಸಾವಿನ ಅಂಚಿನಲ್ಲಿದ್ದ ತಾಯಿಯೂ ಬಂದು ಹಂಗಿಸಿದಂತೆ ಆಕೆಗೆ ಅನಿಸುತ್ತದೆ. ಅಂದಿಗೆ ಅದು ಸುಖ ಎಂದುಕೊಳ್ಳುತ್ತಾಳೆ.

ಈ ವಾಸ್ತವದ ಮುಂದೆಯೂ ಯಾವುದೇ ಹೆಣ್ಣು ತಾಯ್ತನದಿಂದ ದೂರಾಗಲೂ, ತಿರಸ್ಕರಿಸಲು ಸಿದ್ಧವಿಲ್ಲ. ೧೦೦ ಮಕ್ಕಳನ್ನು ಹೆರುವ ಬಯಕೆ ಹೊತ್ತ ಶಾಂತಿಯಂತವರು, ಲೋಕದ ನಾಗರಿಕ ಕ್ರೌರ್ಯಕ್ಕೆ ಕಟುವಾಗಿರುವ ಅಕ್ಕುವಿನಲ್ಲೂ ಮೃದುತ್ವವನ್ನುಂಟು ಮಾಡುವ ಅವಳ ಭ್ರಮೆಯ ಬಸಿರು. ಇವೆಲ್ಲವೂ ಸ್ತ್ರೀ ವಿಶಿಷ್ಟತೆಯಲ್ಲಿ 'ತಾಯ್ತನಕ್ಕಿರುವ' ಮಹತ್ವದ ಸ್ಥಾನವನ್ನು ತಿಳಿಸುತ್ತವೆ.

"ತಾಯ್ತನದ ಸುಖ, ಪುಳಕ, ರೋಮಾಂಚನ, ಹೋಲಿಕೆ ಇಲ್ಲದ, ಪರ್ಯಾಯವಿಲ್ಲದ ಅಪೂರ್ವ ಅನುಭವವನ್ನು ಕುರಿತದ್ದು. ಜಗತ್ತಿನ ಅಪೂರ್ವ ಸೃಷ್ಟಿಯಾದ ಮಗು ಬದುಕಿನ ಏಕತಾನತೆ, ಬೇಸರ, ಜಿಗುಪ್ಸೆ ಎಲ್ಲವನ್ನು ಪರಿಹರಿಸಬಲ್ಲ ಮಾಂತ್ರಿಕ ಶಕ್ತಿ ಉಳ್ಳದ್ದು. ಬದುಕಿನಲ್ಲಿ ಉಲ್ಲಾಸವನ್ನು ತರುವ ಜೀವ ವಿಶೇಷ. ಹೆಣ್ಣಿನ ಬದುಕಿಗೆ ಸಾರ್ಥಕತೆಯನ್ನು ಧನ್ಯತೆಯನ್ನು ತುಂಬಬಲ್ಲದ್ದು. ಸ್ತ್ರೀ ಅನನ್ಯತೆಯ ಮುಖ್ಯ ಸಂಸ್ಕೃತಿ."[11]

ಮದುವೆಯು ಹೆಣ್ಣಿಗೆ ಕೊಡುವ ಬಳುವಳಿಯಲ್ಲ, ಒಂದು ಮುತ್ತೈದೆತನವಾದರೆ ಮತ್ತೊಂದು ವಿಧವೆಯ ಸ್ಥಿತಿ ಎರಡೂ ಹೆಣ್ಣಿಗೆ ಬೇಡವಾದರೂ ಅವಲ ಮೇಲೆ ಹೊರಿಸುವ ಸ್ಥಿತಿಗಳಲ್ಲಿಯೇ ಅವಳು ಬದುಕನ್ನು ಕಾಣಬೇಕಾಗುತ್ತದೆ.

ವಿಧವೆಯೆಂದರೆ ಅಸೂಯೆ, ತಿರಸ್ಕಾರಕ್ಕೆ, ಕಷ್ಟ, ಕರುಣೆ, ಮರುಕಕ್ಕೆ, ಕ್ಷಮೆ, ದಯೆಗೆ, ಅಸಾಧಾರಣ ಸಹನೆ, ತಾಳ್ಮೆಗೆ ಸಂಕೇತವೆಂಬಂತೆ ನಿಲ್ಲುತ್ತಾರೆ.

ಇಂತಹ ಜೀವನದಲ್ಲಿ ಅನೇಕ ಜನ ಹೆಣ್ಣುಗಳು ತಮ್ಮ ಜೀವನವನ್ನೇ ಅವರಿವರ ಮನೆಯ ಕೆಲಸಗಳಿಗೆ ಒದಗುತ್ತಾ ತಮ್ಮ ಎಲ್ಲ ಕಷ್ಟಗಳನ್ನು ನುಂಗಿ ಬಾಳುತ್ತಾರೆ.

ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು ಕತೆಯ ಪುಟ್ಟಮ್ಮತ್ತೆ ಚಿಕ್ಕಂದಿನಲ್ಲಿಯೇ ಗಂಡನನ್ನು ಕಳೆದುಕೊಂಡು ತನ್ನ ಮಗಳನ್ನು, ಮೊಮ್ಮಗಳನ್ನು ಈ ಸಮಾಜದ ಎಲ್ಲಾ ನಿಯಮಗಳೊಂದಿಗೆ ಬದುಕು ಸಾಗಿಸಿ ಇಲ್ಲವಾಗುವಲ್ಲಿ ಕಾಣಬಹುದು.

ಹೀಗೆ ಪ್ರತಿಯೊಂದು ವಿಚಾರಗಳಲ್ಲಿಯೂ ನೋವು ನುಂಗಿ ಪ್ರೀತಿ ಸಹನೆ ಹಂಚಿ ಸಾಗಿದ ಸ್ತ್ರೀಯರ ಬದುಕನ್ನು ಉದ್ದಕ್ಕೂ ಕಾಣಬಹುದು.

ಇವರೇ ಅಲ್ಲದೆ ದುಡಿತವೇ ತಮ್ಮ ಬದುಕಾಗಿಸಿಕೊಂಡು ಬದುಕಿನಲ್ಲಿ ಶ್ರದ್ಧೆ, ಧೈರ್ಯ, ಸಾಹಸ ತೋರುವ ಹಲವು ಹೆಣ್ಣುಗಳು ಇವರ ಕತೆಯಲ್ಲಿ ಸಿಗುತ್ತಾರೆ. ಬಾಬುಲಿ ತಾಯಿ, ಚಿಕ್ಕ, ಸಿರಿ, ಪಾರ್ವತಿ, ಇವರ ಬದುಕು ಛಲದಿಂದ ಬದುಕುವ ಶ್ರದ್ಧೆಯನ್ನು ತೋರಿಸುತ್ತದೆ.

ದಾಳಿ ಕತೆಯ ನಾಯಕಿಯ ಹೆಣ್ಣು ಯಾವ ರೀತಿಯಲ್ಲಿ ತನ್ನ ಮೇಲೆ ಆಗುವ ಕ್ರೌರ್ಯವನ್ನು ನಗುವಿನಲ್ಲೇ ನಿರ್ಲಕ್ಷಿಸಿ ಬೆಳೆದಳು ಎಂಬುದಕ್ಕೆ ಉದಾಹರಣೆ. ಅಕ್ಕು ಇನ್ನೊಂದು ಬಗೆಯ ಉದಾಹರಣೆಯಾಗಿ ನಿಲ್ಲುತ್ತಾಳೆ.

೩. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀ

ಪುರುಷ ಪ್ರದಾನ ವ್ಯವಸ್ಥೆಯು ಎರಡು ಮಾರ್ಗಗಳಲ್ಲಿ ಸ್ತ್ರೀಯರನ್ನು ನಿಯಂತ್ರಿಸುತ್ತದೆ.

೧. ನಯವಾದ ಮಾರ್ಗ- ಹೊಗಳುವಿಕೆ ಹೆಣ್ಣಿನ ಮೂಲಕವೇ ಹಾಕುವ ನಿಯಂತ್ರಣ ಇತ್ಯಾದಿ

೨. ಈ ರೀತಿಯಾಗಿ ನಯವಾಗಿ ಹೆಣ್ಣನ್ನು ತನ್ನ ಅಧೀರಗೊಳಿಸುವಲ್ಲಿ ವಿಫಲವಾದರೆ ದಮನ ಶಿಕ್ಷೆಗಳ ಮೂಲಕ ಅವಳನ್ನು ಅಧೀನಗೊಳಿಸಲು ಪ್ರಯತ್ನಿಸುತ್ತದೆ.

ಅಕ್ಕು, ವಾಣಿಮಾಯಿ, ಅಮ್ಮಚ್ಚಿಯೆಂಬ ನೆನಪು ಈ ಕತೆಗಳು ಶೋಷಣೆಯ ಆ ರೂಪವನ್ನು ತೋರುತ್ತವೆ. ಹಾಗೇ ಈ ಸ್ತ್ರೀಯರು ತಮ್ಮ ಮೇಲಿನ ಶೋಷಣೆ ಮೀರಲು ತಮ್ಮದೇ ದಾರಿಗಳನ್ನು ಹೊಂದಿದ್ದಾರೆ.

ವಾಣಿಮಾಯಿ ಕಥೆಯಲ್ಲಿ ಚಪ್ಪಲಿ ಹಾಕುವ ಆಸೆ ವ್ಯಕ್ತಪಡಿಸಿದ ವಾಣಿಯಾಯಿಯ ಕಾಲನ್ನೇ ಕತ್ತರಿಸಿ ಚೊಟ್ಟುಗಾಲು ಮಾಡುವ ನರಸಿಂಹ ಪುರುಷಪ್ರಧಾನ ವ್ಯವಸ್ಥೆಯ ಕಾರ್ಯದ ಪ್ರತಿರೂಪದಂತೆ ಇದ್ದಾನೆ. ಅವಳು ಸಾಯುತ್ತಾ ಮಲಗಿರುವಾಗಲೂ ಅವಳ ಆ ಚೊಚ್ಚುಗಾಲಿನ ಮೇಲೆಯೇ ಕಟ್ಟುಕತೆಗಳನ್ನು ಕಟ್ಟುತ್ತಾ ಅವಳು ಬದುಕಿದ್ದಾಳೆಯೇ ಎಂದುಚೊಟ್ಟುಗಾಲಿನ ಮೇಲೆಯೇ ಗಿಚ್ಚಿ ಪರೀಕ್ಷಿಸುತ್ತಾನೆ. ಎಲ್ಲರೂ ಚದುರಿದಾಗ ಎಚ್ಚರದ ಸ್ಥಿತಿಗೆ ಬರುವ ವಾಣಿಮಾಯಿ ಆ ಚೊಟ್ಟುಗಾಲಿನಿಂದಲೇ ನರಸಿಂಹನನ್ನು ಒದೆಯುವ ಮೂಲಕ ತನ್ನತನವನ್ನು ಮೆರೆಯುತ್ತಾಳೆ.

ಅಮ್ಮಚ್ಚಿಯ ನೆನಪನ್ನು ಮಾಡಿಕೊಳ್ಳುವ ಅವಳ ಪುಟ್ಟ ಗೆಳತಿ ಅವಳ ಉತ್ಸಾಹ, ನೋವುಗಳನ್ನು ತೋರಿಸುತ್ತಾ ಹೋಗುತ್ತಾಳೆ. ವಾರೆ ಬೈತಲೆ ತೆಗೆದು ಶಂಭಟ್ಟರ ಮನೆ ಸತ್ಯನಾರಾಯಣ ಪೂಜೆಗೆ ಉತ್ಸಾಹ, ಲವಲವಿಕೆಯಿಂದ ಹೋಗುವ ಅಮ್ಮಚ್ಚಿ ಸ್ವಾತಂತ್ರ್ಯಪ್ರಿಯಳು. ಆದರೆ ತಂದೆ ಸತ್ತ ನಂತ್ರ ಆ ಮನೆಯ ಜವಾಬ್ದಾರಿ ಹೊತ್ತಿದ್ದ ವೆಂಕಪ್ಪಯ್ಯ ಅವಳ ಮೇಲೆ ಅಧಿಕಾರ ಚಲಾಯಿಸುತ್ತಾನೆ. ಇದಕ್ಕೆ ಅವಳ ತಾಯಿ ಯಾವ ರೀತಿಯೂ ಅಡ್ಡಿಯನ್ನು ಮಾಡದೇ ಇರುವುದು ಅವಳಿಗೆ ಕೋಪ ತರಿಸುತ್ತದೆ. ಮನೆಯ ಜವಾಬ್ದಾರಿ ತಾನೇ ಹೊರುತ್ತೇನೆ, ಅವನನ್ನು ಕಳುಹಿಸಿಬಿಡು ಎಂದರೂ ತಾಯಿ ಗಂಡುದಿಕ್ಕಿಗಾಗಿ ಅವನನ್ನು ಮನೆಯಲ್ಲಿಯೇ ಇರಿಸಿಕೊಂಡಿದ್ದಾಳೆ.

ವೆಂಕಪ್ಪಯ್ಯ ಅಮ್ಮಚ್ಚಿಯ ಪ್ರತಿ ಆಸೆಗೂ ತಣ್ಣೀರೆರಚುತ್ತಿದ್ದ, ಹಿಂದೆ ಗುಬ್ಬಿಯಿರುವ ರವಿಕೆ ಹೊಲಿಸುವ ಅವಳ ಆಸೆಯನ್ನು ವೆಂಕಪ್ಪಯ್ಯ ಹತ್ತಿಕ್ಕಿದ. ಸುಮಾ ಟೀಚರ್ ವ್ಯಂಗ್ಯವಾಗಿಯೇ ಕೇಳಿ ತೆಗೆದುಕೊಂಡು ರವಿಕೆ ಬಟ್ಟೆಯನ್ನು ವೆಂಕಪ್ಪಯ್ಯನ ಭಯದಿಂದ ಅವನು ಹೇಳಿದ ರೀತಿಯೇ ಹೊಲಿದು ಕೊಡುತ್ತಾಳೆ. ಅದರಿಂದ ಅವಮಾನಿತಳಾಗುವ ಅಮ್ಮಚ್ಚಿ ಏನೂ ಆಗೇ ಇಲ್ಲವೆಂಬಂತೆ ಇದ್ದು, ವೆಂಕಪ್ಪಯ್ಯ ತಿರುಪತಿಗೆ ಹೋದಾಗ ಅವನ ಶರ್ಟಿನ ಗುಂಡಿಗಳನ್ನು ಹಿಂದು ಮುಂದಾಗಿ ಹೊಲಿದಿಡುತ್ತಾಳೆ. ಇದನ್ನು

ಧರಿಸಿದ ವೆಂಕಪ್ಪ ಅವಳನ್ನು ಚೆನ್ನಾಗಿ ಥಳಿಸಿ ಅತ್ಯಾಚಾರ ಮಾಡುತ್ತಾನೆ. ಇದರಿಂದ ಅಮ್ಮಚ್ಚಿ ಅವನನ್ನು ಮದುವೆಯಾಗಿ ತಿರುಪತಿಯಲ್ಲಿ ನೆಲೆಸುತ್ತಾಳೆ. ಅವರಿಬ್ಬರ ಸಂಸಾರ ಸರಿಬರದೆ ಅಮ್ಮಚ್ಚಿ ವಾಪಾಸು ಮನೆಗೆ ಬರುತ್ತಾಳೆ. ಹಾಗೆ ಬರುವಾಗ ಅಮ್ಮಚ್ಚಿಯಲ್ಲಿ ಹಿಂದೆ ಇದ್ದ ಉತ್ಸಾಹ, ಲವಲವಿಕೆಗಳೊಂದೂ ಇರುವುದಿಲ್ಲ. ಎಲ್ಲರೂ ಸಾಯಲಿ ಎಂಬ ಬೇಸರವೇ ಅವಳಲ್ಲಿರುತ್ತದೆ.

'ಅಮ್ಮಚ್ಚಿ ಮಾತಾಡುವ ಘೋರ್ಸಿಗೆ ಬಹುಶಃ ನಾನು ಮರುಳಾಗಿಬಿಟ್ಟಿರಬೇಕು, ಅವಳ ಬೀಸುಮಾತಿಗೆ ಎಲ್ಲರೂ ಹೆದರುವವರೇ. ಅವಳ ಓರಗೆಯವರಂತೂ ಹತ್ತಿರ ಕೂಡ ಸುಳಿಯುತ್ತಿರಲಿಲ್ಲ. ಸುಳಿದರೂ ಅವರವರ ಮನೆಯವರು ಬೈದು ಜಬ್ಬುಜರಿಸಿಕೊಡುತ್ತಿದ್ದರು."[೨೨]

ಲವಲವಿಕೆ, ಉತ್ಸಾಹಗಳ ಚಿಲುಮೆಯಾಗಿದ್ದ ಹೆಣ್ಣೊಬ್ಬಳ ಅಪಮಾನದಲ್ಲಿ ಅವಳ ಮನೆಯವರಲ್ಲದೆ ಊರಿನವರು ಸೇರಿಕೊಳ್ಳುವ ದುರಂತ ಇಲ್ಲಿದೆ.

ಗಂಡನನ್ನು ಬಿಟ್ಟ ಹೆಣ್ಣನ್ನು ಸಮಾಜ ನಡೆಸಿಕೊಳ್ಳುವ ರೂಕ್ಷತೆಗೆ ಸಾಕ್ಷಿಯಾಗಿ 'ಅಕ್ಕು' ಇಲ್ಲಿ ಕಾಣಿಸಿಕೊಳ್ಳುತ್ತಾಳೆ. ಭ್ರಮೆ ಮತ್ತು ವಾಸ್ತವಗಳ ನಡುವೆ ಸಂಚರಿಸುವ ಅಕ್ಕು ತನ್ನ ಜೀವನದಲ್ಲಿ ಸಂತೋಷ ಕಾಣದವಳಾಗಿದ್ದಾಳೆ. ವಾಸ್ತವವನ್ನು ಎದುರಿಸಲು ಅಕ್ಕುವಿಗೆ ತನ್ನದೇ ಕ್ರಮಗಳಿವೆ. ನಾಗರೀಕವೆನಿಸಿಕೊಳ್ಳುವ ಸಮಾಜಕ್ಕೆ ಅದು ಹುಚ್ಚಾಗಿ ಕಂಡರೂ ಅವಳ ಮಟ್ಟಿಗೆ ಅದು ತನ್ನ ಮೇಲೆ ಎರಗುತ್ತಿರುವ ದಬ್ಬಾಳಿಕೆಯ ವಿರುದ್ಧದ ಪ್ರತಿಭಟನೆಯಾಗಿದೆ. ಅಕ್ಕುವನ್ನು ನಾಗರೀಕತೆಯ ಕ್ರೌರ್ಯದ ಸಂಕೇತವಾಗಿ ಮನು ಚಕ್ರವರ್ತಿಯವರು ನೋಡುತ್ತಾರೆ. ಅಕ್ಕುವಿಗೆ ದೊಡ್ಡ ಕುಂಕುಮವಿದೆ, ಕರಿಮಣಿಯಿದೆ, ಆದರೆ ಗಂಡನಿಲ್ಲ, ಇದೇ ಅವಳ ದುರಂತ. ಅವಳನ್ನು ಎಲ್ಲರೂ ಲೇವಡಿ ಮಾಡುವವರೆ. ಆದರೆ ಅಕ್ಕು ಇದಾವುದಕ್ಕೂ ತಲೆಕೆಡಿಸಿಕೊಳ್ಳದೆ ತನ್ನದೇ ಲೋಕದಲ್ಲಿ ನಿರ್ಬಿಡತೆಯಿಂದ ಓಡಾಡುತ್ತಾಳೆ. ಗಂಡನಿಂದ ಪರಿತ್ಯಕ್ತೆಯಾಗಿರುವ ಅಕ್ಕುವನ್ನು ಯಾರಾದರೂ 'ಅಕ್ಕೂ, ನಿನ್‌ಗಂಡ ಎಲ್ಲಿ? ಎಂದು ಕೇಳಿದರೆ ಕೇಳಿದವರ ಗ್ರಹಚಾರವನ್ನೇ ಆಕೆ ಮುಗಿಸಿಕೊಡುವುದಿದೆ. ಅವಳ ಶಕ್ತಿ ಎಂದರೆ ಯಾರಿಂದಲು ಮುಚ್ಚಿಸಲಾಗದ ಅವಳ ಬಾಯಿ. ಅವಳಾಡುವ ಮಾತುಗಳಲ್ಲಿ ಅರ್ಥವಿಲ್ಲದಂತೆ, ಹುಚ್ಚರ ಬಡಬಡಿಕೆಯಂತೆ ಕಂಡರೂ ಸಾಂಕೇತಿಕ ಅರ್ಥದಲ್ಲಿ ಅದು ವ್ಯವಸ್ಥೆಯ ಕ್ರೌರ್ಯವನ್ನು ತೋರುತ್ತದೆ. ಸಿರಿ ಅತ್ತೆಯ ಮದುವೆಯೆಂದು ಅವಳ ಹೂವೆಲ್ಲಾ ಕಿತ್ತು ಹಾಕಿ 'ಸಾಕಷ್ಟು ಚೆಂದ! ನಿನ್ ಚಂದ್ ಕಂಡ್ ಮದ್ವೆ ಆಪಂವ ಖಂಡತ ಬಾಳ್ಯದಿಲ್ಲೆ, ಗೋಡೆ ಮೇಲೆ ಬರ್ದಿಟ್ಕೊ'[೨೩] – ಎಂದು ತನ್ನ ಅನುಭವದ ಮೂಲಕ ಹೇಳುವ 'ಅಕ್ಕು' ವಿನ ಇಂದಿನ ಸ್ಥಿತಿಗೆ ಮದುವೆಯೇ ಮುಖ್ಯ ಕಾರಣವಾಗಿರುವುದನ್ನು ಕಾಣಬಹುದು. ಸನ್ಯಾಸಿಯ ಹಿಂದೆ ಹೋಗುವ ಅವಳ ಗಂಡನೇ ಅವಳ ಈ ದುರಂತಕ್ಕೆ ಕಾರಣನಾಗಿದ್ದಾನೆ. ಗಂಡ ಹೋದ ದಿನದಿಂದ ಅಕ್ಕು 'ಬಸುರಿ' ಎಂಬ ಭ್ರಮೆಯಲ್ಲಿದ್ದಾಳೆ.

ಹೊರಗಿನ ರೂಕ್ಷತೆಯ ಮುಂದೆ ಅವಳ ಈ ಭ್ರಮೆ ಅವಳಿಗೆ ಸುಖವನ್ನು ತರುತ್ತದೆ. ವಾಸ್ತವದಲ್ಲಿ ಕಟುವಾಗಿರುವ ಅಕ್ಕು ಈ ಭ್ರಮೆಯಲ್ಲಿ ಮೃದುತ್ವ ಮತ್ತು ಮಾರ್ದವತೆ ಪಡೆದುಕೊಳ್ಳುತ್ತಿದ್ದಾಳೆ. ಆ ಸಮಯದಲ್ಲಿ ಅವಳಿಗೆ ಯಾರ ಮಾತುಗಳೂ ತಟ್ಟುವುದಿಲ್ಲ. ಅವಳ ಬಯಸಿ ಬಯಸಿ ಹೋಗುವುದು ಬಸುರಿ-ಬಯಕೆಯ ಊಟ ಮತ್ತು ನಾಮಕರಣ ಯಾರು ಏನೆಂದರೂ ಬಸುರಿ, ಮತ್ತು ತೊಟ್ಟಿಲಿನಿಂದ ಕದಲುವುದಿಲ್ಲ. ಅವಳ ಯಾತನೆಯ ಜೀವನದಲ್ಲಿ ಸುಖ ನೀಡುವ ವಿಷಯ ಇದಾಗಿದೆ. ದೊಡ್ಡವರ ವ್ಯಂಗ್ಯಗಳಿಗೆ ಮೊನಚಾಗಿ ಉತ್ತಿರಿಸುವ ಅಕ್ಕು ಸತ್ಯಮಾಣಿಯ ಮಾತುಗಳಿಗೆ ನಗುತ್ತಾಳೆ.

ವಾಸು ಚಿಕ್ಕಪ್ಪಯ್ಯ ಮತ್ತು ಅಜ್ಜಯ್ಯ ಇಬ್ಬರೂ ವ್ಯವಸ್ಥೆಯ ಪಾಲಕರಾಗಿ ಕಾಣುತ್ತಾರೆ. ಅಕ್ಕುವಿನ ಅಸಂಬದ್ಧತೆಯನ್ನು ನಿಯಂತ್ರಿಸಲು ಹೊಡೆತವೊಂದೆ ದಾರಿಯಾಗಿ ಕಾಣುತ್ತದೆ. ಆದರೆ ಅವಳ ಕೂಗು ಈ ಹೊಡೆತವನ್ನು ಮೀರಿ ತನ್ನ ಸ್ವಾತಂತ್ರ್ಯದ ದಾರಿಯಾಗಿದೆ. ಆ ಮನೆಯಲ್ಲಿ ಅಕ್ಕುವಿನ ಮೇಲಿನ ಶೋಷಣೆಯನ್ನು ನಿಂತು ನೋಡುವರು ಮತ್ತು ಪ್ರೋತ್ಸಾಹ ಕೊಡುವವರೇ ಇದ್ದಾರೆಯೇ ಹೊರತು ಅವಳನ್ನು ರಕ್ಷಿಸುವವರಿಲ್ಲ. ಆದರೂ ಈ ವ್ಯವಸ್ಥೆಯ ಅತಿಕ್ರಮಣಕ್ಕೆ ಅಕ್ಕು ಮಣಿಯುವುದಿಲ್ಲ. "ಈ ಪ್ರಪಂಚದ ಅನುಭವಗಳಾದ ಭಯ ಮತ್ತು ಮೌನಗಳನ್ನು ಅಕ್ಕು ಪಡೆದುಕೊಳ್ಳುವುದಿಲ್ಲ. ಅವಳು ಅವನ್ನು ಪಡೆದುಕೊಂಡಿದ್ದಲ್ಲಿ ಅದು ಸೋಲಿನ ಸೂಚನೆಯೇ ಆಗುತ್ತಿತ್ತು. ಕತಯ ಅದ್ಭುತ ಶಕ್ತಿ ಇರುವುದು ಅಕ್ಕುವಿನ ಈ ಪ್ರಜ್ಞಾ ಪ್ರಪಂಚದ ಒಳಾರ್ಥದಲ್ಲಿ. ಇದನ್ನು ಕಡೆಗಣಿಸುವುದಾದರೆ ಕತೆಯ ಅರ್ಥವನ್ನು ಬಿಟ್ಟುಕೊಡುವುದಷ್ಟೇ ಆಗದೆ, ಹೆಣ್ಣಿನ ಸೋಲನ್ನು ಸೃಷ್ಟಿಸಿದಂತೆಯೂ ಆಗುತ್ತದೆ."[೧೪] ಎಂದು ಅಕ್ಕುವಿನ ಹುಚ್ಚನ್ನು ನಾಗರಿಕತೆಯ ಕ್ರೌರ್ಯದ ಸಂಕೇತವಾಗಿ ಕಾಣುವ ಮನುಚಕ್ರವರ್ತಿ ವಿಶ್ಲೇಷಿಸುತ್ತಾನೆ. ಸ್ತ್ರೀ ವಿಮೋಚನೆಯ ಮಾರ್ಗದಲ್ಲಿರುವ ಅಕ್ಕುವಿನ ಈ ರೀತಿಯ ವಿಮೋಚನೆ ಹೆಣ್ಣೊಬ್ಬಳ ದುರಂತವನ್ನು ಸೂಚಿಸುತ್ತದೆ. ಗಂಡ ಮರಳಿ ಬಂದಾಗಲೂ ಅವನೊಡನೆ ಇರಲು ಒಪ್ಪದ ಅಕ್ಕು ಈ ಭ್ರಮೆಯಲ್ಲಿಯೇ ಗೆಲ್ಲುತ್ತಾಳೆ. "ಆರ್. ಖ. ಲೇಂಗ್‌ನಂಥ ಮನೋವಿಜ್ಞಾನ ವಿರೋಧಿ ಪಂಥದ ಪ್ರಕಾರ - ಹುಚ್ಚು, ನಾಗರಿಕತೆಯ ಕ್ರೂರ ಅಂಶಗಳಾದ ದಮನ ಮತ್ತು ಶಿಕ್ಷೆಯ ಫಲ"[೧೫] ಹಾಗಾಗಿ ಅಕ್ಕುವಿನ ಹುಚ್ಚು ಅವಳದಲ್ಲ, ಅದು ಅವಳಿಗೆ ಸಮಾಜದ ಕೊಡುಗೆ.

ಆದರೆ ಅಕ್ಕು ತನ್ನ ಮೇಲೆ ಎಷ್ಟು ಹೊಡೆತ ಬಿದ್ದರೂ ಅವಳ ಸತ್ಯ ನುಡಿಯುವ ನಾಲಿಗೆ ನಿಲ್ಲುದಿಲ್ಲ. "ಈ ಕೂಗು ಅವಳ ಸ್ವಾತಂತ್ರ್ಯವನ್ನು ಉಳಿಸಿಕೊಟ್ಟು ಅವಳ 'ನಗೆಯನ್ನು' [ವಿಜಯದ ಸಂಕೇತವಾಗಿ] ಉಳಿಸುತ್ತದೆ. ಈ ಪ್ರಪಂಚದ ಅನುಭವಗಳಾದ ಭಯ ಮತ್ತು ಮೌನಗಳನ್ನು ಅಕ್ಕು ಪಡೆದುಕೊಳ್ಳುವುದಿಲ್ಲ. ಅವಳು ಅವನ್ನು ಪಡೆದುಕೊಂಡಿದ್ದಲ್ಲಿ ಅದು ಸೋಲಿನ ಸೂಚನೆಯೇ ಆಗುತ್ತಿತ್ತು."[೧೬] ಎಂದು ಹೇಳುತ್ತಾರೆ. ಅಕ್ಕು ವಾಸ್ತವದಲ್ಲಿ ಎಷ್ಟು ಕಠೋರವಾಗಿ ನಡೆದುಕೊಂಡರೂ ಅವಳ ಭ್ರಮಾಲೋಕದಲ್ಲಿ ಅವಳು ತನ್ನ ತಾಯ್ತನದ ಅನುಭವವನ್ನು ತೀವ್ರವಾಗಿ ಅನುಭವಿಸುತ್ತಾಳೆ ಮತ್ತುಮೃದು

ಹೃದಯ ಅಕ್ಕು ಕಾಣಿಸಿಕೊಳ್ಳುತ್ತಾಳೆ. ಇದು ಡಿ.ಆರ್.ನಾಗರಾಜ್ ರವರು ಹೇಳುವ ಸ್ತ್ರೀಯ ಗಾರ್ಗಿ ಪ್ರತಿಭೆಯನ್ನು ತೋರಿತ್ತದೆ.

ಡಿ.ಆರ್.ನಾಗರಾಜ್ ರವರು ಹೇಳುವ ಸ್ತ್ರೀಯ ಕಾತ್ಯಯಿನಿ ಪ್ರತಿಭೆಯನ್ನು ತೋರುವ ಸ್ತ್ರೀಯರು ಇಲಲಿ ಸಿಗುತ್ತಾರೆ.

ಆರತಿ ತಟ್ಟೆ ಕತೆಯ ಮೀನಾಕ್ಷತ್ತೆ, ಎಲ್ಲರ ಬಳಿಯೂ ಒಳ್ಳೆಯವಳಾಗಿ ಕಾಣಿಸಿಕೊಳ್ಳುತ್ತಿದ್ದಳು. ಮೀನಾಕ್ಷತ್ತೆಯು ತನ್ನ ಗಂಡನ ಅನೈತಿಕ ಸಂಬಂಧದ ಹೆಣ್ಣನ್ನು ಪ್ರೀತಿಯಿಂದ ಕಾಣುತ್ತಿದ್ದಳು. ಗುಲಾಬಿಯನ್ನು ಹಾಲು ಕೊಟ್ಟು ತಾನೇ ಗಂಡನ ಕೋಣೆಗೆ ಕಳುಹಿಸಿಕೊಡುತ್ತಾಳೆ. ಆದರೆ ಆ ಕೋಣೆಯಲ್ಲಿ ಎಲ್ಲೆಲ್ಲಿ ನೋಡಿದರೂ ಇರುವೆಗಳು ಮುತ್ತುತ್ತವೆ, ಅಲ್ಲಿ ಮಲಗಲಾಗದೆ ಮನೆಯ ಮೇಲ್ಭಾಗಕ್ಕೆ ಹೋದರೆ ಅಲ್ಲಿಯೂ ಈ ಇರುವೆಗಳು ಕಾಟ ನೀಡುತ್ತಿದ್ದವು, ಹೀಗೆ ರಾತ್ರಿಯೇ ಮುಗಿಯುತ್ತಿತ್ತು. "ಮೀನಾಕ್ಷತ್ತೆಯಂದ್ರೆ ಒಬ್ಬರಿಗೂಒಂದು ನೋವು ಮಾಡದವಳು," ಎಂಬ ಹೊಗಳಿಕೆಗೆ ಪಾತ್ರಳಾಗುವವಳು, ತನ್ನ ಗಂಡನೊಂದಿಗೆ ಅನೈತಿಕ ಸಂಬಂಧ ಹೊಂದಿದ್ದ ಕಾಶಿಯನ್ನು ಆರತಿ ತಟ್ಟೆಯ ಸುಳಿಯುಂಡೆ ಕಾಣೆಯಾದ ನೆಪದಲ್ಲಿ ವಿಶಾಲು ಕಡೆಯಿಂದ ಕಂಬಕ್ಕೆ ಕಟ್ಟಿಸಿ ಅವಳ ಪೊಂಕು ಗಂಡನ ಕೈಯಿಂದ ಹೊಡೆಸಿದ್ದಳು. ಹೀಗೆ ಎಲ್ಲರಿಗೂ ಒಳ್ಳೆಯವಳೆನಿಸುವ ಮೀಕಾಕ್ಷತ್ತೆ ತನಗಾಗುತ್ತಿದ್ದ ನೋವನ್ನು ಪರೋಕ್ಷವಾಗಿಯೇ ಸೇಡು ತೀರಿಸಿಕೊಳ್ಳುತ್ತಿದ್ದಳು. ಕಾತ್ಯಾಯಿನಿ ಪ್ರತಿಭೆಗೆ ಸಾಕ್ಷಿಯಾಗಿ ನಿಲ್ಲುತ್ತದೆ

ಹೇಗಾದರೂ ಸರಿ, ರೂಢಿಲಯವನ್ನು ಮೀರುವ ಆಸೆ ತೋರುವ ಗೂಡಿನೊಳಗೆ ಒಂದು ಹಕ್ಕಿ ಕತೆಯ ಮಾಲತಿ. ತನ್ನನ್ನು ತಾನೇ ಹೊರಗಿನಿಂದ ಬೀಗ ಹಾಕಿಸಿಕೊಂಡು ಬಂಧಿಸಿಕೊಳ್ಳುತ್ತಾಳೆ. ಬಂಧನದಲ್ಲಿ ಸ್ವಾತಂತ್ರ್ಯದ ಸವಿ ಅನುಭವಿಸಬಯಸುತ್ತಾಳೆ. ಅನಿರ್ಬಂಧತೆಯ ಖುಶಿ ಅನುಭಿಸಬಯಸುವ ಅವಳಿಗೆ ಆ ಸ್ಥತಿಯಲ್ಲಿಯೂ ಹೊರಗಿನವರಿಗೆ ಕೇಳಿದರೆ ಎಂಬ ಬಂಧನ ಕಾಡುತ್ತದೆ. ಆದರೂ ಆ ಖುಷಿ ಅನುಭವಿಸಿ ಯಾವಾಗಲೂ ಒಂದೇ ತರ ಇರುವ ಬೇಸರ ಮೀರಬಯಸುತ್ತಾಳೆ.

"ದಾಳಿ" ಕತೆಯಲ್ಲಿ ಪ್ರಚೋದಕವಾದ ಮಾತಿಗೆ ಮೌನವೇ ಅದಕ್ಕಿಂತ ಸೂಕ್ತವಾದ ಶಕ್ತಿಶಾಲಿ ಪ್ರತಿಕ್ರಿಯೆಯಾಗುವ ಚೋದ್ಯವಿದೆ. ಬಸ್ಸಿನಲ್ಲಿ ಸೀಟು ಕೇಳಿದ್ದಕ್ಕಾಗಿ ಜಗಳಕ್ಕೆ ನಿಂತ ಕಂಡಕ್ಟರನಿಗೆ ಮೌನದ ಮೂಲಕವೇ ಪ್ರತಿಕ್ರಿಯಿಸುವ ಸ್ತ್ರೀಯೊಬ್ಬಳ ಘಟನೆಯ ವರ್ಣನೆಯಿದೆ.

ಮದುವೆಯಾದ ಹೆಣ್ಣೊಬ್ಬಳು ದೊಡ್ಡಮನೆಯ ಮಾನ ಮರ್ಯಾದೆ ಉಳಿಸುವ ಆಸ್ತಿಯಾಗುತ್ತಾಳೆ. ಈ ಸುತ್ತುವಿಕೆಯಲ್ಲಿ ಅವಳ ಜೀವನ ಚೈತನ್ಯವೇ ಕಳೆದು ಜೀವಂತ ಶವದಂತೆ ಆಗುತ್ತಾಳೆ ಎಂಬುದನ್ನು ಅವರ 'ಶೋಧ' ಕತೆಯು ಸಾಂಕೇತಿಕವಾಗಿ ಶೋಧಿಸುತ್ತದೆ.

ಭಾರತಿಯನ್ನು ಹುಡುಕುತ್ತಾ ಬಂದ ಕೃಷ್ಣಾ, ಅವಳಿಗೆ ಅಜ್ಜಿಯಾಗಿ ಸಿಗುತ್ತಾಳೆ. ಈ ಆಘಾತದಿಂದ ಚೇತರಿಸಿಕೊಳ್ಳಲಾಗದ ಕೃಷ್ಣಳಿಗೆ ದನಿ ಹೊರಡುವುದುಲ್ಲ, ಪದ ಚಲಿಸುವುದಿಲ್ಲ. ಅವಳದೇ ವಯಸ್ಸಿನ ಭಾರತಿ ವಯಸ್ಸಿಗಿಂತ ಮುಂಚೆ ನಿಯಮಗಳ ಬಂಧನದಲ್ಲಿ ಸಿಲುಕಿ ಹಣ್ಣಾಗಿ ಸುಕ್ಕುಗಟ್ಟಿದ ಮುದುಕಿಯಾಗಿ ನಿಂತು ಗುರುತೇ ಸಿಕ್ಕದಂತೆ ಕಳೆದುಹೋಗುವ ದುರಂತವನ್ನು ಧ್ವನಿಸುತ್ತದೆ. ಹೀಗೆ ಅನೇಕ ಹೆಣ್ಣುಗಳು ಈ ವ್ಯವಸ್ಥೆಯ ಕಟ್ಟು ನಿಯಮಗಳಿಂದ ಉಸಿರುಗಟ್ಟಿಸುವ ಸ್ಥಿತಿಯಲ್ಲಿ ಗುರುತೇ ಸಿಕ್ಕದಂತೆ ಕಳೆದುಹೋಗಿರುವ ಸ್ಥಿತಿಗೆ ಧ್ವನಿಪೂರ್ಣ ಸಂಕೇತವಾಗಿದೆ.

ಮದುವೆ ಮತ್ತು ಹೆಣ್ಣು

'ಮದುವೆ' ಎಂಬುದು ಹೆಣ್ಣಿನ ಜೀವನದಲ್ಲಿ ಒಂದು ಮುಖ್ಯವಾದ ಘಟನೆ. ಈ ಘಟನೆಯ ಹಿನ್ನೆಲೆಯಲ್ಲಿಯೇ ಅವಳ ಬದುಕು ಹೊರಳಿಕೊಳ್ಳುವ ಹೊಸದಿಕ್ಕು ತರುವ ಸಂತೋಷ, ದುಃಖ, ಅವಮಾನ, ಸನ್ಮಾನ ಎಲ್ಲಕ್ಕೂ ಒಂದು ಪ್ರಮಾಣದಂತಿದೆ.

ಮದುವೆಯೆಂಬ ವಸ್ತುವೂ ವೈದೇಹಿಯವರ ಕಥೆಗಳಲ್ಲಿ ಹಲವು ನೆಲೆಗಳಲ್ಲಿ ಶೋಧಿತವಾಗುತ್ತದೆ. ಮದುವೆಯೆಂಬುದು ಎರಡು ಜೀವಗಳ ಮಿಲನದ ಒಂದು ಸಾಂಕೇತಿಕ ಆಚರಣೆ. ಇಲ್ಲಿ ಪುರುಷ ಪ್ರಧಾನ ನಿಯಮಗಳ ಹೇರಿಕೆಯನ್ನು ಕಾಣಬಹುದು. ಆದರ್ಶ ದಾಂಪತ್ಯದ ಶೋಧನೆ ಕೂಡ ಈ ಮದುವೆ ವಸ್ತುವಿನ ಶೋಧನೆಯ ಜೊತೆಗೆ ತೆರೆದುಕೊಳ್ಳುತ್ತದೆ.

'ಮದುವೆ' ಎಂಬುದು ಹೆಣ್ಣೆತ್ತವರು ಕಳೆದುಕೊಳ್ಳಲೇಬೇಕಾದ ಜವಾಬ್ದಾರಿಯ ಮೆರವಣಿಗೆಯಾಗಿ ಕಂಡುಬರುವ ದುರಂತವನ್ನು ಅವರ ಕತೆಗಳು ಶೋಧಿಸುತ್ತವೆ. ಇಲ್ಲಿಯ ಸೂಕ್ಷ್ಮ ಮನಸ್ಸಿನ ಹುಡುಗಿಯರು ಇದರ ಮೂಲವನ್ನೇ ಕಲಕುವಂತೆ ಚಿಂತಿಸುತ್ತಾರೆ. ಅವರ ಚಿಪ್ಪು, ಸೌಂಗಂಧಿಯ ಸ್ವಗತ, ಅಂತರಂಗದ ಅಲೆಗಳು, ಬೀಳು-ಬೇರು ಕತೆಯ ನಾಯಕಿಯರು ಮದುವೆಯ ನಾಟಕದ ಮೊದಲ ಅಂಕದಲ್ಲಿರುವವರು.

ಚಿಪ್ಪು ಕಥೆಯ ನಾಯಕಿ 'ಯಶಿ' ಮದುವೆಯ ವಿಷಯದಲ್ಲಿ ಹೆಣ್ಣಿನ ಅಭಿಪ್ರಾಯಗಳಿಗೆ ಜಾಗವೇ ಇಲ್ಲದ ಮತ್ತು ಸಂಗಾತಿಯ ಬಗೆಗಿನ ತನ್ನಲ್ಲಿರುವ ಆಲೋಚನೆಗಳನ್ನು ಹೊರಗೆ ಹೇಳಿಕೊಳ್ಳಲಾಗದೆ, ದೊಡ್ಡವರ ಹೊಗಳಿಕೆಯಲ್ಲಿ ಅದ್ದಿ, ಯಾರನ್ನು ಬೇಕಾದರೂ ಮದುವೆಯಾಗುವವಳಾಗಿ, ಅವಳ ಹಿರಿಯರಿಗೆ ಕಾಣುತ್ತಾಳೆ. ತಾನೇ ಅಂತರಂಗೀಕರಿಸಿ ಕೊಂಡಿರುವ ಪಿತೃಮೌಲ್ಯಗಳಿಂದಾಗಿ ತನ್ನೊಳಗಿನ ಮಾತುಗಳನ್ನು ಹೇಳುವ ಸ್ಥೈರ್ಯವನ್ನೇ ಕಳೆದುಕೊಂಡ ಯಶೋದೆ. ಅಡಕತ್ತರಿಗೆ ಸಿಕ್ಕಿಹಾಕಿಕೊಂಡಂತೆ ನರಳುತ್ತಾಳೆ. ಹಳೆಯ ಪಾಠಗಳು ಮತ್ತು ಹೊಸ ಆಲೋಚನೆಗಳ ಮಧ್ಯೆ ಸಿಕ್ಕಿಹಾಕಿಕೊಂಡು, ಕೊನೆಗೂ

'ಹಳೆಯ ವಾಸನೆಗಳ ಅಮಲಿಗೆ' ಸಿಕ್ಕಿ ಅತ್ಯಂತ ಗೊಂದಲ ಅನುಭವಿಸುತ್ತಾಳೆ. ಈ ಹಿಂಸೆಯ ಅನುಭವದಿಂದ ಅವಳ ಕಣ್ಣಲ್ಲಿ ನೀರು ಹರಿಯುತ್ತದೆ. ವ್ಯವಸ್ಥೆಯು ಸ್ತ್ರೀ ಪ್ರಜ್ಞೆಯನ್ನು ಹೀಗೆ ವಶಕ್ಕೆ ತೆಗೆದುಕೊಳ್ಳುವುದು, ಮೂರ್ತ ಕ್ರೌರ್ಯಕ್ಕಿಂತಲೂ ಹಿಂಸ್ರಕರವಾದ ಸಂಗತಿ. ಇದನ್ನು ವೈದೇಹಿ ಅತ್ಯಂತ ಮಾರ್ಮಿಕವಾಗಿ ತೋರಿಸಿಕೊಟ್ಟಿದ್ದಾರೆ. ಸ್ತ್ರೀವಾದದ ಯಾವ ವಾಚ್ಯ ಹೇಳಿಕೆಗಳ ಸಹಾಯವೂ ಇಲ್ಲದೆ, ತೀವ್ರವಾದ ಸ್ತ್ರೀ ಸಂವೇದನೆಯಿಂದಲೇ ವೈದೇಹಿ ತಮ್ಮ ಪ್ರಜ್ಞೆಯನ್ನು ವಿಸ್ತರಿಸುತ್ತಾರೆ.

"ಇಷ್ಟಕ್ಕೂ ಮದುವೆ ನಿಜಕ್ಕೂ ತನಗೆ ಬೇಕೆ?" ಎಂದು ಮದುವೆಯ ಉರುಳಿಗೆ ಸಿಕ್ಕಿಹಾಕಿಕೊಳ್ಳಲೇಬೇಕಾದ ಅಸ್ತಿತ್ವವನ್ನೇ ಬೆಂಕಿ ಮಾಡಿಕೊಂಡು ಆಲೋಚಿಸುತ್ತಾಳೆ.

ಬೀಳು–ಬೇರಿನ ಇಂದಿ – "ಇಸ್ಸಿ ನಾನು ಇನ್ನು ಮೇಲೆ ಹಾಗೆ ಕೂಡುವುದಿಲ್ಲ. ನಾನೇನು ವಸ್ತುವಲ್ಲ, ಪ್ರಾಣಿಯಲ್ಲ" – ಅಂತ ಜೀವ ಹೋದವರಂತೆ ಅಳುತ್ತಾಳೆ. ಇಂದಿಗೆ ಗಂಡು ಬಂದು ತನ್ನನ್ನು ನೋಡಿಕೊಂಡು ಹೋಗುವ ವಿಷಯ ಇಷ್ಟವಾಗುವುದಿಲ್ಲ. ಈ ಕತೆಯು ಇಂದಿಗೆ ಗಂಡಿನ ಹುಡುಕಾಟದ ಮತ್ತು ಎಮ್ಮೆಯ ಮಾರಾಟದ ವಿಷಯವನ್ನು ಜೊತೆಜೊತೆಗೆ ಹೇಳುತ್ತಾ ಮದುವೆಯಲ್ಲಿ ಕೇವಲ ಪಶುವಿನಂತೆ ಮಾರಾಟವಾಗುವ ಸ್ಥಿತಿಯ ಬಗ್ಗೆ ಬೆಳಕು ಚೆಲ್ಲುತ್ತದೆ.

ಅಲೆಗಳಲ್ಲಿ ಅಂತರಂಗದ ನಾಯಕಿ ಅಚಲ ಮದುವೆ ಮತ್ತು ಸಂಗಾತಿಯ ಬಗ್ಗೆ ಸ್ಪಷ್ಟ ಆಲೋಚನೆ ಉಳ್ಳವಳು. ತಾನು ಮದುವೆಯಾಗಬೇಕಾದ ಹುಡುಗ ತನ್ನಲ್ಲಿ ಭಾವನೆಗಳನ್ನು ಮೂಡಿಸಬೇಕು, ಅದು ಬಿಟ್ಟು ಅವನಲ್ಲಿರುವ ಶ್ರೀಮಂತಿಕೆ, ನೌಕರಿಯೇ ಅವನ ಮುಖ್ಯ ಗುಣವಾಗಿ, ಬಿಟ್ಟರೆ ಸಿಕ್ಕುವುದಿಲ್ಲ ಎಂದು ಅವಸರವಾಗಿ ಮದುವೆಯಾಗುವುದರ ಬಗ್ಗೆ ಜಿಗುಪ್ಸೆ ಹೊಂದಿ ಬಂದ ಗಂಡುಗಳನ್ನೆಲ್ಲಾ ನಿರಾಕರಿಸುತ್ತಾ ತನ್ನಲ್ಲಿ ಭಾವ ಮೂಡಿಸುವ ಹುಡುಗನಿಗಾಗಿ ಕಾಯುತ್ತಾಳೆ. ಅಚಲ ಮದುವೆಯ ಸಾರ್ಥಕತೆಯ ಬಗ್ಗೆ ಯೋಚಿಸುತ್ತಾಳೆ. "ಮದುವೆಯಾದರೆ ಎಂತಹವನನ್ನು ಗೊತ್ತುಂಟ? ಅವನನ್ನು ಒರಗಿದರೆ ಸಾಕು, ಆಹ! ಎನಿಸುವಂತಿರಬೇಕು."[೧೭] ಎಂದು ಮದುವೆಯಾಗುವವನ ಬಗ್ಗೆ ಸ್ಪಷ್ಟ ಅಭಿಪ್ರಾಯವಿರುವ ಅಚಲ; ಬಿಟ್ಟರೆ ಸಿಗುವುದಿಲ್ಲ ಎಂದು ಮದುವೆಯಾಗುತ್ತಿರುವ ಸರಿತಾಳಿಗೆ 'ಸರಿತಾ ನೀನು ವ್ಯಾಪಾರಕ್ಕೆ ಹೊರಟಿದ್ದಿ, ಅಗ್ಗಕ್ಕೆ ಮಾಲು ಸಿಕ್ಕಾಗ ಗಪ್ಪೆಂತ ಹಿಡಿದುಕೊಳ್ಳುವವರಂತೆ'[೧೮] ಎನ್ನುತ್ತಾಳೆ.

ಎಷ್ಟು ಗಂಡುಗಳು ಬಂದು ಹೋದರು. ಮನಸ್ಸಿಗೊಪ್ಪದ ಅವಳಿಗೆ, ಅವಳ ಅಮ್ಮ ಹೇಳುತ್ತಾಳೆ, 'ಅದೆಲ್ಲ ಬರೀ ಭ್ರಮೆ. ಹಾಗೆಲ್ಲ ಅನಿಸಿದರೂ ಮದುವೆಯ ಮಾತಿಗೆ ಕೊರಳೊಡ್ಡಿದಮೇಲೆ ದಿನ ಹೋದಂತೆ ಮಾಯಕವಾಗುತ್ತದೆ. ..... ಹೀಗೆ ಅವ ಬೇಡ ಇವ ಬೇಡ ಎಂದು ಕುಳಿತರೆ ಕಡೆಗೆ ಸಿಗುವುದು ಯಾಕೂ ಬೇಡದವ' ಎಂದು ಬುದ್ಧಿಮಾತು ಹೇಳುತ್ತಾಳೆ.

ಆದರೆ ಅಚಲಳಿಗೆ ನೆಪಮಾತ್ರದ ಆಚರಣೆಯ ಮದುವೆ ಬೇಡ. ಅವಳಿಗೆ ಮದುವೆಯಲ್ಲಿ ನಡೆಯುವ ಆಚರಣೆಗಳು ಮಾತ್ರವೇ ಮದುವೆ ಎನಿಸುವುದಾದರೆ ಅದು ಬೇಡವೇ ಬೇಡ. "ಹಾಗೆಂತ ಚಪ್ಪರ, ವಾದ್ಯ, ಉಡುಪು, ಶೃಂಗಾರ, ಆಭರಣ, ಅಂತಸ್ತು ಆಶೀರ್ವಾದದ ಅಕ್ಷತೆಕಾಳುಗಳಿಗಾಗಿ ಮದುವೆಯಾಗುವುದು ಹೇಗೆ?"[1] ಎಂದು ಪ್ರಶ್ನಿಸುತ್ತಾಳೆ.

ತನ್ನ ಸ್ನೇಹಿತೆಯರ ವೈವಾಹಿಕ ಜೀವನದಲ್ಲಿನ ಅತಂತ್ರ, ನಿರರ್ಥಕತೆಗಳ ಮಧ್ಯೆ ಮಂಜುಳಾಳ ಜೀವನ ಅಚಲಳಿಗೆ ಅಚ್ಚರಿಯನ್ನುಂಟುಮಾಡುತ್ತದೆ. ತನ್ನಿಂದ ಅಸಾಧ್ಯವಾದುದನ್ನು ಅವಳು ಮಾಡಿದ್ದಾಳೆ ಎನಿಸುತ್ತದೆ. ಗಂಡನಿಂದ ತೃಪ್ತಿ ಸಿಗದೆ ಮಂಜು ಬೇರೆಯವನೊಂದಿಗೆ ಮಲಗಿ ತೃಪ್ತಿ ಪಡುತ್ತಾಳೆ. ಅವಳ ಪ್ರಕಾರ 'ಗಂಡನೊಟ್ಟಿಗೆ ಸೂಳೆಗಾರಿಕೆ ಮಾಡುತ್ತಿದ್ದೆ, ಇವನೊಟ್ಟಿಗೆ ಮಲಗಿದಾಗ ಬದುಕುತ್ತಿದ್ದೇನೆ ಎನಿಸಿತು". ಈ ರೀತಿಯಲ್ಲಿ ವಿದ್ರೋಹ ತೋರುವ ಮಂಜು "ಮದುವೆಯಾದರೆ ಹಲವು ಬಿಗಿತಗಳು ಸಡಿಲವಾಗುತ್ತದೆ" ಎಂದು ಅವಳೆಂದಿದ್ದರ ಅರ್ಥ ಅಚಲಗೆ ಈಗ ಆಗುತ್ತದೆ. ಕೊನೆಗೂ ಅಚಲೆಯ ನೆನಪಿನಲ್ಲಿ ಉಳಿಯುವ ವ್ಯಕ್ತಿಯೆಂದರೆ, ಮಂಜು ಗಂಡನನ್ನು ಧಿಕ್ಕರಿಸಿ ಮಲಗಲು ಆರಿಸಿಕೊಂಡ ಆ ವ್ಯಕ್ತಿ!

ಬೆದಕಾಟ ಬದುಕೆಲ್ಲ ಎಂಬ ಕತೆಯು ವಿವಾಹದ ಕೆಲವು ಸೂಕ್ಷ್ಮಗಳನ್ನು ಪ್ರಶ್ನಿಸುತ್ತದೆ. ಹೊಸದಾಗಿ ಮದುವೆಯಾಗಿ ಗಂಡನ ಪ್ರೀತಿಯಲ್ಲಿ ಅದ್ದಿಹೋಗಿರುವ ವಿಜಿಗೆ, ಪತಿಯ ಸಾವಿನ ನಂತರವೂ ಬದುಕಿರುವುದು ಪಾಪವೆನ್ನುವ ಅಂಜುವಿನ ಆತ್ಮಹತ್ಯೆಯು ಚಿಂತನೆಗೆ ಹಚ್ಚುತ್ತದೆ.

"ಹೆಂಗಸರೆಲ್ಲ ವಂಚಕರು" ಎಂದ ಅಂಜುವಿನ ಮಾತಿಗುತ್ತರವಾಗಿ ಹೃದಯದಲ್ಲೆದ್ದ 'ಗಂಡಸರು?' ಎಂಬ ಪ್ರಶ್ನೆ ಮೂಡುತ್ತದೆ. ಹೆಣ್ಣಿನ ಪ್ರಜ್ಞೆಯಲ್ಲೇ ಅಂತರ್ಗತಗೊಳಿಸಿದ ಲೋಕದ ನಿಯಮಗಳ ಕ್ರೂರತೆ ಕಾಣುತ್ತದೆ.

ಮದುವೆಯ ಯಶಸ್ಸು ಗಂಡು-ಹೆಣ್ಣಿನ ಸಂಪೂರ್ಣ ಸಮರ್ಪಣಾಭಾವದಲ್ಲಿದೆ ಎಂಬುದನ್ನು ಯಶಸ್ಸು ಅವರ ಮರೆವು ಮುಂತಾದವುಗಳನ್ನು ಕತೆಯು ದಾಖಲಿಸುತ್ತುದೆ. ಹೆಣ್ಣು-ಗಂಡು ಎಂಬ ಭೇದವಿಲ್ಲದೆ ಗಂಡಿನಲ್ಲಿ ಹೆಣ್ತನ, ಹೆಣ್ಣಿನಲ್ಲಿ ಗಂಡ್ತನ ಸೇರಿ ಮನುಷ್ಯರಾಗುವ ಯಶಸ್ಸಿನಲ್ಲಿದೆ.

'ಸೌಗಂಧಿಯ ಸ್ವಗತಳು' ಕಥೆಯ ನಾಯಕಿ ಸೌಗಂಧಿ ಓದಿ ಉದ್ಯೋಗಸ್ಥಳಾಗಿರುವ ಹೆಣ್ಣಾದರೂ, ಅವಳ ವ್ಯಕ್ತಿತ್ವಕ್ಕೆ ಸ್ವಾತಂತ್ರ್ಯಕ್ಕೆ ಬೆಲೆಕೊಡದ ಅವಳ ತಂದೆ ತಾಯಿ ಮತ್ತು ಸುತ್ತಮುತ್ತಲಿನವರು ಅವಳ ಬದುಕ್ನು ನರಕವಾಗಿಸಿದ್ದಾರೆ. ಅವಳು ಮುಂದೆ ವಾಸ್ತವ್ಯ ಹೂಡಲಿರುವ ಬಾಡಿಗೆ ಮನೆಯ ಒಡತಿಗೆ

ಗಂಡನಿಲ್ಲ, ಮೇಲಾಗಿ ವಿಧವೆ ಎಂಬ ಅಂಶ ತಮ್ಮ ಮಗಳ ಸುರಕ್ಷೆಗೆ ಸಹಾಯ ಮಾಡುತ್ತದೆ ಎಂಬ ಅಭಿಪ್ರಾಯ ಅವಳ ತಂದೆಯದು. ಸೌಗಂಧಿ ಯೋಚಿಸುತ್ತಾಳೆ.

"....ಅವಳಿಗೆ ಗಂಡನಿಲ್ಲದಿರುವುದು, ಒಬ್ಬಂಟಿ ಮಗಳು ಅವರ ಮನೆಯುಲ್ಲಿ ಬಾಡಿಗೆಗೆ ಇರಬೇಕಾದ ಸಂದರ್ಭದಲ್ಲಿ, ಒಂದು ಒಳ್ಳೆಯ ಅಂಶವೆಂತಲೇ! ಸೌಗಂಧಿ ಕಕ್ಕಾಬಿಕ್ಕಿಯಾಗಿ ತಂದೆಯನ್ನು ನೋಡಿದಳು. ಕ್ರೌರ್ಯದ ಸ್ವರೂಪ ಕೋರೆದಾಡೆ ಉರುಟುಗಣ್ಣು ಅಂತೆಲ್ಲ ಎಣಿಸಿಕೊಂಡಿದ್ದಳು ಸೌಗಂಧಿ; ಆದರೆ ತಂದೆ ನೋಡಲು ಎಷ್ಟು ಸಾಧುವಿದ್ದರೂ!"[೨೦]

ಎಂದು ತನ್ನ ಮೇಲೆ ನಡೆಯುತ್ತಿರುವ ಕ್ರೌರ್ಯದ ಸ್ವರೂಪವನ್ನು ಅರಿತುಕೊಳ್ಳುತ್ತಾಳೆ. ತನ್ನ ತಂದೆ, ತಾಯಿ, ಮನೆಯೊಡತಿ ಎಲ್ಲರೂ ತಮ್ಮ ಅತಿ ಜಾಗರೂಕತೆಯಿಂದ, ಕಠಿಣ ನೈತಿಕ ನಿಯಮಗಳಿಂದ ತನ್ನ ಸ್ವಾತಂತ್ರ್ಯವನ್ನು ಕದಿಯುತ್ತಿದ್ದಾರೆ. ಇದು ಸೌಗಂಧಿಯಲ್ಲಿ 'ಬ್ರಿಟಿಷರ' ನೆನಪನ್ನು ತರಿಸುತ್ತದೆ. ಇದೂ ಒಂದು ರೀತಿಯ ವಸಾಹತೀಕರಣ, ಪ್ರಜ್ಞೆಯ ವಸಾಹತೀಕರಣ ಎಂದು ಮೀರಾರವರು ವಿಶ್ಲೇಷಿಸುತ್ತಾರೆ.

ಈ ಪ್ರಜ್ಞೆಯ ವಸಾಹತೀಕರಣವನ್ನು ಸೌಗಂಧಿ ಮೀರಲು ಪ್ರಯತ್ನಿಸುತ್ತಾಳೆ, ತನ್ನ ಸುತ್ತಲಿನ ಸುರಕ್ಷತೆಯನ್ನು ಬುಡಮೇಲಾಗಿಸುವ ವಿದ್ರೋಹವು ಅವಳ ಮನದಲ್ಲಿ ಜಾಗೃತವಾಗುತ್ತದೆ. ರೂಢಿಗತ ಬದುಕು ಮತ್ತು ಒಳ್ಳೆ ಹುಡುಗಿಯಂತೆ ಪೋಸು ಕೊಡಬೇಕಾದ ಬಲವಂತದಿಂದ ರೋಸಿಹೋದ ಅವಳು ಬದುಕು ಹೇಗಾದರೂ ಬದಲಾಗಬಾರದೇ ಎಂದು ಹಪಹಪಿಸುತ್ತಾಳೆ. ಅವಳು ಯೋಚನೆಯಲ್ಲಿ ಸಾಗಲು, ಅವು ಯಾವ ತುದಿಯನ್ನು ಮುಟ್ಟುತ್ತವೆ ಅಂದರೆ ತಾನೊಬ್ಬಳೇ ಒಂಟಿಯಾಗ ಮನೆಯಲ್ಲಿರುವಾಗ "ಯಾರಾದರೂ ತನ್ನನ್ನು ಬಲಾತ್ಕರಿಸಲಿ, ಹುಲಿಯಂತೆ ಬಂದೆರಗಲಿ – ಅತ್ತಿತ್ತ ಅಲ್ಲಾಡದಂತೆ ಕಟ್ಟಿಹಾಕಿ ....."[೨೧] ಎಂದು ಯೋಚಿಸುತ್ತಾಳೆ.

"ಮರ್ಯಾದಸ್ತ ಮನೆಯವಳು ತಾನು, ಮರ್ಯಾದೆ ಬಿಡುವ ತಾಕತ್ತಿಲ್ಲದವಳು, ಯಾರಾದರೂ ತೆಗೆಯಬೇಕಷ್ಟೆ."[೨೨] ಎಂದುಕೊಳ್ಳುತ್ತಾಳೆ.

ವಾಸ್ತವದಲ್ಲಿ ತನ್ನಿಂದ ಸಾಧ್ಯವಿಲ್ಲದ್ದನ್ನು ಆಲೋಚನೆಯಲ್ಲಿ ತೋರುವ ಅವಳ ವಿದ್ರೋಹದ ಬಗೆ ನಾಗರೀಕ ಎನಿಸಿಕೊಳ್ಳುವ ಸಮಾಜವನ್ನು ದಂಗುಬಡಿಸುತ್ತದೆ.

ಗಮನಿಸಬೇಕಾದ ಸಂಗತಿಯೆಂದರೆ, ಇಲ್ಲಿ ನೀತಿ–ಅನೀತಿಯ ಪ್ರಶ್ನೆಗಿಂತ ಜೀವಂತವಾಗಿ ಬದುಕುವುದೇ ಮುಖ್ಯವಾಗುತ್ತದೆ. ಈ ಹೆಂಗಸರು ಕುಲಟೆಯರಲ್ಲ. ಆದರೆ ದೈನಂದಿನ ಲಯ ಬಂಧಿತ ಅಸ್ತಿತ್ವಗಳಿಂದ ರೋಸಿ ಹೋಗಿ ಹೀಗೆ ಯೋಚನೆ ಮಾಡಲು ಪ್ರೇರೇಪಿತರಾದವರು. ಕೊನೆಗೂ

ಜೀವಂತವಾಗಿ ಬದುಕುವುದೇ ನೀತಿ ಎಂಬ ಕಾವ್ಯಸತ್ಯ ಇಲ್ಲಿ ಮರು ಒತ್ತು ಪಡೆಯುತ್ತದೆ. ವೈದೇಹಿಯವರ ಸ್ತ್ರೀ ಸಂವೇದನೆಯ ಉಜ್ವಲ ಉದಾಹರಣೆಗಳಿವೆ

ಮದುವೆಯೆಂಬುದು ಹಲವು ನಾಟಕಗಳ ಕೇಂದ್ರ ವರ್ಗ ಭೇದಕ್ಕೆ, ಹಲವರ ಕಷ್ಟಸುಖಗಳ ತೆರೆದುಕೊಳ್ಳಲಿಕ್ಕೆ ಹೀಗೆ ಮದುವೆ, ಮದುವೆ ಮನೆ ಅನೇಕ ಅಂಶಗಳನ್ನು ಒಳಗೊಳ್ಳುತ್ತವೆ. ಶ್ರೀಮಂತೆಯಾದ ಸುಬ್ಬಮ್ಮ ಮದುವೆ ಮನೆಯಲ್ಲಿ ಕೇಂದ್ರವಾಗುವುದು, ಸುಮ ಯಾರ ಗಮನಕ್ಕೂ ಬಾರದೆ ಮೂಲೆಗುಂಪಾಗುವುದು, ಮಾಂಕಾಳಿಯಮ್ಮನ ಬದಲಾದ ಜೀವನ ಗತಿಗೆ ಕಾರಣವಾಗುವುದು ಎಲ್ಲವೂ ಮದುವೆಯಲ್ಲಿಯೇ, ರತ್ನನ ಪಾರ್ಸನ ಮೂಲಕ ತೆರೆದುಕೊಳ್ಳುವ ಹಲವರ ಬದುಕಿನ ಗುಟ್ಟು ಎಲ್ಲಕ್ಕೂ ಮದುವೆಯ ಮನೆಯೇ ಕೇಂದ್ರಸ್ಥಾನ.

೫. ವೈದೇಹಿಯವರ ಸ್ತ್ರೀವಾದದ ದರ್ಶನ.

ವಾಲ್ಮೀಕಿ ರಾಮಾಯಣ ಬರೆಯಲು ಪ್ರೇರಣೆ ನೀಡಿದ ಕ್ರೌಂಚ ದಂಪತಿಗಳು, ಗಂಡು ಕ್ರೌಂಚದ ಅಗಲಿಕೆ ಮತ್ತು ಹೆಣ್ಣು ಕ್ರೌಂಚದ ವಿರಹದ ಚೀರಾಟ. ರಾಮ–ಸೀತೆಯರ ವಿರಹದ ಮಹಾಕಾವ್ಯರಚನೆಗೆ ಮುನ್ನುಡಿಯಾಗುತ್ತದೆ. ವೈದೇಹಿಯವರ ಕ್ರೌಂಚ ಪಕ್ಷಿಗಳಲ್ಲಿಯೂ ಇದೇ ರೀತಿಯ ವಿರಹದ ಉರಿಯಲ್ಲಿ ನರಳುವ ಅಶ್ನಾರ್ಣ ಅಜ್ಜನನ್ನು ಕ್ರೌಂಚಪಕ್ಷಿ ಎಂತಲೇ ಕರೆಯುತ್ತಾರೆ. ದೆಹಲಿಯಲ್ಲಿ ಹೋಟಲಿಟ್ಟುಕೊಂಡು ಲಕ್ಷ್ಮಮ್ಮನ ಜೊತೆಗೆ ಸುಂದರ, ಸುಖಮಯ ದಾಂಪತ್ಯ ನಡೆಸುತ್ತಿದ್ದ. ಅಶ್ನಾರ್ಣ ಅಜ್ಜ ದೇಶವಿಭಜನೆಯ ಕಹಿಯೊಂದಿಗೆ ದೇಶದಲ್ಲಿ ಉಂಟದ ಗಲಭೆಗೆ ತುತ್ತಾಗುತ್ತಾರೆ. ದೇಶದ ವಿಭಜನೆಯ ಬಿಸಿ ಇವರ ದಾಂಪತ್ಯವನ್ನು ಅಗಲಿಸುತ್ತದೆ. ಒಂದು ಕೋಮಿನವರು ಇನ್ನೊಂದು ಕೋಮಿನ ಹೆಣ್ಣುಗಳನ್ನು ಅಪಹರಿಸುವ ದುರಂತಕ್ಕೆ ಲಕ್ಷಮ್ಮ ತುತ್ತಾಗುತ್ತಾರೆ. ಅವರಿಗಾಗಿ ಹುಡುಕಾಡಿದ ಅಶ್ನಾರ್ಣ, ಎಲ್ಲೂ ಸಿಕ್ಕದೆ ಸೋತು ಮರಳಿ ಬಂದು ಅನ್ನಪೂರ್ಣಮ್ಮನವರನ್ನು ಎಡರನೇ ವಿವಾಹವಾಗುತ್ತಾರೆ. ಅವರಿಂದ ನಾಲ್ಕು ಮಕ್ಕಳನ್ನು ಪಡೆದರು. ಅವರು ರಾಮಾಯಣ ಕತೆ ಹೇಳುತ್ತಾ ತಮ್ಮ ಸ್ಥಿತಿಯನ್ನು ನೆನೆದು ನರಳುವರು. ಸೀತೆಯನ್ನು ರಾಮ ಯಾಕೆ ಕಾಡಿಗೆ ಕಳಿಸಿದ? ಎಂಬ ಪ್ರಶ್ನೆಗೆ ಅವರ ಉತ್ತರ 'ಅದೂ ..... ಯಾಕೆಂತ ಹೇಳುವುದಪ್ಪಾ ..... ಕ್ರೌಂಚಪಕ್ಷಿ ಸತ್ತ ಮೇಲೆ ಎಲ್ಲಿ ಅಷ್ಟೇ ಮಗೂ' ಎನ್ನುವರು, ತಪ್ಪಲ್ಲವೇ ಅದು? ಎಂದರೆ 'ತಪ್ಪೆಂದರೆ ತಪ್ಪು ಸರಿಯೆಂದರೆ ಸರಿ'[೨೩] ಎಂದು ಉತ್ತರಿಸುವರು. ಹೀಗೆ ವಿರಹ ಯಾತನೆಯಲ್ಲಿ ಬದುಕನ್ನು ಸವೆಸಿ ಕಡೆಗೆ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇವರ ಪರಿಚಯವಿದ್ದ ಅರುಂಧತಿ ವಿಶಾಖ ಬೆನ್‌ರವರ ಮನೆಯಲ್ಲಿ ಲಕ್ಷಮ್ಮನನ್ನು ಸಂಧಿಸುತ್ತಾಳೆ.

ಅಲ್ಲಿ ಲಕ್ಷ್ಮಮ್ಮನನ್ನು ನೋಡಿ ಖುಷಿಯಿಂದ ಅವರ ಕತೆಯನ್ನು ಕೇಳಿದರೆ ಒಂದು ನೋವಿನ ಎಳೆ ಬಿಚ್ಚಿಕೊಳ್ಳುತ್ತದೆ. ನಿರಾಶ್ರಿತ ಶಿಬಿರದಲ್ಲಿ ಸಿಕ್ಕ ಲಕ್ಷಮ್ಮನನ್ನು ಗೊತ್ತಿಲ್ಲ ಎಂದು ಅಶ್ನಾರ್ಣ ತೊರೆದು ಹೋಗಿರುತ್ತಾರೆ. ಅಲ್ಲಿಂದ ಅವರ ಬದುಕು **ವಿಶಾಖ ಚೆನ್‌ರ ಸಹಾಯಕಿಯಾಗಿ ಕಳೆಯುತ್ತದೆ.** ಇವರಿಬ್ಬರಲ್ಲಿ ಯಾರ ಕತೆ ನಿಜ? ಯಾರದ್ದು ಸುಳ್ಳು? ಲಕ್ಷ್ಮಮ್ಮ ಹೇಳಿದ್ದು ನಿಜವಾದರೆ, ಅಶ್ನಾರ್ಣರು ಯಾಕೆ ಹಾಗೆ ಮಾಡಿದರು? ಎಂದು ಕೇಳುವ ಎಂದರೆ ಅವರು ಈಗ ಬದುಕಿಲ್ಲಮತ್ತು ಲಕ್ಷ್ಮಮ್ಮನಿಗೆ ಅವರ ಬಗ್ಗೆ ತಿಳಿದುಕೊಳ್ಳುವ ಯಾವ ಆಸೆಯೂ ಇಲ್ಲ. ಹೀಗೆ ಉತ್ತರಿಸದ ಅನೇಕ ಪ್ರಶ್ನೆಗಳ ಮಧ್ಯೆ ಗೊಂದಲದಲ್ಲಿ ಅರುಂಧತಿ ನಿಲ್ಲುತ್ತಾಳೆ.

ಈ ಕತೆಯೂ ದೇಶವಿಭಜನೆಯ ದುರಂತದ ಮೂಲಕ, ಒಂದು ಕುಟುಂಬದ ಹಿನ್ನೆಲೆಯಲ್ಲಿ ಉಂಟು ಮಾಡಿದ ದುರಂತದ ಮೂಲಕ ಚಿತ್ರಿಸುತ್ತಾರೆ. ಗಂಡಿನ ಅಂತರಂಗದಲ್ಲಿರಬಹುದಾದ ಮಾನವೀಯತೆ ಮತ್ತು ಲೋಕಕ್ಕೆ ಹೆದರಿ ಅದನ್ನು ಮರೆಮಾಚಬೇಕಾದ ಅಸಹಾಯಕತೆಯನ್ನು, ದುರಂತವನ್ನು ಕಾಣಿಸುತ್ತದೆ. ವ್ಯವಸ್ಥೆ ಹೇಗೆ ಒಂದು ದಾಂಪತ್ಯವನ್ನು ಛಿದ್ರಗೊಳಿಸುತ್ತದೆ ಎಂದು ತೋರುತ್ತದೆ. ಲೋಕಾಪವಾದಕ್ಕೆ ಹೆದರಿ ಸೀತೆಯನ್ನು ದೂರಮಾಡಿದ ರಾಮ, ತನ್ನ ಈಡೀ ಜೀವನದಲ್ಲಿ ನರಳಿದ್ದನ್ನು ನೆನಪಿಸುತ್ತದೆ. ಆ ಯಾತನೆಗೆ ಕಾರಣವನ್ನು ಶೋಧಿಸುತ್ತದೆ. ಇಲ್ಲಿ ಅಶ್ನಾರ್ಣರು ವಿರಹದಲ್ಲಿ ನರಳಿದ ಕ್ರೌಂಚಪಕ್ಷಿಯಾಗಿದ್ದಾರೆ.

ಸ್ತ್ರೀ–ಪುರುಷರಿಬ್ಬರೂ ಒಟ್ಟಿಗೇ ಪ್ರಬುದ್ಧರಾದಾಗ ಮಾತ್ರ ಈ ಗಂಡು–ಹೆಣ್ಣು ಭೇದವನ್ನು ದಾಟಬಹುದೆಂಬ ಸೂಚನೆ ಅವರ ಅನೇಕ ಬರಹಗಳಲ್ಲಿದೆ. ಅವರ 'ಮರೆವು' ಕತೆಯು ಹಲವು ವರುಷಗಳ ದಾಂಪತ್ಯವನ್ನು ಅನುಭವಿಸಿ, ಮಕ್ಕಳು ಮೊಮ್ಮಕ್ಕಳನ್ನು ಪಡೆದ ಇಬ್ಬರು ಪಕ್ವಜೀವಿಗಳು ತಮ್ಮ ಜೀವನದ ಇಳಿಗಾಲದಲ್ಲಿ ಸೂಚಿಸುವ ದರ್ಶನ ಮೌಲಿಕವಾದದ್ದು. "ಒಟ್ಟಿಗೇ ಬದುಕಿ ಬದುಕಿ ಕಡೆಗೆ ಹೆಣ್ಣು ಗಂಡು ಎಂಬ ಮಾಯೆಯೇ ಪರಸ್ಪರರಲ್ಲಿ ಮಾಯವಾಗಿ ಕೇವಲ ಜೀವಿಗಳಾಗಿ ಬಿಡುತ್ತೇವೆಯೇ?" ಎಂದು ಆ ದಂಪತಿ ಒಮ್ಮೆ ಅಂದುಕೊಳ್ಳುತ್ತಾರೆ. ಅವರು ತಮ್ಮ 'ಪಾತ್ರ'ಗಳನ್ನು ಬದಲಿಸಿಕೊಳ್ಳುವ ಒಂದು ವಿನೋದಕರ ಪ್ರಸಂಗ ಇಲ್ಲಿ ನಿರೂಪಿತವಾಗಿದೆ. ಸೀರೆ ಉಟ್ಟುಕೊಂಡು ಅಡಿಗೆ ಮನೆಯಲ್ಲಿ ಮೊಮ್ಮಕ್ಕಳಿಗೆ ಊಟ ತಿಂಡಿ ಮಾಡಿಸುವ ಅಜ್ಜ 'ಅಜ್ಜಿ'ಯಾಗಿ ಪರಿವರ್ತಿತವಾದರೆ, ಪಂಚೆಯುಟ್ಟು ಪೇಟೆಗೆ ಹೋಗಿಬರುವ ಅಜ್ಜಿ 'ಅಜ್ಜ'ನಾಗಿ ರೂಪಾಂತರಗೊಳ್ಳುವ ಅಸಂಭವನೀಯ ಎನ್ನಿಸಬಹುದಾದ ಸನ್ನಿವೇಶದ ಮೂಲಕ ಲೇಖಕಿಯ ಜೀವನದೃಷ್ಟಿ ಸೂಚಿತವಾಗುವಂತಿದೆ. "ಏನೆಂದರೂ ಈ ಹೆಣ್ಣು ಗಂಡು ಮಾಯೆಯಲ್ಲ, ನಡುವೆ ಇಣುಕಿ ಆಡಿಸಿ ವೃದ್ಧಾಪ್ಯದಲ್ಲಿ ಒಂದು ದರ್ಶನದ ಚೌಕಟ್ಟಿನಲ್ಲಿ ಕೂಡಿಸಲು ಮಾತ್ರ ಇರಬಹುದೆ? ತುದಿಲ್ಲಿಲ್ಲ, ಕೊನೆಯಲ್ಲಿಲ್ಲ. ನಡುವಲ್ಲೊಂದು ಬಣ್ಣದ ಪ್ರಪಂಚ. ಮೋಹಕ ಮೋಹ ಪ್ರಪಂಚ. ಮಗು ಮುಗ್ಧತೆಯಿಂದ ಒಳಬಂದು, ಕಣ್ಣು ತೆರೆದು ಆಘಾತಗೊಂಡು, ಅನುಭವಿಸಿ, ಕೊನೆಗೆ

ಮತ್ತೆ ಮಗುವಿನಂತಾಗಿಯೂ ಮಗುವಾಗದೆ, ನಿರ್ಗಮಿಸಲು?.” ಹೀಗೆ ಲಿಂಗಭೇದ ಗೆದ್ದು ಕೇವಲ ಮನುಷ್ಯರಾಗಿ ಬಾಳುವ ಆದರ್ಶವನ್ನು ಕಾಣಿಸುತ್ತದೆ. ಸಮಾನತೆ ಎಂಬುದರ ನಿಜವಾದ ಅರ್ಥ ಸಿಗುತ್ತದೆ.

ಅಡಿಟಿಪ್ಪಣಿಗಳು;

೫. ಅಲಿಗಳಲ್ಲಿ ಅಂತರಂಗ, ವೈದೇಹಿ ಪು-೩೯೭

೬. ವಿಭಾವ, ಎಲ್.ಸಿ. ಸುಮಿತ್ರಾ, ಪು-೨೧

೭. ಅಲೆಗಳಲ್ಲಿ ಅಂತರಂಗ, ವೈದೇಹಿ, ಪು-೩೭೦

೪. ಅದೇ ಪು-೩೭೧

೫. ಅದೇ ಪು-೩೮೦

೬. ಸ್ತ್ರೀಮತವನುತ್ತರಿಸಲಾಗದೆ, ಎಂ.ಎಸ್. ಆಶಾದೇವಿ, ಪು-೭೭

೭. ಅಲೆಗಳಲ್ಲಿ ಅಂತರಂಗ, ವೈದಹಿ, ಪು-೩೫೬.

೮. ಅದೇ ಪು-೩೨೧

೮. ಅದೇ ಪು-೩೨೮

೯. ಅದೇ ಪು-೩೨೮

೧೦. ಅದೇ ಸ್ತ್ರೀಮತವನುತ್ತರಿಸಲಾಗದೆ, ಎಂ.ಎಸ್. ಆಶಾದೇವಿ, ಪು-೭೩

೧೧. ಅದೇ ಪು-೭೫

೧೨. ಅದೇ ಪು-೫೭೫

೧೩. ಅಲೆಗಳಲ್ಲಿ ಅಂತರಂಗ, ವೈದೇಹಿ, ಪು.೧೫೩

೧೪. ಭಾರತೀಯ ಸ್ತ್ರೀವಾದ, (ಸಂ), ಮನುಚಕ್ರವರ್ತಿ, ಪು-೧೧೬

೧೫. ಅದೇ ಪು-೧೧೩

೧೬. ಅದೇ ಪು-೧೧೬

೧೭. ಅಲೆಗಳಲ್ಲಿ ಅಂತರಂಗ, ವೈದೇಹಿ, ಪು-೨೨೧.

೧೮. ಅದೇ ಪು-೨೨೧

೧೯. ಅದೇ ಪು-೨೨೩

೨೦. ಅದೇ ಪು-೩೩೩

೨೧. ಅದೇ ಪು-೩೩೫

೨೨. ಅದೇ ಪು-೩೩೮

೨೩. ಅದೇ ಪು-೩೩೮

೨೪. ವೈದೇಹಿ ವಾಚಿಕೆ, ಟಿ.ಪಿ. ಅಶೋಕ, ಮುನ್ನುಡಿ

೫. ವೈದೇಹಿಯವರ ಕಾದಂಬರಿಯಲ್ಲಿ ಸ್ತ್ರೀ.

"ಅಸ್ಪೃಶ್ಯರು" ವೈದೇಹಿಯವರ ಏಕೈಕ ಕಾದಂಬರಿಯಾಗಿದೆ.ಈ ಕಾದಂಬರಿಯು ಹಲವು ಬಗೆಯಲ್ಲಿ ವಿಶಿಷ್ಟವಾಗಿದೆ.

'ಅಸ್ಪೃಶ್ಯರು' ಎಂದರೆ ಸಾಮಾನ್ಯವಾಗಿ ಜಾತಿಯಿಂದ ಕೀಳಾದವರು ಅದರಲ್ಲೂ ದಲಿತರನ್ನು ಸೂಚಿಸುವ ಪದವಾಗಿ ಅರ್ಥೈಸುತ್ತದೆ.

ಈ ಪದವನ್ನು ವೈದೇಹಿಯವರು ಹಲವು ಸೂಕ್ಷ್ಮಗಳೊಂದಿಗೆ ಬಳಸುತ್ತಾರೆ. "ಅಸ್ಪೃಶ್ಯರು" ಎಂದರೆ, ಮುಟ್ಟಬಾರದವರು ಎಂಬ ರೂಢಿಗತ ಅರ್ಥದೊಂದಿಗೆ ಮುಟ್ಟಲಾಗದವರು ಎಂದೂ ಅರ್ಥೈಸುತ್ತಾ ಒಂದು ಸೂಕ್ಷ್ಮ ಸತ್ಯದ ಮೇಲೆ ಬೆಳಕು ಚೆಲ್ಲುತ್ತದೆ. ಲಿಂಗ ತಾರತಮ್ಯದ ಅನೇಕ ಅವತಾರಗಳಲ್ಲಿ ಹೆಣ್ಣು ತನ್ನ ಜೀವಿತದ ಕೆಲದಿನಗಳಲ್ಲಿ ಅಸ್ಪೃಶ್ಯಳಾಗಿಯೇ ಕಳೆಯಬೇಕಾದ ಸಂದರ್ಭಗಳ ಮೇಲೆ ಬೆಳಕು ಚೆಲ್ಲುತ್ತದೆ. ಮುಟ್ಟು–ಬಾಣಂತನದ ಮಡಿ–ಮೈಲಿಗೆಯ ಇಕ್ಕಟ್ಟಿನಲ್ಲಿ ತಮ್ಮ ಜೀವಿತದ ಕೆಲದಿನಗಳನ್ನು ಅಸ್ಪೃಶ್ಯತೆಯಲ್ಲಿ ಕಳೆಯಬೇಕಾದ ಅಂಶದ ಮೇಲೆ ಕಾದಂಬರಿ ಬೆಳಕು ಚೆಲ್ಲುತ್ತದೆ. ಜೊತೆಗೆ ಈ ಸ್ಥಿತಿಯನ್ನು ಹೆಣ್ಣಿನ ಮೇಲೆ ಹೇರುತ್ತಿರುವುದು ಸ್ವತಃ ಮತ್ತೊಂದ ಹೆಣ್ಣು! ಅದರಲ್ಲಿಯೂ ತಾಯಿ!

ಕಾದಂಬರಿಯಲ್ಲಿ ನಾವು ಎರಡೂ ನೆಲೆಯಲ್ಲಿ ನಿಂತ ಹೆಣ್ಣುಗಳನ್ನು ಕಾಣುತ್ತೇವೆ.

[೧] ಪುರುಷ ನಿರ್ಮಿತ ವ್ಯವಸ್ಥೆಯನ್ನು ಚಾಚೂ ತಪ್ಪದೆ ಪಾಲಿಸುವವರು,

[೨] ಈ ವ್ಯವಸ್ಥೇಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತರುತ್ತಿರುವ ವರ್ಗ.

ಪಾರ್ತಕ್ಕ, ಗೌರಮ್ಮ, ರತ್ನ, ರುಕ್ಕು, ಸೀತು ಮೊದಲಾದವರು ಮೊದಲನೇ ವರ್ಗಕ್ಕೆ ಸೇರಿದರೆ, ಭಾಸ್ಕರ, ಸರೋಜ, ಶಾಮಿ, ಶೀನ, ಶಿವ ವಾಸುದೇವರಾಯರು, ಕುಮುದಿನಿ ಎರಡನೇ ವರ್ಗಕ್ಕೆ ಸೇರುತ್ತಾರೆ.

ಕಾದಂಬರಿಯು ಕುಂದಾಪುರ ಪ್ರಾಂತ್ಯದ ಕಾಲ್ಪನಿಕ ಬ್ರಾಹ್ಮಣ ಕುಟುಂಬವೊಂದರಲ್ಲಿ ನಡೆಯುತ್ತದೆ. ಜಾತಿಯಿಂದ ಮೇಲಾದರೂ ಹೆಣ್ಣೆಂಬ ಕಾರಣಕ್ಕೆ ಅಸ್ಪೃಶ್ಯತೆಯ ನೆರಳು ಕಾಡುವ ಸ್ಥಿತಿಯಲ್ಲಿ ಬದುಕುತ್ತಿದ್ದರೂ, ಮಡಿಯನ್ನು ಬಿಡದ ಈ ಸ್ತ್ರೀಯರು ಅದನ್ನು ತಮ್ಮ ಜೀವಕ್ಕಿಂತ ಹೆಚ್ಚಾಗಿ ಪಾಲಿಸಿಕೊಂಡು ಬರುತ್ತಾರೆ. ಲಿಂಗದ ನೆಲೆಯಲ್ಲಿ ಕೀಳು ಪದವಿ ಪಡೆದ ಈ 'ಅಸ್ಪೃಶ್ಯ' ಬ್ರಾಹ್ಮಣ ಹೆಂಗಸರು ಒಂದು ಜಾತಿಯಾಗಿ ತಾವು ಶ್ರೇಷ್ಠರು ಎಂದು ಬೀಗುತ್ತಾ ಇತರ ಜಾತಿಯ ಗಂಡಸರು ಮತ್ತು ಹೆಂಗಸರನ್ನು ಅಸ್ಪೃಶ್ಯರಾಗಿ ಪರಿಗಣಿಸುವುದು. ಅಂದರೆ ಮಹಿಳೆಯರಾಗಿ ಕೂಡ– ಲಿಂಗದ ನೆಲೆಯಲ್ಲಿ ಕೂಡ ಕ್ರಿಶ್ಚಿಯನ್ ಮತ್ತು ಕೊರಗರು ಒಂದು ಸಮಾನ ನೆಲೆಗೆ ಬಾರದ ವ್ಯಂಗ್ಯ ಕಾಣುತ್ತದೆ.

'ಅಕ್ಕನಿಗೆ ಹೊಟ್ಟೆನೋವು ಸುರುವಾಗಿದೆ, ಬಂದು ಹೋಗಬೇಕಂತೆ ಅಮ್ಮ ಹೇಳಿದ್ದು' ಎಂದು ಶಾಮಿ ಮಿಡ್ ಬಾಯಿಯನ್ನು ಕರೆದು ಬರುವುದರೊಂದಿಗೆ ಕಾದಂಬರಿ ಪ್ರಾರಂಭವಾಗುತ್ತದೆ. ಕಾದಂಬರಿಯ ಪ್ರತಿ ನಡಿಗೆಯು ಅಸ್ಪೃಶ್ಯತೆಯನ್ನು ದಾಟಿಕೊಂಡೇ ಸಾಗುತ್ತದೆ. ಕರೆದು ಬರಲು ಕಳುಹಿಸಿದ ತಾಯಿ ಕ್ರಿಶ್ಚಿಯನ್ನಳಾದ ಮಿಡ್ ಬಾಯಿಯ ಮನೆಯಲ್ಲಿ ಏನನ್ನು ತಿನ್ನಬೇಡ ಎಂದು ಹೇಳಿ ಕಳಿಸಿರುತ್ತಾಳೆ. ಅವರ ಮನೆಯಲ್ಲಿ ಕೊಟ್ಟ ಬ್ರೆಡ್ ತಿನ್ನುವ ಆಸೆಯಾದರು, ತಾಯಿಯ ಮಾತು ನೆನಪಾಗಿ ಹಾಗೆಯೇ ಬರುತ್ತಾಳೆ. ಈ ರೀತಿ ಸಾಮಾಜಿಕ ಅಸ್ಪೃಶ್ಯತೆಗೆ ತೆರೆದುಕೊಳ್ಳುತ್ತಿರುವ ಶಾಮಿ ಮುಂದೆ ಅನೇಕ ರೀತಿಯ ಅಸ್ಪೃಶ್ಯತೆಗೆ ತೆರೆದು ಕೊಳ್ಳುತ್ತಾ ಹೋಗುತ್ತಾಳೆ.

ಅಂದು ರಾತ್ರಿಯೇ ಅವಳಿಗೆ ಮನೆಯೊಳಗಿನ ಅಸ್ಪೃಶ್ಯತೆಯು ಗೋಚರಿಸುತ್ತದೆ. ಹೆರಿಗೆಯ ಸಂಕಟದಲ್ಲಿರುವ ಅಕ್ಕ ರತ್ನ, ಗಾಳಿ ಬೆಳಕು ಬಾರದ ಕತ್ತಲೆಯ ಕೋಣೆ ಸೇರುತ್ತಾಳೆ. ಮಗುವಿನ ಜನನದೊಂದಿಗೆ ಅಶುದ್ಧಳಾಗಿ ಮುಟ್ಟಲಾಗದವಳಾಗುತ್ತಾಳೆ. ಅವಳ ಜೊತೆಗೆ ಆ ಎಳೆ ಕಂದನು ಕೂಡ ಅಸ್ಪೃಶ್ಯವಾಗುತ್ತದೆ. ಅವರಿಬ್ಬರು ಮತ್ತೆ ಸ್ಪೃಶ್ಯರಾಗುವುದು ಹನ್ನೊಂದನೆ ದಿನದ ಶುದ್ಧಿಯ ನಂತರವೇ. ಆ ಎಳೆ ಕಂದನಿಗೆ ಈ ಅಶುದ್ಧಿ-ಶುದ್ಧಿ ಯಾವುದು ತಿಳಿಯುವುದಿಲ್ಲ ಅದಕ್ಕೆ ತಿಳಿಯುವುದು ಹಸಿವು ಮಾತ್ರ. ಆದರೆ ಈ ಘಟನೆ ಶಾಮಿಗೆ ಕೆಲವು ಕಟು ವಾಸ್ತವಗಳ ಪರಿಚಯ ಮಾಡಿಸುತ್ತದೆ.

ಹುಟ್ಟಿನ ಬಗ್ಗೆ ಅನೇಕ ಪ್ರಶ್ನೆಗಳು ಮತ್ತು ಕೂತುಹಲದಲ್ಲಿ, ಮಗುವನ್ನು ನೋಡುವ ಆಸೆಯಿಂದ ಹೆರಿಗೆಯಾಗುವವರೆಗೂ ನಿದ್ರೆ ಮಾಡದೆ ಕಾದು ಕುಳಿತ, ಅವಳಿಗೆ ಮಡಿಯ ಗೆರೆಗಳು ಒಳಗೆ ಬಿಡುವುದಿಲ್ಲ. ಬಾಗಿಲ ಬಳಿಯೇ ನಿಂತು ಮಗುವನ್ನು ಅಕ್ಕನನ್ನು ಕಾಣುತ್ತಾಳೆ. ಅಕ್ಕ ನೆಲದ ಮೇಲೆ ಮೈಲಿಗೆಯಾಗಿ ಮಲಗಿದ್ದಾಳೆ. ರತ್ನಳ ಮೊದಲ ಮಗು ರವಿಮಾಣಿಯನ್ನು ಮಡಿಯ ಗೆರೆಗಳು ಅವಳ ಬಳಿ ಬಿಡುವುದಿಲ್ಲ.

ಮಡಿ- ಮೈಲಿಗೆಗೆ ಕುಂದುಬಾರದಂತೆ ಕಾಯುತ್ತಿರುವವರು ಪಾರ್ತಕ್ಕ ಎಂಬ ಮಡಿ ಹೆಂಗಸು. ಪಾರ್ತಕ್ಕ ಕಾದಂಬರಿಯ ಮುಖ್ಯ ಪಾತ್ರ. ಅವರ ಸುಖ-ಸಂತೋಷಗಳೆಲ್ಲ ಸಂಪ್ರದಾಯದ ಹಿಡಿತಕ್ಕೆ ಸಿಲುಕಿ ನಲುಗಿದ್ದರೂ, ಅದರ ಅರಿವಿಲ್ಲದೆ ಮುಗ್ಧವಾಗಿ ಹಿಂದಿನಿಂದ ನಡೆದು ಬಂದ ರೀತಿ ನೀತಿಗಳನ್ನು ಅನುಸರಿಸುವವರು. ತಮ್ಮ ಮಗ ಭಾಸ್ಕರ ಹೆಂಡತಿಗೆ ಅಡಿಗೆ ಕಲಿಸಿದ ಎಂದು ತಿಳಿದಾಗ "ಗಂಡಸು ಅಡಿಗೆ ಮಾಡುವುದೆಂತಾದರೆ ಪ್ರಪಂಚದಲ್ಲಿ ಹೆಣ್ಣು ಜನ್ಮ ಅಂತ ಯಾಕೆ ಬೇಕು? ಗಂಡನೇ ಅಡಿಗೆ ಕಲಿಸುವುದಾದರೆ ಕಲಿಯುಗ ಮುಗಿಯುತ್ತ ಬಂತೆಂತಲೇ ಅರ್ಥ".[7] ಎನ್ನುತ್ತಾರೆ. ಯಾವ ಸಂದರ್ಭದಲ್ಲಿಯೂ ಪಾರ್ತಕ್ಕ ಸಂಪ್ರದಾಯವನ್ನು ಮನಸ್ಸಿನಲ್ಲಿಯೂ ಪ್ರಶ್ನಿಸುವುದಿಲ್ಲ. ಮಡಿ ವಿಚಾರದಲ್ಲಿ ಅವಳು ಎಷ್ಟು ಬಿಗಿಯೆಂದರೆ ಮೈಲಿಗೆಯ ನಡುವೆಯು ಅದನ್ನು ಅನುಸರಿಸುವಳು.

"ಪಾರ್ತಕ್ಕ ಮನೆ ಮುಟ್ಟಿರಬಹುದಾಗಿದ್ದ ಮಿಡಬಾಗೆ ಬೈಯುತ್ತ ಕಾಲುನೀಡಿ ಕುಳಿತಿದ್ದಳು 'ನಾನು ಎಷ್ಟು ಕೇಳಿಕೊಂಡರೂ ನನ್ನನ್ನು ಮುಟ್ಟದ ಹಾಗೇ ಇರುತ್ತಿದ್ದಳು, ಇರಪರ ಇಲ್ಲದವಳು'.

'ನಮ್ಮದೊಂದು ಆಚಾರ ಅಷ್ಟೆ. ಈಗ ನಾವಿರುವುದೇ ಮೈಲಿಗಯಲ್ಲಿ ಅಲ್ಲವೆ?' – ಎಂದು ಗೌರಮ್ಮ ಹೇಳಿದರೆ.

'ಅದು ನಮ್ಮ ಮನೆಯ ಮೈಲಿಗೆ, ಮಿಡ್‌ಬಾಯಿಯದು ನೂರು ಮನೆಯ ಮೈಲಿಗೆ. ಈಗಷ್ಟೇ ಶೇಷ ಪುಜಾರಿಯ ಮಗಳನ್ನು ಹೆರಿಸಿ ಬಂದೆ ಎಂದಳು ಅವಳು. ಕೇಳಿದೆಯ? ಯಾರ ಯಾರ ಮನೆ ಮೈಲಿಗೆಯನ್ನೆಲ್ಲ ಮುಟ್ಟಿಕೊಳ್ಳಲು ನನಗೇನು ಗರ್ಜು?"[3] ಎನ್ನುತ್ತಾಳೆ.

ಮಗು ನೋಡಲು ಬಂದ ಶಾಮಿಯನ್ನು ತಡೆಯುವವಳು ಅವಳೇ. "ಶಾಮಿಗೆ ಮಲಗಿದರೆ ನಿದ್ದೆ ಬರಲೊಲ್ಲದು ಎಂದು ಬಂದು ಅಮ್ಮ, ನಾ ಮಗುವನ್ನು ಕಾಣಬೇಕು' – ಎಂದಳು ಬಾ ಎಂದು ಬಾಗಿಲು ತೆರೆದರು ಗೌರಮ್ಮ. 'ಒಳಗೆ ಬಿಡಬೇಡ ಬಂದು "ರತ್ನಕ್ಕ" ಎಂತ ಹಾಸಿ ಕುಳಿತರೂ ಕುಳಿತಿತೇ ಮಡಿ ಮೈಲಿಗೆ ಹೋದ ದಾರಿಯಲ್ಲಿಲ್ಲ"[4] ಎನ್ನುತ್ತಾಳೆ.

ಸ್ನಾನ ಮಾಡಿದರಾಯಿತು ಬಾ ಎಂದು ಮಂಕಾಗಿದ್ದ ರವಿಯನ್ನು ಹತ್ತಿರಕ್ಕೆ ಕರೆಯುವ ರತ್ನಳಿಗೆ ಪಾರ್ತಕ್ಕ 'ನಿನ್ನ ಕೊಂಯ್ಯಾರ ಸಾಕು ಇವತ್ತು ಬಂದು ಮಂಚ ಹತ್ತುತ್ತದೆ ನಾಳೆ ಹೊಟ್ಟಯ ಮೇಲೇ ಬಂದು ಕುಳಿತುಕೊಳ್ಳುತ್ತದೆ. ಹಾಗೆಲ್ಲ ಕರೆಯಬೇಡ' – ಎನ್ನುತ್ತ ಬರಲೋ ಬೇಡವೋ ಎಂದು ಒಂದು ಹೆಜ್ಜೆ ಮುಂದಿಟ್ಟ ರವಿ ಮಾಣಿಗೆ 'ಹ್ಞೇ, ಅಮ್ಮನ್ನ ಮುಟ್ಟಬಾರದು ಹಾಗೆಲ್ಲ, ಅವಳಿಗೆ ಅಬ್ಬು ಆಗಿದೆ'[5] ಎಂದು ಗದರುತ್ತಾಳೆ. ರವಿ ಬೆಚ್ಚಿ ಮುಂದಿಟ್ಟ ಹೆಜ್ಜೆಯನ್ನು ಹಿಂದಿಟ್ಟು ಮತ್ತೆ ಬಾಗಿಲ ಸಂದಿಯಲ್ಲೇ ನಿಲ್ಲುತ್ತಾನೆ. ರತ್ನಳ ಮಮತೆಗೆ ಪಾರ್ತಕ್ಕನ ಮಡಿಯು ಅಡ್ಡ ಬರುತ್ತದೆ.

ಮಡಿ– ಮೈಲಿಗೆ, ಮೇಲೂ– ಕೀಳು, ಎಂಬ ವಿಷಯ ಪಾರ್ತಕ್ಕನ್ನು ಎಷ್ಟು ಆವರಿಸಿದೆ ಎಂದರೆ, ಅವಳ ಮಮತೆಯನ್ನು ಮರೆಸುವಷ್ಟು. ಪಾರ್ತಕ್ಕನ ಒಬ್ಬನೇ ಮಗನಾದ ಭಾಸ್ಕರ, ಅವಳ ಬದುಕಿನ ಏಕೈಕ ಆಸರೆ, ಜಾತಿಯ ಶ್ರೇಣಿಯಲ್ಲಿ ಕಟ್ಟ ಕಡೆಯವರೆನಿಸಿದ ಕೊರಗರ ಹೆಣ್ಣೊಬ್ಬಳನ್ನು ಮದುವೆಯಾದನೆಂದು ಅವನಿಂದ ತನ್ನ ಸಂಬಂಧವನ್ನೇ ಕಡಿದುಕೊಳ್ಳುತ್ತಾಳೆ.

ಗಣೇಶ ಚೌತಿಯಂದು ಮನೆಮನೆಗೂ ಕಡುಬು ಬೇಡುತ್ತಾ ಬರುವ ಕೊರಗರ ಗುಂಪುನ್ನು ನೋಡಿ, ಪಾರ್ತಕ್ಕನಿಗೆ ಮಗನ ಬಾಯಿರುಚಿ, ಕಡುಬಿನ ಮೇಲಿನ ಪ್ರೀತಿ ನೆನಪಾಗುತ್ತದೆ. ಬೇಡಿ ತಿಂದು ಬೆಳೆದ ಅವನ ಹೆಂಡತಿ ಕಡುಬು ಮಾಡಿಹಾಕುವಳೆ? ಎಂಬ ಮಮತೆಯ ಕರುಳು ಆ ದಿನವಿಡಿ ಕಣ್ಣೀರು

ಸುರಿಸುತ್ತದೆ. ಆದರೂ ಅವನನ್ನು ಅವನ ಹೆಂಡತಿಯನ್ನು ಅವಳು ಒಪ್ಪಿಕೊಳ್ಳುವುದಿಲ್ಲ. ಭಾಸ್ಕರ ಜೈಲಿಗೆ ಹೋದಾಗಲೂ ಅವಳ ಮಡಿ ಕರಗುವುದಿಲ್ಲ. ತುಂಬು ಗರ್ಭಿಣಿಯಾದ ಅವನ ಹೆಂಡತಿಯನ್ನು ಅಸಹಾಯಕ ಸ್ಥಿತಿಯಲ್ಲಿ ಮನೆಗೆ ಕರೆತಂದಾಗಲೂ ಅಟ್ಟ ಹತ್ತಿ ಕುಳಿತು ಮಡಿ ಮತ್ತು ಜಾತಿಯ ಶ್ರೇಷ್ಠತೆ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗುತ್ತಾಳೆ. ತನ್ನನ್ನು ತಾನೇ ಮಡಿಗೆ ಕಟ್ಟಿಹಾಕಿಕೊಂಡು, ಮಗನ ಮೇಲಿನ ಮಮತೆ, ವಾತ್ಸಲ್ಯವನ್ನು ತೊರೆಯಲಾಗದೆ ನರಳುವ ಪಾರ್ತಕ್ಕ. ಹೊರಬರುವ ದಾರಿಗಳನ್ನೆಲ್ಲಾ ತಾನೆ ಮುಚ್ಚಿಕೊಂಡಿದ್ದಾಳೆ.

ಇದಕ್ಕೆ ವಿರುದ್ಧವಾಗಿ 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕತೆಯಲ್ಲಿ ಸಿನಿಮಾ ಮಹಿಳೆಯರ ಮನೋಲೋಕದಲ್ಲಿ ಮತ್ತು ಸಾಮಾಜಿಕಲೋಕದಲ್ಲಿ ತಂದ ಪಲ್ಲಟಗಳನ್ನು ವರ್ಣಿಸುತ್ತದೆ. "ಸಿನೆಮಾ ನೋಡಲಿಕ್ಕಾಗಿ ಹೆಂಗಸರು ಮುಟ್ಟಾಗುವುದನ್ನೇ ಕಾಯುತ್ತಾ ಮಡಿ-ಮೈಲಿಗೆಯ ಪರಿಧಿಯಲ್ಲಿ ಒಂದು ಛಳಕನ್ನೇ ಹುಟ್ಟಿಸಿದ್ದು".[೫] ಸಿನಿಮಾ ಟೆಂಟನ್ನು ಸ್ತ್ರೀ ಬಿಡುಗಡೆಯ ದಾರಿಯಾಗಿ ಕಂಡುಕೊಳ್ಳುವ ಅಲ್ಲಿಯ ಹೆಂಗಸರು, ಆ ದಾರಿಯಲ್ಲಿ ನಡೆಯಲು ಹಿಂಜರಿಯುವುದಿಲ್ಲ. ಊರಿನ ಸೂಲಗಿತ್ತಿ ಲಿಲ್ಲೀಬಾಯಿ ಗೇಟ್ ಕೀಪರ್ ಕೆಲಸಕ್ಕೆ ಸೇರಿಕೊಂಡಾಗ, "ಗಂಡಸರೆದುರು ಹೆರುವುದೆ? ಎಂಬ ಕಾರಣಕ್ಕಾಗಿ ಮೂಲೆಗೊತ್ತಲ್ಪಟ್ಟ ಆ ಊರಿನ ಡಾಕ್ಟರಶಾಪು ಸುಣ್ಣ ಬಣ್ಣದಿಂದ ಶೋಭಿಸಲಾರಂಭಿಸಿತು."[೬] ಹೆಂಗಸರಿಗೆ ತಮ್ಮ ಅಸ್ಮಿತೆಯ ಅರಿವು ಮೂಡಿದ್ದು, ಅದರಿಂದಾಗಿ ಅವರ ಲೋಕವ್ಯವಹಾರಗಳ ಪರಿಧಿಯಲ್ಲೇ ಬದಲಾಣೆಗಳು ಗೋಚರವಾಗತೊಡಗಿದ ಸಂಕೀರ್ಣ ವಿದ್ಯಮಾನಗಳನ್ನು ಲಘುದಾಟಿಯಲ್ಲೇ ಕತೆ ನಿರೂಪಿಸುವ ಕ್ರಮ ಅನನ್ಯವಾಗಿದೆ.

ಮಡಿ-ಮೈಲಿಗೆಯ ಪ್ರಜ್ಞೆ ಕೇವಲ ಮೇಲು ವರ್ಗದವರಲ್ಲಿ ಮಾತ್ರ ಕಾಣುವುದಿಲ್ಲ. ಕೆಳವರ್ಗದವರಲ್ಲಿಯೂ ಸಹಜವೆಂಬಂತೆ ಇರುವುದನ್ನು ಕಾಣಬಹುದು. ಅಂತರ್ಜಾತಿ ವಿವಾಹದ ಮೂಲಕ ಕುಮುದಿನಿಯಾಗುವ ತುಕ್ರಿಯನ್ನು ಅವರ ಜಾತಿಯವರು ದೂರ ಮಾಡುವುದು ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಭಾಸ್ಕರನ ಸಂಬಂಧಿಗಳಾದ ವಾಸುದೇವರಾಯರು, ಶೀನು, ಅವರ ಮನೆಗೆ ಹೋಗಿ ಬಂದರೂ ಅವಳ ಬಂಧುಗಳಾರು ಅಲ್ಲಿಗೆ ಬರುವುದಿಲ್ಲ. ತುಂಬು ಗರ್ಭಿಣಿಯ ಸ್ಥಿತಿಯಲ್ಲಿಯೂ, ಅಸಹಾಯಕಳಾದ ಅವಳ ಸಹಾಯಕ್ಕೆ, ಅವಳ ಮನೆಯವರು ಬರುವುದಿಲ್ಲ. ಮೇಲ್ಜಾತಿಯವರಾದ ವಾಸುದೇವರಾಯರು ಅಸಹಾಯಕಳಾದ ಅವಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗುತ್ತಾರೆ. ಜಾತಿಯ ಮೇಲು ಕೀಳಿನ ಸಂಕೋಲೆಯಲ್ಲಿ ನರಳಿದ ಈ ಜನಕ್ಕೆ ಬದಾಲವಣೆಯ ಹೊಸ ಗಾಳಿ ಬೆಳಕು ಬೇಡ. ಬದಾಲವಣೆಗೆ, ಸಾಮಾನತೆಗೆ ಜಾತಿಯ ಸಿಹಿ ಉಂಡವರು ತೆರೆದುಕೊಳ್ಳುತ್ತಿದ್ದರೆ. ಪ್ರತಿಭಟಿಸ ಬೇಕಾದವರೆ ಹಳೆಯದಕ್ಕೆ ಜೋತು ಬಿದ್ದಿದ್ದಾರೆ.

ಗೆಂಡಕ್ಕೆ ಹೋಗುವಾಗ ಶೂದ್ರಳಾದ ಸೀತುವನ್ನು ಮುಟ್ಟಿದ ಪುಟ್ಟುವಿಗೆ ಜಯ ಮನೆಯಲ್ಲಿ ಹೇಳುತ್ತೇನೆ ಎಂದಾಗ, "ಚಣ್ಣಮ್ಮ, ಬೇರೆ ಕೆಲಸ ಇಲ್ಲವ ಎಲ್ಲ ಬಿಟ್ಟು ಜಗಳ ಮಾಡಲಿಕ್ಕೆ? ನನ್ನನ್ನು ಮುಟ್ಟಿದರೇನಾಯಿತು? ನಾನೇನು ಮನುಷ್ಯಳಲ್ಲವ? ನೀವು ಮುಟ್ಟಿದರೂ ಮುಟ್ಟದಿದ್ದರೂ ಪಾರ್ತಮ್ಮ ಸೆಗಣಿ ನೀರನ್ನು ನಿಮ್ಮ ತಲೆಯ ಮೇಲೆ ಸುರಿದೇ ಸುದ್ಧ."[೭] ಎಂದು ಸಮಾನತೆಯನ್ನು ಸಾರುವ ಸೀತುವೇ, ತನಗಿಂತ ಕೀಳುಜಾತಿ ಎನಿಸಿದವಳೊಬ್ಬಳ ಸೆರಗು ತಾಕಿ ಮೈಲಿಗೆಯಾಯಿತು ಎಂದು ಬಗೆದು ಮಿಂದು ಶುದ್ಧವಾಗುವುದು, ಪುಟ್ಟುವಿನ ಮೂಲಕ ಜಾತಿಯ ಮೂಲವನ್ನೇ ಕೆದಕುತ್ತದೆ. ಪುಟ್ಟನನ್ನು ಮುಟ್ಟಿದ್ದಕ್ಕ ಎಂಬ ಮಾತಿಗೆ ಉತ್ತರವಾಗಿ ಅವಳು "ಪುಟ್ಟಯ್ಯನನ್ನು ಮುಟ್ಟಿದರೆ ನೀರು ಯಾಕೆ ಸುರಿದುಕೊಳ್ಳಬೇಕು ಚಣ್ಣಮ್ಮ? ಅದು ಶುದ್ದ ಆದ ಹಾಗೆ ಆಯಿತು. ಆದರೆ ನನ್ನ ಕತೆ ಕೇಳುತ್ತೀರ? ಆ ಹಾದಿ ದಾಟಿ ಬರುವಾಗ ಕೊರರ ಕೊಪ್ಪಕ್ಕೆ ಹೋಗುತ್ತಿದ್ದ ಕೊರಗರ ಹಿಂಡು ಒಂದು ಬಂತಲ್ಲ. ನಾನೆಷ್ಟು ಬದಿಗೆ ತೇಲಿಕೊಂಡರೂ ಒಂದು ಗಾಂಚಾಲಿಯ ಸೆರಗು ನನ್ನನ್ನು ತಾಗಿಕೊಂಡೇ ಹೋಯಿತು. ವೈ ತಲೆಗೆ ಮಿಂದ ಹೊರತು ಸಮಾಧಾನವಿಲ್ಲ'.

"ಅದು ಯಾಕೆ? ಆಗ ನೀನೇ ಹೇಳಿದೆಯಲ್ಲ, "ನಾನೇನು ಮುಷ್ಯಳಲ್ಲವ," ಅಂತೇಳಿ, ಕೊರಗರೂ ನಿನ್ನ ಹಾಗೆ ಮನುಷ್ಯರಲ್ಲವ' ಎಂದು 'ಪೋರ್ಸಿ' ನಿಂದಲೇ ಕೇಳಿದ ಪುಟ್ಟ.

'ನಿಮಗೆ ಇದೆಲ್ಲ ಅರ್ಥವಾಗುವುದಿಲ್ಲ ಅಯ್ಯ. ಎಂಜಲು ತಿಂಬ, ಹೇಲು ಬಾಚುವ ಜನಕ್ಕೂ, ನಮ್ಮ ಜಾತಿಗೂ ಎಂದಾದರೂ ಸಮವ?' – ಎನ್ನುತ್ತ ಸೀತು ಬಿಸಬಿಸನೆ ಹೊರಟು ಹೋದಳು."[೮]

ಮನುಷ್ಯನಾದವನು ತನಗಿಂತ ಕೆಳಗೆ ಯಾರದರೂ ಇರಲೇ ಬೇಕು ಎಂದು ಬಯಸುವ, ತಾನು ಮೇಲು ಎಂದು ಹೆಮ್ಮೆ ಪಡುವ, ಅವನ ಮೂಲಪ್ರವೃತ್ತಿಯನ್ನು ಶೋಧಿಸುತ್ತದೆ. ಜಾತಿಗೆ ಕಾರಣವಾಗಿರುವ ಪ್ರವೃತ್ತಿಯೊಂದು ತೆರೆದುಕೊಳ್ಳುತ್ತದೆ.

ಜಾತಿವ್ಯವಸ್ಥೆಯಲ್ಲಿ ಮನುಷ್ಯ ತನಗಿಂತ ಮೇಲು ಜಾತಿಗೆ ಅಥವಾ ಮೇಲು ಸ್ಥಿತಿಗೆ ಸೇರಬಯಸುತ್ತಾನೆಯೇ ಹೊರತು ಕೆಳಸ್ಥಿತಿಗಲ್ಲ. ಪುಟ್ಟ ತನ್ನನ್ನು ಸೀತೆಯ ಮಗನೆಂದಾಗ ಅಳುವುದು ಆ ಪ್ರವೃತ್ತಿಯ ಬಾಲಿಶ ವರ್ತನೆಯಾಗಿದೆ. ಮನೆಯ ಕೆಲಸದವಳಾದ ಚಂದು ನರಪಟೆಯನ್ನು ಕಂಡು "ಅಂಗಳ ಗುಡಿಸುತ್ತ ಇದ್ದ ಚಂದು 'ಅಗಣಿ ಅಮ್ಮ, ಈ ನರಪಟೆಗೆ ಇದ್ದ ಖುಶಿ ಯಾರಿಗಿಲ್ಲ. ಸುಳ್ಳು? ಒಂದಕ್ಕೆ ಕಾಣಿ. ಏನಿಲ್ಲದವರು ಗಮ್ಮತ್ತಿನಲ್ಲಿರುತ್ತಾರೆ, ನಮ್ಮಂತವರಿಗೆ ಮೂರು ಹೊತ್ತೂ ಚಿಂತೆ".[೯] ಎಂದರೆ.

ಬ್ರಾಹ್ಮಣ ಯಜಮಾನಿಯಾದ ಗೌರಮ್ಮ ನೇರವಾಗಿ ಉತ್ತರ ಕೊಡದೆ "ನಮ್ಮಂತಹವರಿಗೆ ಅಂತ ಹೇಳಿ ತಾವೂ ಅವಳೂ ಸರಿಸಮವೆನ್ನುವಂತೆ ಮಾತಾಡಲು ಇವಳು ಯಾವ ದೊಡ್ಡ ಪುಳಕಿ?"[೧೦] ಎಂದು ಚಂದುವಿಗೆ ಕೇಳಿಸುವಂತೆಯೇ ಹೇಳುತ್ತ ಒಳಗೆ ಬರುತ್ತಾಳೆ. ಇದು ಆ ಪ್ರವೃತ್ತಿಯ ವಯಸ್ಕ ವರ್ತನೆಯಾಗಿದೆ.

ವಿದ್ಯಾವಂತ ಕೂಸನೊಬ್ಬ ಕುಡಿದ ಲೋಟವನ್ನು ತೊಳೆಯಲು ನಿರಾಕರಿಸುವ ರುಕ್ಕು. ಪಾರ್ತಕ್ಕನನ್ನು ಗೇಲಿ ಮಾಡುತ್ತಾಳೆ. ಕೊರಗರ ಗುಂಪು ಮನೆ ಮುಂದೆ ಬರಲು ನಿಮ್ಮ ಬಳಗ ಬಂತು ಎಂದು ಹಂಗಿಸುತ್ತಾಳೆ. ಆ ಮೂಲಕ ಪಾರ್ತಕ್ಕನನ್ನು ಎದುರಿಸುವ ಮಾರ್ಗ ಕಂಡುಕೊಳ್ಳುತ್ತಾಳೆ. ಬ್ರಾಹ್ಮಣರಿಗೆ ತಾನು ಸಮ ಅಥವಾ ನನಗಿಂತ ಅವಳು ಕೆಳಗೆ ಎನ್ನುವ ಮೂಲಕ ಸಮಾನತೆ ಸಾಧಿಸಲು ಪ್ರಯತ್ನಿಸುತ್ತಾಳೆ. ಹೊರತು ಜಾತಿ ಮೀರಿಯಲ್ಲ. ಜಾತಿ ಸಾಮೂಹಿಕವಾಗಿ ಜನರ ಮನಸ್ಸನಲ್ಲಿ ಅಳಿಸಲಾಗದ ವಿಷಯವಾಗಿ ಆವರಿಸಿಕೊಡಿದೆ. ನಮಗಿಂತ ಊಂಚುಜಾತಿಯವರು ಯಾರೇ ಇರಲಿ, ನಮ್ಮ ಮನೆ ಬಾಗಿಲಿಗೆ ಬಂದರೆ ನಮಗೆ ಪಾಪ ಎಂಬ ಮಂಜನಂತಹವರು ಜಾತಿ ಮೀರಲು ಪ್ರಯತ್ನಿಸಲಾರರು.

ಇಲ್ಲಿಯ ಹೆಂಗಸರು ಜಾತಿಯ ಹಿಡಿತದಲ್ಲಿ ನರಳುತ್ತಿದ್ದರೆ. ಯುವಪೀಳಿಗೆ ಜಾತಿಯ ಹಿಡಿತವನ್ನು ಸಡಿಲಗೊಳಿಸುವ ಪ್ರಯತ್ನದಲ್ಲಿ ತೊಡಗಿದೆ. ಕೊರಗರ ಪರವಾಗಿ ಹೋರಾಟ ಮಾಡುತ್ತಾ, ಕೊರಗರ ಹೆಣ್ಣನ್ನು ಮದುವೆಯಾಗಿ, ಭಾಸ್ಕರ ಜಾತಿಯ ಮೂಲವನ್ನೇ ಪಲ್ಲಟಗೊಳಿಸಲು ಪ್ರಯತ್ನಿಸುತ್ತಿದ್ದಾನೆ. ಅವನಿಗೆ ಬೆಂಬಲವಾಗಿ ಮಾವ ವಾಸುದೇವರಾಯರು, ಅವರ ಮಗ ಶೀನ, ಶಿವು, ಸರೋಜ ನಿಂತಿದ್ದಾರೆ. ಇನ್ನು ಮಕ್ಕಳಾದ ಶಿವು ಪುಟ್ಟ ಜಯ ಶಾಮಿ ಇವರು ಜಾತಿಯನ್ನು ನೋಡುವ ಪರಿಯೇ ಬೇರೆಯಾಗಿದೆ.

"ಜಯ ಕೇಳಿದಳು – 'ಏಯ್ ಶಿವಣ್ಣ, ನಾವು ಯಾಕನ ಅವರನ್ನೆಲ್ಲ ಮುಟ್ಟಬಾರದು?'

'ಮುಟ್ಟಿದರೆ ಯಂತ ಮಣ್ಣೂ ಆಗುವುದಿಲ್ಲ, ಅದೆಲ್ಲ ಸುಮ್ಮನೆ' – ಎಂದ ಶಿವ, ತಾನು ಮತ್ತು ದುಗ್ಗು ಮಕ್ಕಳು ನಾಟಕ ಮಾಡುವಾಗ ಎಷ್ಟು ಸಲ ಮುಟ್ಟಿಕೊಂಡಿದ್ದೆವೋ! ಏನಾಯಿತು! ಅವರು ಜಂಭ ಮಾಡಿದರೆ ತನ್ನದೂ ಜಂಭ! ಅಷ್ಟೇ.

ಆದರೆ ಶಾಮಿಗೆ ಶಿವನ ಉತ್ತರ ಸರಿಯಲ್ಲವೇ ಅಲ್ಲ ಅಂತನಿಸಿ,

'ಅಷ್ಟು ಗೊತ್ತಿಲ್ಲವ? ಅವು ಬರೀ ಮೀನು ಜಂಬಿನವು, ಮೂರು ದಿನಕ್ಕೊಂದು ಸಲವೂ ಮೀಯುವುದಿಲ್ಲ' – ಎಂದಳು. . . . . .

. . . 'ಸೀತುವಿನ ಜಾತಿಯವರೆಲ್ಲ ಹೆಬ್ಬೆರಳಿನಿಂದ ಹುಟ್ಟಿದರೋ ಏನೋ, ಕೊರಗ ಕೂಸಾಳುಗಳೆಲ್ಲ ಕಿರುಗೆರಳಿನಿಂದ, ಇಲ್ಲವಾದರೆ ಸೀತು ಯಾಕೆ ಕೊರಗರನ್ನು ಮುಟ್ಟಿದೆನಂತ ಮೀಯಬೇಕು?"

ಯೋಚಿಸಿದರು, ಬಗೆ ಹರಿಯಲಿಲ್ಲ. ಯೋಚಿಸಿದಷ್ಟೂ ಕಗ್ಗಂಟಾಯಿತು. ನಿದ್ದೆ ಬಂದದ್ದೇ ತಿಳಿಯಲಿಲ್ಲ."[11]

ಹಿರಿಯರಿಗೆ ವಿರುದ್ಧವಾಗಿ ಕಿರಿಯರಲ್ಲಿ ಮೊಳೆಯುತ್ತಿರುವ ಹೊಸ ಆಲೋಚನೆಯನ್ನು ಕಾಣಬಹುದು. ಮಡಿಯೆಂದರೆ ಸ್ವಚ್ಛತೆ ಎಂಬ ಅರ್ಥ ನೀಡುತ್ತಿರುವ ಕಿರಿಯರಿಗೆ, ಹಿರಿಯರ ನಡವಳಿಕೆಗಳು ಗೊಂದಲ ಉಂಟು ಮಾಡುತ್ತವೆ. ಜಾತಿಯ ಬಗೆಗಿನ ಕಲ್ಪನೆಗಳು, ಕತೆಗಳು ಅವರಿಗೆ ಅರ್ಥವೇ ಆಗುವುದಿಲ್ಲ. ಅವರಿಗೆ ಅರ್ಥವಾಗದ ವಿಚಾರಗಳನ್ನು ಅವರು ಅವರ ಜೀವನದಿಂದ ಅಳಿಸಿ ಹಾಕುವ ನಿರೀಕ್ಷೆ ಕಾಣುತ್ತದೆ. ಸಮಾಜ ಪರಿವರ್ತನೆಯ ಭರವಸೆಗಳಾಗಿದ್ದಾರೆ ಈ ಕಿರಿಯರು.

ಇನ್ನೊಂದು ಬಗೆಯ ಅಸ್ಪೃಶ್ಯತೆಗೆ ಶಾಮಿ ತೆರೆದುಕೊಳ್ಳುತ್ತಾಳೆ. ಸಾಮಾಜಿಕ ಅಸ್ಪೃಶ್ಯತೆ ಮತ್ತು ಜೈವಿಕ ಅಸ್ಪೃಶ್ಯತೆಯನ್ನು ದೂರದಿಂದ ಕಂಡಿದ್ದ ಅವಳು ಸ್ವತಃ ಆ ಅಸ್ಪೃಶ್ಯತೆಯ ಯಾತನೆಗೆ ಗುರಿಯಾಗುತ್ತಾಳೆ. ಅವಳು ಪ್ರಾಕೃತಿಕವಾದ ಪ್ರಬುದ್ಧತೆಯನ್ನು ಪಡೆಯುವ ಮೂಲಕ ಜೈವಿಕ ಅಸ್ಪೃಶ್ಯತೆಯನ್ನು ಅನುಭವಿಸುತ್ತಾಳೆ. ಅದು ಅವಳಲ್ಲಿ ಬೌದ್ಧಿಕ ಪ್ರಬುದ್ಧತೆಗೂ ಕಾರಣವಾಗುತ್ತದೆ. ಆ ಸಂದರ್ಭದಲ್ಲಿ ಆ ಮನೆಯ ಹೆಂಗಸರ ಮಾತುಗಳು, ನಡವಳಿಕೆಗಳು ಅವಳಲ್ಲಿ ದಿಗ್ಭ್ರಮೆ ಉಂಟುಮಾಡುತ್ತವೆ. ಇವರೆಲ್ಲರ ನಡುವೆ ಹೊಸ ಅಲೋಚನೆಯುಳ್ಳ ಸರೋಜಳ ಮಾತುಗಳು ಶಾಮಿಯ ಗಮನ ಸೆಳೆಯುತ್ತವೆ. ಶಾಮಿಯು ಆ ದಾರಿಯಲ್ಲೇ ನಡೆವ ಹೊಸಹೆಣ್ಣಾಗಿ ಬೆಳೆಯುತ್ತಾಳೆ. ಕಾಲ ಬದಲಾವಣೆಯ ಭರವಸೆ ಮೂಡಿಸುತ್ತಾಳೆ

"ಗೌರಮ್ಮ ಆತಂಕದಿಂದಲೇ ಹೊರಬಂದರು. ಶಾಮಿಯನ್ನು ಕಂಡು 'ಓಹೋ!..... ಇನ್ನೊಂದು ಮುಳ್ಳು!' ಎಂದು ಗಕ್ಕನೆ ನಿಂತು ಬಿಟ್ಟರು.

'ನೀ ಇನ್ನೂ ಹಾಗೆಲ್ಲ ಹೇಳುವುದನ್ನು ಬಿಡುವುದಿಲ್ಲವಲ್ಲ.' ಎಂದು ಸರೋಜ ಗೌರಮ್ಮ ಪ್ರತಿಕ್ರಿಯೆಗೆ ಬೇಸರಿಸಿದಳು.

....

'ಅಮ್ಮ, ನೀನು ಅಕ್ಕಂಗೆ ಮತ್ತು ನಂಗೆ ಮಾಡಿದ್ದು ನೆನಪಿದೆ. ಊಟವೂ ಆ ಕತ್ತಲೆ ಕೋಣೆಯೊಳಗೇ. ಕೈ ತೊಳೆಯುವುದೂ ಅಲ್ಲಿಯೇ. ಮೂರು ದಿನವಡೀ ಸ್ನಾನ ಸಹ ಇಲ್ಲದೆ, ತಲೆ

ಬಾಚದೆ ...ಶಿ....ಶಿ... ಅಕ್ಕ ಕೇಳಿದಷ್ಟು ನಾನು ಕೇಳಲಿಲ್ಲ ನಿನ್ನ ಮಡಿಯನ್ನೆಲ್ಲ ಅಡಿಮೇಲು ಮಾಡಿದೆ. ನಾನು ಒಪ್ಪಿದಷ್ಟು ಶಾಮಿ ಒಪ್ಪಲಿಕ್ಕಿಲ್ಲ...'

'ಹೆಣೆ, ನಿಂಗೇನು ಗೊತ್ತುಂಟು? ಮುಟ್ಟಾದವರ ನೆರಳು ಬಿದ್ದರೂ ಮುಂಚೆಲ್ಲ ತಲೆ ಮೀಯಬೇಕಿತ್ತು, ಅಷ್ಟೆಲ್ಲ ಮಡಿ ನಾವು ಮಾಡುವುದಿಲ್ಲ. ಇಷ್ಟೂ ಮಾಡದಿದ್ದರೆ?'

'ಅದೆಲ್ಲ ಬೇಡ, ಶಾಮಿ ಬೇಕಾದರೆ ದೂರವಿರಲಿ ವಿಶ್ರಾಂತಿಗೋಸ್ಕರ, ಆದರೆ ಕೇವಲ ಮಡಿ ಮೈಲಿಗೆಯೆಂದಲ್ಲ ಅವಳಿಗೆ ರಗಳೆ ಮಾಡುವುದು ನನಗೆ ಸರಿ ಕಾಣುವುದಿಲ್ಲ.'

'ಅದೆಲ್ಲ ಮರ್ಯಾದೆಯಲ್ಲ, ನಾನು ಮೈನೆರೆದಾಗ ಗಂಡನ ಮನೆಯಿಂದ ದೊಡ್ಡ ದಿಬ್ಬಣ ಬಂದಿತ್ತು, ಹಾಲು ತುಪ್ಪ ತಂದು, ಚಟ್ಟು ಹೊಯಿಸಿ ... ಅದೆಲ್ಲ ಒಂದು ಕ್ರಮ'.

'ತಿಂಡಿ ಮಾಡಿ, ಯಾರು ಬೇಡವೆಂದವರು? ಆರತಿ ಗೀರತಿ ಅಂತ ನಾಲ್ಕು ಜನರನ್ನು ಕರೆದು ಗುಲ್ಲು ಮಾಡುವುದು ಬೇಡ.

ಶಾಮಿಗೆ ಶಿಕ್ಷಣವೂ ನಡೆದಿದೆ. ಅವಳ ಅಳು ಇನ್ನೂ ನಿಂತಿಲ್ಲ. ಗೌರಮ್ಮನಿಗೆ ತುಂಬ ಬೇಸರವಾಗಿದೆ. ಇಷ್ಟರವರೆಗೆ ಬದುಕು, ಒಂದು ಬದುಕು, ಇನ್ನೆಂಥದು? ಆಚೆ ಹೋಗಬೇಡ, ಈಚೆ ಹೋಗಬೇಡ, ಕತ್ತಲೆ ಮಾಡಿ ಮನೆಗೆ ಬರಬೇಡ, ಮದುವೆಯಾಗು, ಹೆರು, ಹೆತ್ತ ಮಕ್ಕಳ ಚಾಕರಿ ಮಾಡು, ಎಲ್ಲ ಮುಗಿಯುವ ಹೊತ್ತಿಗೆ ಪ್ರಾಯವೂ ಮುಗಿದು ತಾವೇ ಚಾಕರಿ ಮಾಡಿಸಿಕೊಳ್ಳುವ ಸ್ಥಿತಿ. ಇಷ್ಟೇ ಅಲ್ಲವ ಹೆಣ್ಣು ಅಂದರೆ?

ಆದರೆ ಸರೋಜ ಈ ಮಾತಿಗೆ ಹೌದೆನ್ನುವವಳಲ್ಲ, 'ಅವೆಲ್ಲ ನಾವು ನಾವು ಎಣಿಸಿಕೊಂಡ ಹಾಗುಂಟು.'

ಪಾರ್ತಕ್ಕ 'ಹೆಣೆ, ಹೆಚ್ಚು ಹಾರಬೇಡ, ಹೆಂಗಸು ಎಷ್ಟಾದರೂ ಹೆಂಗಸೇ ಕಾಂಬ, ನಿನ್ನನ್ನು ಒಬ್ಬ ದಾರಿ ಮೇಲೆ ಒತ್ತಿ ಹಿಡಿದೇ ಬಿಟ್ಟ ಅಂತೇಳಿ ತಿಳಕೋ, ಏನು ಮಾಡುತ್ತಿ? ಜನ ಅವನನ್ನು ಹೊಡೆಯಬಹುದು, ಇಲ್ಲ ಕೊಂದೇ ಹಾಕಬಹುದು; ಆದರೆ ನಿನ್ನ ಮರ್ಯಾದೆ ಹೋದದ್ದು ಹೋಯಿತ? ಮತ್ತೆ ಏನು ಕೊಟ್ಟರೂ ವಾಪಾಸು ಬರಲಿಕ್ಕಿಲ್ಲ.'

'ಹ್ಞಂ ಹ್ಞಂ, ಒತ್ತಿ ಹಿಡಿಯುವುದು ಅಷ್ಟ ಸುಲಭದಲ್ಲಿಲ್ಲ. ಅಲ್ಲದೆ, ಮರ್ಯಾದೆ ಎಂಬುದು ನಾವು ನಾವು ಅರ್ಥ ಮಾಡಿಕೊಂಡ ಹಾಗಿದೆ. ನನ್ನ ಮರ್ಯಾದೆ ಅವ ಕಸಿಯಲು ಹೊರಟರೆ ಅವನ

ಮರ್ಯಾದೆ ಹೋದೀತೇ ವಿನಾ ನನ್ನದಲ್ಲ. ನನಗೆ ಅನ್ಯಾಯವಾಯಿತೆಂದು ನಾನು ದಂಡ ಕೇಳುತ್ತೇವೆ, ಕೋರ್ಟಿಗೆ ಹಾಕುತ್ತೇನೆ, ಬರಲಿ ನೋಡುವ ಅವ!'

'ಅಡ್ಡಿಲ್ಲ, ಬಾಯಿಂಪುದ್ದ ಕೊಚ್ಚಿ ಇಳಿಸುವುದರಲ್ಲಿ ಸರೋಜನಿಗೆ ಓಟು ಕೊಡಬೇಕು' ಶಾಮಿ ಪಿಳಿ ಪಿಳಿ ಸರೋಜನನ್ನೇ ನೋಡುತ್ತ ಕುಳಿತಿದ್ದಳು.

'ಹೆಣೆ ಶಾಮಿ, ಇನ್ನು ನಿನ್ನ ಹುಡುಗಾಟಿಕೆಯನ್ನು ಸ್ವಲ್ಪ ಕಡಿಮೆ ಮಾಡು ಗೊತ್ತಾಯಿತ? ಆಚೀಚೆ ಹೋಗುವಾಗ ಲಂಗ ಮುದುರಿಕೊಂಡು ಹೋಗು..... ಮೂರು ದಿವಸ ಮುಟ್ಟಾದವರೆಂದರೆ ಯಂತಂತ ಮಾಡಿದೆ? ಮೊದಲ ದಿನ ಕೂಸಾಳುಗಳು, ಎರಡನೆಯ ದಿವಸ ಚಂಡಾಲರು – ಮೂರನೆಯ ದಿವಸ ಬ್ರಹ್ಮರಾಕ್ಷಸಿಯರು......

ಶಾಮಿ ಗಟ್ಟಿಯಾಗಿ ಅಳಲು ಸುರುಮಾಡಿದಳು."[೧೨]

ಪಾರ್ತಕ್ಕ ಮತ್ತು ಗೌರಮ್ಮ ಮೊದಲೇ ಆತಂಕದಲ್ಲಿರುವ ಶಾಮಿಯನ್ನು ಪ್ರೀತಿಯಿಂದ ಆಧರಿಸಿ, ಅರಿವುಗೊಳಿಸುವ ಬದಲಿಗೆ, ಅವಳಲ್ಲಿ ಇನ್ನಷ್ಟು ಆತಂಕಗಳನ್ನು ಮೂಡಿಸುತ್ತಿದ್ದಾರೆ. ಹೆಣ್ಣಾಗಿ ಹುಟ್ಟಿದ್ದೇ ಮಹಾಪರಾಧ ಎನ್ನುವ ಹಾಗೆ ಮಾತನಾಡುತ್ತಿರುವ ಅವರು, ಶಾಮಿ ತನ್ನ ಬಗ್ಗೆ ತಾನೇ ಅಸಹನೆಯೊಂದುವ ಹಾಗೆ ಮಾಡುತ್ತಿದ್ದಾರೆ. ಅವಳಿಗೆ ಶಿಕ್ಷಣದ ಜೊತೆಗೆ ಭಯ ಮತ್ತು ಕಟ್ಟುನಿಟ್ಟಿನ ನಿಯಮಗಳನ್ನು ಹೇರುತ್ತಿದ್ದಾರೆ. ಇವರ ನಡುವೆ ಸರೋಜ ಶಾಮಿಗೆ ಧೈರ್ಯ ನೀಡುತ್ತಾ ಸರಿ–ತಪ್ಪುಗಳ ಅರಿವು ಮೂಡಿಸುತ್ತಾಳೆ. ಅವಳಿಗೆ ಮಡಿ–ಮೈಲಿಗೆಗಿಂತ ಈ ಸಮಯದಲ್ಲಿ ಶಾಮಿಗೆ ವಿಶ್ರಾಂತಿಯ ಅಗತ್ಯವಿದೆ ಎಂದು ಕಾಣುತ್ತದೆ.

ಅವಲಂಬಿತರು ಕತೆಯ ಶಾರದೆ, ಮಗವನ್ನು ನೋಡಲು ಇನ್ನೂ ಮೈನೆರೆಯದ ಹುಡುಗಿಯನ್ನು ಕೆಲಸಕ್ಕೆ ಕರೆತರುತ್ತಾಳೆ. ಮೈನೆರೆದ ನಂತರ ಅವಳನ್ನು ಮನೆಯಿಂದ ಕಳುಹಿಸಿಬಿಡುತ್ತಾಳೆ. 'ಮೈ ನೆರೆದ ಮೇಲೆ ಇಟ್ಟುಕೊಳ್ಳುವುದಿಲ್ಲವಪ್ಪ. ನಂಗೆ ಒಂಥರ ಭಯ, ಯಾರನ್ನೆಂತ ಕಾಯುವುದು? ಯಾರನ್ನು ನಂಬುವಂತಿಲ್ಲ ಅಲ್ಲವ?"[೧೩] ಎನ್ನುತ್ತಾಳೆ.

ಹೀಗೆ ಕರೆತರುವ ಕೆಲಸದವಳು ಅಹಲ್ಯ ಮೈನೆರೆದಾಗ

'ಅದು ಮುಟ್ಟಂತಲ್ಲ ಮಾರಾಯ್ತಿ' ಎಂದಳು. 'ಹೂಂ', 'ಇನ್ನು ನಂಗೆ ಬೇಡವಪ್ಪ, ಮಿಂದು ಒಳಗೆ ಬಂದದ್ದೇ ಕಳಿಸಿಬಿಡುತ್ತೇನೆ.'

'ಯಾಕೆ ಅಷ್ಟು ಹೆದರಿಕೆ?

'ಹೆದರಿಕೆಯೆ? ಸೆರಗಲ್ಲಿ ಬೆಂಕಿ ಕಟ್ಟಿಕೊಂಡ ಹಾಗಲ್ಲವ ಇನ್ನು?"[೧೪] ಎಂದು ಹೇಳುತ್ತಾಳೆ.

ಹೀಗೆ ಹುಡುಗಿ ಹೆಣ್ಣಾಗುವ ಘಟನೆಯನ್ನು ಸಂಭ್ರಮಕ್ಕಿಂತಲೂ ಭಯ-ಆತಂಕಗಳಿಗೆ ಗುರಿಯಾಗಿರುವುದನ್ನು ಇಲ್ಲಿ ಕಾಣಬಹುದು.

ಈ ವಿಚಾರಗಳ ಅರಿವಿರದ ಎಳೆಯರು ಅದರ ಬಗ್ಗೆ ಕುತೂಹಲದಿಂದ ಪ್ರಶ್ನಿಸಿದರೆ. ಅವರಿಗೆ ತಿಳುವಳಿಕೆ ನೀಡುವುದರ ಬದಲು ಅಜ್ಞಾನವನ್ನು, ಮಢನಂಬಿಕೆಯನ್ನು ಬೆಳೆಸುವ ಕಟ್ಟು ಕತೆಯನ್ನು ಹೇಳುತ್ತಾರೆ, ಹಿರಿಯರಾದ ಪಾರ್ತಕ್ಕ. "ಯಾರಿಗೂ ಹೇಳಬೇಡ, ಬಿಳಿ ಕಾಗೆ ಬಂದು ಮುಟ್ಟಿದರೆ ಮುಟ್ಟಾಗುತ್ತಾರೆ, ಅಂಥವರನ್ನು ಮುಟ್ಟಿದವರು ಕರಿಕಾಗೆಯಾಗಿ ಹಾರಿ ಹೋಗುತ್ತಾರೆ."

'ಹಾಗಾದರೆ ನಮ್ಮ ಮನೆಗೆ ಬರುತ್ತಾವಲ್ಲ ಕಾಗೆಗಳು ಅವೆಲ್ಲ ಹಾಗೆಯೇ ಆದದ್ದು?'

'ಮತ್ತೆ ಇಲ್ಲವಾದರೆ ಕರಿಕಾಗೆಗಳು ಎಲ್ಲಿರುತ್ತಿದ್ದವು? ನೀವು ಮುಟ್ಟಲು ಹೋಗಬೇಡ ತಿಳಿಯಿತ?'

'ಹುಂ' – ಪುಟ್ಟ ಹೊದಿಕೆಯಳಗೇ ಹೆದರಿ ಹೂಂಗುಟ್ಟಿದ.

ಆಚೆ ಮಗ್ಗುಲಲ್ಲಿ ಮಲಗಿ ಆಲಿಸುತ್ತಿದ್ದ ಜಯ ಕೇಳಿದಳು 'ಹಾಗಾದರೆ ಬಿಳಿಕಾಗೆ ಹೆಂಗಸರನ್ನು ಮಾತ್ರ ಯಾಕೆ ಮುಟ್ಟುತ್ತದೆ? ಗಂಡಸರು ಮುಟ್ಟಾಗುವುದೇ ಇಲ್ಲವಲ್ಲ!'

'ಹೆಣ್ಣು ಮಕ್ಕಳಿಗೆಲ್ಲ ಏನು ಆಧಿಕ! ಗಂಡಸರೆಂದರೇನು! ಕಾಗೆ ಮುಟ್ಟುವುದೆಂದರೇನು! ಮಲಕೋ ಸುಮ್ಮನೆ."[೧೫]

ಈ ರೀತಿಯ ಅಸ್ಪೃಶ್ಯತೆಯ ಆಚರಣೆಯನ್ನು ಅನೇಕ ಕಟ್ಟುಕತೆಗಳ ಮೂಲಕ ಭಯದ ನೆರಳಲ್ಲಿ ಮುಂದುವರೆಸುವ ಪಾರ್ತಕ್ಕನ ಬಳಿ ಜಯಳ ಪ್ರಶ್ನೆಗೆ ಉತ್ತರವಿಲ್ಲ. ಆದರೂ ಅರ್ಥವಿಲ್ಲದ ಆಚರಣೆಗಳನ್ನು ಬಿಡಲು ಅವಳು ಸಿದ್ಧಳಿಲ್ಲ. ಯಾರಿಗೂ ತಿಳಿಯಬಾರದು ಎಂದು ಗುಟ್ಟಾಗಿ ಅಡಗಿಸಿಡುವ ಇಂತಹ ಈ ವಿಚಾರವನ್ನು 'ಮುಟ್ಟಬಾರದು' ಎಂಬ ಮೂಲಕ ಎಲ್ಲರಿಗೂ ಗೊತ್ತಾಗುವಂತೆ ಮಾಡುತ್ತಾರೆ.

ನಂತರದಲ್ಲಿ ಹೊರಗಿನ ರೂಕ್ಷತೆಯ ಮುಂದೆ ಮೌನವಾಗುವ ಶಾಮಿ, ಹಿರಿಯರಿಗೆ ಹೆಣ್ಣಿಗೆ ಇರಬೇಕಾದ ಗಂಭೀರತೆಯಾಗಿ ಕಾಣುತ್ತಾಳೆ. ಅವಳ ಉಸಿರುಗಟ್ಟಿದ ಸ್ಥಿತಿ ಅರ್ಥವಾಗುವುದು ಸರೋಜಳಿಗೆ ಮಾತ್ರ. ಸರೋಜಳೆ ಶಾಮಿ ಒಳಗೆ ಬೆಂದು ಹೋಗದ ಹಾಗೆ , ಅವಳ ಜೊತೆ ಮಾತನಾಡಿ, ಅವಳು ಲಘುವಾಗಿ ಉಸಿರಾಡಲು ಅನುವು ಮಾಡಿಕೊಡುವಳು, ಅವಳು ಅವಳಾಗಿ ಅರಳಲು ಬೆಂಬಲವಾಗುವಳು. ಕುಮುದಿನಿಯನ್ನು ಮನೆಗೆ ಕರೆತರುವ ಸಲಹೆ ನೀಡುವ ಸರೋಜ ಎಲ್ಲಾ

ರೀತಿಯ ಅಸ್ಪೃಶ್ಯತೆಯನ್ನು, ಮೇಲು ಕೀಳುಗಳನ್ನು ಮೀರಲು ಪ್ರಯತ್ನಿಸು ಹೊಸ ಹೆಣ್ಣಾಗಿ ಕಾಣುತ್ತಾಳೆ. ಜೀವಪರವಾಗಿ ಬದಲಾಗುವ ಸಮಾಜದ ಭರವಸೆ ಮೂಡಿಸುತ್ತಾಳೆ.

ಎಲ್ಲಾ ರೀತಿಯ ಅಸ್ಪೃಶ್ಯತೆಯನ್ನು, ಮೇಲು ಕೀಳುಗಳನ್ನು ಮೀರಲು ಪ್ರಯತ್ನಿಸುವ ಹೊಸ ಹೆಣ್ಣಾಗಿ ಸರೋಜ ಕಾಣುತ್ತಾಳೆ. ಸಾಮಾಜಿಕ ತಾರತಮ್ಯದ ಜೊತೆಗೆ ಲಿಂಗ ತಾರತಮ್ಯವನ್ನು ಮೀರಿದ ಸಮಾನತೆಯನ್ನು ಬಯಸುತ್ತಾಳೆ. "ಹಾಗೆಂದು ಮದುವೆಯಾಗಬಾರದೆಂತ ಅವಳಿಗೆ ಎಂದಿಗೂ ಅನಿಸಲಿಲ್ಲ. ಅವಳಿಗಿರುವುದು ಚಿರಿಪಿರಿ ಇಲ್ಲದ ಬದುಕು, ಚಂದದ ಬದುಕು ತನ್ನದಾಗಬೇಕೆಂಬ ಆಸೆ. ತನ್ನ ಪ್ರಾಯದ್ದಲ್ಲಿ ರತ್ನಕ್ಕನಿಗೆ ರವಿ ಹುಟ್ಟಿಯಾಗಿತ್ತು. ತನಗಿನ್ನೂ ಮದುವೆಯೂ ಇಲ್ಲ, ಅಡುಗೆ ಮನೆಯಲ್ಲಿ ತನ್ನ ದಿನಗಳೆಲ್ಲ ಮಟ್ಟಮಾಯಕವಾಗುತ್ತಿವೆ. ಒಮ್ಮೊಮ್ಮೆ ಆಕೆ ತಾನು ಮದುವೆಯಾಗುವವ ಹೇಗಿರಬೇಕೆಂತ ಎಣಿಸುತ್ತ ಕುಳಿತುಕೊಳ್ಳುವದೂ ಉಂಟು. ತಾನೆಣಿಸಿದವ ಸಿಕ್ಕಿದರೆ ಅವ ಯಾವ ಜಾತಿಯವನೇ ಆಗಿರಲಿ, ತಾನು ಆಗುವವಳೇ. 'ಅಂತಹವ ಸಿಗದೆ ಇದ್ದರೆ ಕೇವಲ ನಿಮ್ಮ ಭಾರ ಹರಿಸುವುದಕ್ಕೋಸ್ಕರ ಮದುವೆ ಆಗುವವಳಲ್ಲ' ಅಂತೆಲ್ಲ ತಾಯಿ ತಂದೆಯರೊಂದಿಗೆ ಹೇಳಿಬಿಡಬೇಕೆಂತ ಅನಿಸುತ್ತದೆ. ಅವ ಲಕ್ಷಣವಾಗಿರಬೇಕು, ಅವನಿಗೆ ಬುದ್ಧಿಶಕ್ತಿ ಇರಬೇಕು. ಹೃದಯವೂ, ದೇವರು – ದಿಂಡರು ಇತ್ಯಾದಿಗಳನ್ನು ಹಿಡಿಯಲೂ ಆಗದ ಬಿಡಲೂ ಆಗದ ತನ್ನನ್ನು ಅದೆಲ್ಲದರಿಂದ ದೂರ ಕರೆದುಕೊಂಡು ಹೋಗಿ, ಒಟ್ಟು ಬದುಕೇ ಎಷ್ಟು ಚೆಂದ ಎಂದು ಬದುಕುವುದನ್ನೇ ಪ್ರೀತಿಸುತ್ತ, ಗೌರವಿಸುತ್ತ ಇರುವಾತನನ್ನು ತಾನು ಮದುವೆಯಾಗಬೇಕು. ನಡೆ–ನುಡಿ ಊಟ ನೋಟ ಹಾಸಿಗೆ ..... ಎಲ್ಲದರಲ್ಲಿಯೂ ಅವುಗಳನ್ನು ಮೀರಿ ಉತ್ತಮಿಕೆಯತ್ತ ಬೆಳೆಯುತ್ತ ಇರಬೇಕು ತಾನು ...... ಅವನೊಂದಿಗೇ .....

...... ತಂದೆಯೊಡನೆ ಏನನ್ನೂ ಹೇಳುವಂತಿಲ್ಲ. ತಾಯಿ ಮತ್ತು ಪಾರ್ವತಕ್ಕರೊಂದಿಗೆ ಮದುವೆ ಎಂಬ ಶಬ್ದವಿರಲಿ, ಮ ಎಂಬಕ್ಷರ ಕೂಡ ನುಡಿಯುವಂತಿಲ್ಲ. ಮದುವೆಯ ತೆವಲು ಹತ್ತಿದೆ ಹೆಣ್ಣಿಗೆ ಎಂದೇ ಎಣಿಸುವವರು, ತುಟಿ ತೆರೆಯದೆ ತಾನು ಬಯಲಾಗುವಂತಿಲ್ಲ, ಬರಿ ಮನಸ್ಸಿನಲ್ಲಿ ಏಳುವ ಬೀಳುವ ಆಲೋಚನೆಯಿಂದ ತನ್ನ ಬಗ್ಗೆ ಸತ್ಯದ ಚಿತ್ರ ತನಗೇ ಸಿಗುವಂತಿಲ್ಲ. ತಾನು ತುಟಿ ತೆರೆಯುವಂತೆ ಮಾಡುವವನೊಬ್ಬ ಬಂದಾನೆಯೇ? ತಾನು ಕಾಯುತ್ತಿರುವುದು ಅವನಿಗೆ ತಿಳಿದೀತೇ.....? ಯೋಚಿಸುತ್ತ ಹೋದರೆ ಭಾಸ್ಕರನ ಹೆಂಡತಿ ಎಷ್ಟು ಅದೃಷ್ಟವಂತೆ ಅಂತನಿಸುತ್ತದೆ. ಭಾಸ್ಕರ ಕಣ್ಣೆದುರು ಸುಳಿಯುತ್ತಾನೆ. ಪಾರ್ತಕ್ಕನ ಮಗ ಭಾಸ್ಕರನನ್ನು 'ಭಾಸ್ಕರಣ್ಣ' ಎನ್ನಲೇಬೇಕಾದ ಪರಿಸ್ಥಿತಿಗೆ ಸಂಕಟವಾಗುತ್ತದೆ. ಅಂಥವ ಗಂಡನಾಗಿ ದೊರೆತರೆ ವಾದ್ಯ, ಮಂತ್ರಾಕ್ಷತೆ, ಮಂಟಪ, ಧಾರೆ, ಬಂದ ಜನ, ಊಟ ಉಡುಗೊರೆ ಎಲ್ಲವನ್ನೂ ಒಂದರ್ಥದಲ್ಲಿ ಪೋಣಿಸಿದಂತೆ ಆದೀತು. ಅಂತಹ ಒಂದು ಮದುವೆ ಎಲ್ಲಾದರೂ ನಡೆದಿದೆಯೆ?

ತಾನು ಹೀಗೆಯೇ ಮನವೊಪ್ಪುವವನಿಗಾಗಿ ಕಾದು ಕಾದು ಕೊನೆಗೆ ಕೆನ್ನೆ ಗುಳಿ ಬಿದ್ದು, ಕೂದಲು ಹಣ್ಣಾಗಿ, ಚರ್ಮ ಸುಕ್ಕಾಗಿ ಬಿಟ್ಟೀತು ಎಂಬ ಭೀತಿಯಿಂದ ಯಾರನ್ನಾದರೂ ಅವಸರದಿಂದ ಒಪ್ಪಿಬಿಡಲಿಕ್ಕಿಲ್ಲವಷ್ಟೆ? ಆ ಆತ ರತ್ನಕ್ಕನ ಗಂಡನಂತೆ ಯಾವ ಭಾವನೆಗಳಿಗೂ ಸ್ಪಂದಿಸದೆ, ಸ್ಪರ್ಶಿಸದೆ ತನ್ನನ್ನು ಅಸ್ಪೃಶ್ಯಳನ್ನಾಗಿಯೇ ಇರಿಸಿ ತನ್ನ ಯಾವ ಭಾವನೆಗಳಿಗೂ ಅಸ್ಪೃಶ್ಯವಾಗಿಯೇ ಉಳಿದು ತಮ್ಮ ಮಕ್ಕಳೂ ಯಾವ ಉತ್ತಮ ಭಾವನೆಗಳಿಗೂ ಸ್ಪಂದಿಸದೆ ಅಸ್ಪೃಶ್ಯ ಮಾನವರಾಗಿಯೇ ಉಳಿಯುವಂತಹ ಸಂಸಾರ ತನ್ನದಾಗಲಿಕ್ಕಿಲವಷ್ಟೆ?"[೧೬] ಎಂದು ಯೋಚಿಸುವ ಸರೋಜ ಸಾಮಾಜಿಕ ತಾರತಮ್ಯದ ಜೊತೆಗೆ ಲಿಂಗ ತಾರತಮ್ಯವನ್ನು ಮೀರಿದ ಸಮಾನತೆಯನ್ನು ಬಯಸುತ್ತಾಳೆ. ತನ್ನ ಅಕ್ಕನ ದಾಂಪತ್ಯದ ಸೋಲನ್ನು ನೋಡಿರುವ ಆಕೆ ಭಾಸ್ಕರನಂಥ ಆದರ್ಶಪತಿಯನ್ನು ಬಯಸುತ್ತಾಳೆ.

ಆದರೆ ಅವಳಿರುವ ಪ್ರಪಂಚ ಇನ್ನು ಪುರಾತನ ಮಾದರಿಯಾದಗಿದೆ. ಆ ಪರಿಸರಕ್ಕೆ ಅವಳು ಒಂದು ಹೊರೆಯಾಗಿ ಕಾಣುತ್ತಾಳೆ. "ವರ್ಷದ ಕೆಳಗೆ ಎಂತಹ ಒಂದು ಒಳ್ಳೆಯ ನೆಂಟಸ್ತಿಕೆ ಬಂದಿತ್ತು ಸರೋಜನಿಗೆ. ಹುಡುಗನಿಗೆ ಬೇಕು ಬೇಕಾದಷ್ಟಿತ್ತು. ಎರಡು ತಲೆಮಾರು ಕೂತು ತಿನ್ನುವಷ್ಟು. ಬೇಡವೇ ಬೇಡ ಎಂದು ಬಿಟ್ಟಿತಲ್ಲ ಹುಡುಗಿ! ಅಪ್ಪಯ್ಯ ಹಳತಾಗುತ್ತಿದ್ದಾರೆ, ಇನ್ನೂ ತನ್ನ ಬೆನ್ನು ಬೆನ್ನಿಗೇ ಮತ್ತಷ್ಟು ಜವಾಬ್ದಾರಿ ಕಳೆಯಲಿಕ್ಕುಂಟು. ಪಾರ್ತಕ್ಕ ಮನೆಯಲ್ಲಿರುವುದರಿಂದ ನೆಂಟಸ್ತಿಕೆ ಮಾಡಲು ಜನ ಹಿಂದು ಮುಂದೆ ನೋಡುತ್ತಿದ್ದಾರೆ ಎಂಬುದೆಲ್ಲ ಗೊತ್ತಿದ್ದೂ! ಶಾಲೆ, ಓದು ಬರಹ ಯಾವ ಕರ್ಮಕ್ಕೆ? ಇಷ್ಟೂ ಆಚರಣೆಗೆ ತರದಿದ್ದ ಮೇಲೆ? ಯಾವುದಕ್ಕು ಇವರ ಜೋರು ಸಾಲದು, ತನ್ನ ಅಪ್ಪಯ್ಯನಾಗಿದ್ದರಾ? 'ಯಾಕೆ ಬೇಡ? ಆಗಲೇ ಬೇಕು ಅವನನ್ನೇ' ಎಂದು ಜುಟ್ಟು ಹಿಡಿದು ಮಂಟಪಕ್ಕೆ ಎಳೆದು ತಂದು ನಿಲ್ಲಿಸುತ್ತಿದ್ದರು. ಇವರೋ! ದೊಡ್ಡದಾಗಿ ಮಗಳ ಹತ್ತಿರ 'ಅವ ಆಗಬಹುದಾ?' ಎಂದು ಕೇಳಿದ್ದೇನು! ಅವಳು 'ಆಗದು' ಎಂದು ಹೇಳಿದ್ದೇನು! ಸೈ. ಅಷ್ಟಕ್ಕೇ ಅದನ್ನು ಬಿಟ್ಟಿದ್ದೇನು! ಹಾಗೆ ಕೇಳುತ್ತ ಹೋದರೆ ಹೌದಾ ನಾವು ಮದುವೆ ಮಾಡುವುದು? ಹೆಣ್ಣು ಮಕ್ಕಳು ಎಂದಾದರೂ ಒಪ್ಪಿಗೆ ಕೊಡುವುದೆಂತ ಉಂಟ? ಅವನ್ನ ಎಲ್ಲಿ ಬಿಡಬೇಕೋ ಅಲ್ಲಿಯೇ ಇಡಬೇಕು ಎಂದುಹೇಳುವುದು ಯಾಕೆ ಮತ್ತೆ?"[೧೭] ಎಂದು ಯೋಚಿಸುವ ತಾಯಿ ಮತ್ತು ರೂಕ್ಷವಾದ ಪಿತೃಮೌಲ್ಯಗಳನ್ನು ಅಂತರಂಗಿಸಿಕೊಂಡ ಪರಿಸರಕ್ಕೆ ಅವಳ ಭಾವನೆಗಳು ಅರ್ಥವಾಗುವುದಿಲ್ಲ.

ಹೇಳಿದ್ದನ್ನು ಪ್ರಶ್ನೆಗಳೇ ಇಲ್ಲದೆ ಒಪ್ಪಿಬಿಡುವ ಅವರು, ಹೆಣ್ಣು ಮಕ್ಕಳು ಮುಚ್ಚಟೆಯಾಗಿದ್ದಷ್ಟೂ ಜಾತಿ ಧರ್ಮ ದೇಶ ಮನೆ ಎಲ್ಲವೂ ಉಳಿಯುತ್ತದೆ ಎಂದು ನಂಬುವವರಾಗಿದ್ದಾರೆ. ಅದನ್ನೇ ಬಾಳಿನುದ್ದಕ್ಕೂ ಪಾಲಿಸುವ ಅವರಿಗೆ, "ಯಾಕೆ ಕೆಲಸ? ಸುಮ್ಮನೆ ಮದುವೆಯಾಗುವುದು ಬಿಟ್ಟು? ಕೆಲಸಕ್ಕೆ ಸೇರಿ ನಾಳೆ ಯಾರನ್ನಾದರೂ ಕಟ್ಟಿಕೊಂಡು ಓಡಿ ಹೋದರೆ ಏನು ಮಾಡುತ್ತೀರಿ? ಒಮ್ಮೆ ಹೋದ ಮರ್ಯಾದೆ ಮತ್ತೆ ದುಡ್ಡು ಕೊಟ್ಟರೂ ಹಿಂತಿರುಗತ್ತದ? ಇನ್ನೂ ಮುದುವೆಗೆ ಹೆಣ್ಣು ಮಕ್ಕಳಿವೆ,

ಅದರಲ್ಲಿಯೂ ನಿಮ್ಮ ಸರೋಜನಿಗೆ ಉಡಾಪು ಜಾಸ್ತಿ. ಸ್ವಲ್ಪ ಹಟಮಾರಿತನವೂ ಉಂಟು. ನಾಳೆ ಅವಳು ಏನು ಮಾಡಿದರೂ ಆಶ್ಚರ್ಯ ಪಡುವಂತಿಲ್ಲ. ಹೆಣ್ಣು ಮಕ್ಕಳು ಹಾಗಿರಬಾರದು. ಈಗಲೇ ಸ್ವಲ್ಪ ಹದ್ದು ಬಸ್ತಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು ನೀವು".[೧೮] ಎನ್ನುವ ಅಳಿಯ ಆದರ್ಶವ್ಯಕ್ತಿಯೇ ಹೊರತು ಭಾಸ್ಕರನಲ್ಲ.

ಬಾಣಂತಿ, ಮುಟ್ಟು ಮೊದಲಾದ ಸಂದರ್ಭಗಳಲ್ಲಿ ಆಚರಿಸುವ ಕೆಲವು ಅರ್ಥಹೀನ ಆಚರಣೆಗಳನ್ನು ಲೇಖಕಿಯು ಮಾರ್ಮಿಕವಾಗಿ ವಿಡಂಬಿಸಿದ್ದಾರೆ. ಮುಟ್ಟು, ಬಾಣಂತನ, ಮಡಿ-ಮೈಲಿಗೆಯ ಇಕ್ಕಟ್ಟುಗಳು ಅವರನ್ನು ಅವರು ಹೆಣ್ಣಾದ್ದರಿಂದಲೇ ಬಾಧಿಸುವ ಕ್ರಮ. ಇನ್ನೊಂದು ಸಂಕೀರ್ಣ ವಿಪರ್ಯಾಸವನ್ನು ಕಾದಂಬರಿ ದಾಖಲಿಸುತ್ತದೆ.

ಕುಂದಾಪುರ ಪ್ರಾಂತ್ಯದ ಕಾಲ್ಪನಿಕ ಕಿರು ಕುಟುಂಬವೊಂದರ ಈ ಕಥೆಯು ಐತಿಹಾಸಿಕ ಬದಲಾವಣೆಗಳಿಗೆ ತೆರೆದುಕೊಳ್ಳುತ್ತ ಹೋಗುವ ಒಂದು ಸಂಪ್ರದಾಯದ ಕಥನವೂ ಹೌದು; ಮತ್ತು, ಅದು ಬದಲಾವಣೆಗಳನ್ನೆಲ್ಲ ಮೀರಿ ನಿಲ್ಲುವ ಒಂದು ಸಾರ್ವತ್ರಿಕ ಮಾನವ ಕಥನವೂ ಹೌದು.

ಅಡಿಟಿಪ್ಪಣಿಗಳು

೧. ಅಸ್ಪೃಶ್ಯರು, ವೈದೇಹಿ, ಪು-೫೧.

೨. ಅಸ್ಪೃಶ್ಯರು, ವೈದೇಹಿ, ಪು-೯

೩. ವೈದೇಹಿ, ಪು-೯

೪. ಅದೇ, ಪು-೯

೫. ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು, ವೈದೇಹಿ, ಪು-೩೨೨.

೬. ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು, ವೈದೇಹಿ, ಪು-೩೨೨

೭. ಅದೇ, ಪು-೭೮.

೮. ಅದೇ, ಪು-೭೮.

೯. ಅದೇ, ಪು-೧೧.

೧೦. ಅದೇ, ಪು-೧೧.

೧೧. ಅದೇ, ಪು-೭೯-೮೦

೧೨. ಅದೇ, ಪು-೮೬-೮೬

೧೩. ಅವಲಂಬಿತರು, ವೈದೇಹಿ, ಪು-೧೮೭

೧೪. ಅವಲಂಬಿತರು, ವೈದೇಹಿ, ಪು-೧೯೨

೧೫. ಅದೇ, ಪು-೮೭.

೧೬. ಅದೇ, ಪು-೫೦-೫೧.

೧೭. ಅದೇ, ಪು-೮೯-೯೦.

೧೮. ಅದೇ, ಪು-೮೮-೮೯.

೬. ವೈದೇಹಿಯವರ ಪ್ರಬಂಧಗಳಲ್ಲಿ ಸ್ತ್ರೀ.

ವೈದೇಹಿಯವರು ೩ ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಮಲ್ಲಿನಾಥನ ಧ್ಯಾನ',[೧] ಮೇಜು ಮತ್ತು 'ಬಡಗಿ' ಹಾಗೂ 'ಜಾತ್ರೆ.' ಅವರ ಸಾಹಿತ್ಯದಂತೆಯೇ ಸ್ತ್ರೀಪ್ರಜ್ಞೆ ಇಲ್ಲಿಯು ಸ್ಥಾಯಿಯಾಗಿ ಮುದುಂವರೆಯುತ್ತದೆ. ಅಷ್ಟೇ ಅಲ್ಲದೆ ಎಲ್ಲವನ್ನು ಆ ನೆಲೆಯಿಂದಲೇ ಪರೀಕ್ಷಿಸುತ್ತಾ ಸಾಗುತ್ತವೆ. ಇಲ್ಲಿ ಅವರ ಪ್ರಬಂಧಗಳು ಶೋಧಿಸುತಿರುವ ಸ್ತ್ರೀ ವಿಶಿಷ್ಟತೆಗಳನ್ನು ಚರ್ಚಿಸಲಾಗುವುದು.

ಅಧ್ಯಯನದ ಅನುಕೂಲಕ್ಕೆಂದು ಅವರ ಲೇಖನಗಳನ್ನು ಕೆಳಕಂಡಂತೆ ವಿಭಾಗಿಸಿ ಕೊಳ್ಳಲಾಗಿದೆ.

೧. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯರು.
೨. ಗಂಡು-ಹೆಣ್ಣಿನ ಸಾಮಾಜೀಕರಣ ಪ್ರಕ್ರಿಯೆ.
೩. ಸ್ತ್ರೀ ಅನನ್ಯತೆಗಳು.
೪. ಸ್ತ್ರೀ ಸಮಾನತೆಯ ಹೋರಾಟ.

"ವೈದೇಹಿಯವರ 'ಮಲ್ಲಿನಾಥನ ಧ್ಯಾನ' ಅದರ ಸ್ವರೂಪದಲ್ಲಿ ಸಮಾಜೋ ಸಾಂಸ್ಕೃತಿಕ ಎಂದು,ಆತ್ಮದಲ್ಲಿ ಶುದ್ಧ ಸ್ತ್ರೀವಾದಿ ಎಂದು ಕರೆಯಬಹುದಾದ ಬರವಣಿಗೆ. ಈ ನಿಟ್ಟಿನಲ್ಲಿ ಅದು ಕನ್ನಡದ ಬಹಳ ಮಹತ್ವದ ಪಠ್ಯಗಳಲ್ಲಿ ಒಂದು. ಸ್ವಾಯತ್ತತೆಯನ್ನು ಹೆಣ್ಣು ತನ್ನ ಇರುವ ಸ್ಥಿತಿಯಲ್ಲೇ, ತನ್ನನ್ನು ತಾನು ಪರಿಭಾವಿಸುವ ಕ್ರಮದಲ್ಲಿಯೇ ಮಾಡಿಕೊಳ್ಳುವ ಬದಲಾವಣೆಯಲ್ಲಿಯೇ ಪಡೆಯಬಹುದಾದ ಸಾಧ್ಯತೆಯನ್ನು ವೈದೇಹಿ ಈ ಕೃತಿಯಲ್ಲಿ ಶೋಧಿಸುತ್ತಾರೆ. ಅವರದೇ ಒಂದು ಮಾತನ್ನು ಬಳಸಿ ಹೇಳುವುದಾದರೆ, 'ಆರ್ದ್ರವರ್ಗ'. ಯಾವುದನ್ನೆಲ್ಲ ಇಲ್ಲಿಯ ತನಕ ಹೆಣ್ಣಿನ ದೌರ್ಬಲ್ಯಗಳು, ನೇತ್ಯಾತ್ಮಕ ಗುಣಗಳು ಎಂದು ವ್ಯವಸ್ಥೆ ಸ್ಥಾಪಿಸಿದೆಯೋ, ಅವುಗಳನ್ನೇ ಸ್ತ್ರೀ ಶಕ್ತಿ ವಿಶೇಷ ಗುಣಗಳು ಎಂದು ಪರಿಭಾವಿಸುವ ಮೂಲಕ ಪಡೆಯಬಹುದಾದ ಬಿಡುಗೆಯ ಬಗ್ಗೆ ಇವರು ಯೋಚಿಸುತ್ತಾರೆ. ಈ ದೃಷ್ಟಿಕೋನದಲ್ಲಿ ಹೆಣ್ಣಿನ ಚಾಂಚಲ್ಯ ಎನ್ನುವುದು ಪ್ರತಿರೋಧದ ರೂಪವಾಗಿ, ಹೆಣ್ಣು ಕೇಂದ್ರವಲ್ಲ, ಆಕೆ ಅಂಚಿನವಳು ಅನ್ನುವುದಾದರೆ, ಆ ಅಂಚೇ ಕೆಂದ್ರವನ್ನು ಹಿಡಿದು ಅಲ್ಲಾಡಿಸಬಲ್ಲ ಸ್ವರೂಪದ್ದಾಗಿ ಅವರು ಗುರುತಿಸುತ್ತಾರೆ."[೨]

ಎಂಬ ಆಶಾದೇವಿಯವರ ಈ ಮಾತುಗಳು ಕನ್ನಡ ಸಾಹಿತ್ಯ ಸಂದರ್ಭದಲ್ಲಿ ವೈದೇಹಿಯವರ ವಿಶಿಷ್ಟ ಕೊಡುಗೆ ಮತ್ತು ಅವರ ಸಾಹಿತ್ಯದ ಸ್ಥಾನವನ್ನು ಗುರುತಿಸುತ್ತದೆ.

೧. <u>ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸ್ತ್ರೀಯರು.</u>

ಪುರುಷ ಪ್ರಧಾನ ವ್ಯವಸ್ಥೆಯನ್ನು ವರ್ಣಿಸ ಹೊರಟರೆ ಅದು ಕೌರ್ಯ ಇಲ್ಲದ ಮನೆಯ ಸಾಸಿವೆ ತಾ ಎಂಬಂತಾಗುತ್ತದೆ. ಎಲ್ಲಾ ಮನೆಯಲ್ಲಿಯೂ ಅವಳು ಪುರುಷನ ಬಾಹ್ಯ ಅಥವ ಮಾನಸಿಕ ಕೌರ್ಯಕ್ಕೆ ಒಳಾಗಾಗಿದ್ದಾಳೆ.

ಪುರುಷಪ್ರಧಾನ ವ್ಯವಸ್ಥೆಯು ಸ್ತ್ರೀಯರನ್ನು ಸಹಜೀವಿಗಳಂತೆ ಕಾಣದೆ, ತಮ್ಮ ಅನೂಕೂಲಕ್ಕೆ ಒದಗುವ ವಸ್ತುಗಳಂತೆ ಕಂಡಿದೆ. ಇಲ್ಲಿ ಅವಳಿಗೆ ಯಾವುದೇ ಗೌರವವಾಗಲಿ, ಅಸ್ತಿತ್ವವನ್ನಾಗಲಿ ನೀಡಿಲ್ಲ. ಅವಳು ವಹಿಸುವ ಭಿನ್ನ ಪಾತ್ರಗಳಲ್ಲಿ, ಹೆಂಡತಿಯಾದರೆ ಅವಳು ಗಂಡನ ತೊತ್ತಾಗಿ ಬಾಳಬೇಕಾಗುತ್ತದೆ. ಮಗಳಾದರೆ ಅವಳು ನಿವಾರಿಸಿಕೊಳಲ್ಲೇ ಬೇಕಾದ ಹೊರೆಯಾಗಿರುತ್ತಾಳೆ.

ಸೆಲ್ಯೂಕಸ್‌ನ ಮಗಳು ಎಂಬ ಪ್ರಬಂಧದಲ್ಲಿ ವಿವಾಹದ ವಿಷಯದಲ್ಲಿ ಹೆಣ್ಣಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲದಿರುವುದು ಎಷ್ಟು ನಿಜವೋ ಹಾಗೆಯೇ ಹೆಣ್ಣು ಎಂದರೆ ಎಲ್ಲಾದರಲ್ಲಿಗೆ ಕೊಟ್ಟು ನಿವಾರಿಸಿಕೊಳ್ಳಬೇಕಾದ ಸಂಗತಿ ಎಂಬುದರ ದುರಂತವನ್ನು ವಿವರಿಸುತ್ತದೆ. ಚಂದ್ರಗುಪ್ತನ ಮಡದಿಯಾದ 'ಸೆಲ್ಯೂಕಸ ಮಗಳು' ಎರಡೂ ಸಾಮ್ರಾಜ್ಯದ ಕೊಂಡಿ ಮಾತ್ರವಾಗಿ ಬಳಕೆಯಾದ ಬಗೆ ಅಂತಃಕರಣ ಕಲಕುತ್ತದೆ. "ಹೆಣ್ಣುಮಕ್ಕಳು ಎಷ್ಟು ಅಗ್ಗ!" ಇದು ಸ್ತ್ರೀಪ್ರಜ್ಞೆಯನ್ನು ಎಚ್ಚರಿಸುತ್ತದೆ. ಸೆಲ್ಯೂಕಸ್‌ನ ಮಗಳ ಒಬ್ಬಳೇ ಅಲ್ಲ ಲೋಕದ ಎಲ್ಲ ಹೆಣ್ಣುಗಳ ಕತೆಯು ಇದೇ ಆಗಿರುತ್ತದೆ. ಇಂಥಹ ನೋವಿನ ಯಾತನೆಯನ್ನು ಸ್ತ್ರೀಯರು ಹೇಗೆ ಸಹಿಸಿಕೊಂಡು ಬಾಳಿದರು. ಸ್ತ್ರೀಯರ ತವರಿನ ಬಗೆಗಿನ ಅತಿಯಾದ ಹೆಮ್ಮೆಯನ್ನು, ಅವರು ಬಳಸಿದ ತಂತ್ರವಾಗಿ ನಾವು ನೋಡಬಹುದು. ತಮ್ಮ ಅಧೀನತೆಯಲ್ಲಿ ಅದನ್ನು ಇದು ಮೀರುವ ಪ್ರಯತ್ನವಾಗಿದೆಯೇ? "ಬಹುಶಃ ತಮ್ಮ [ಕೇಳುವವರಿಲ್ಲದ] ತವರಿನ ವೈಭೋಗ ಕೊಚ್ಚಿಕೊಳ್ಳುತ್ತ ಬೇಕೆಂದೇ ಬೀಗುತ್ತ ತಮ್ಮ ಕೊರಗನ್ನು ತಮಗೂ ಕಾಣದ ಹಾಗೇ ಅಡಗಿಸಿಟ್ಟು ಅಥವಾ ಪಶುಗಳಂತೆ, ಹೇಗೆಂದರೆ ಹಾಗೆಂದು ಒಪ್ಪಿಕೊಂಡು, ಇಲ್ಲವೇ ಅಸಹಾಯಕತೆಯಲ್ಲಿ ತಮ್ಮನ್ನು ಅದ್ದಿಕೊಂಡು, 'ದೇವರ' ಮೇಲೆ ಭಾರ ಹಾಕಿ, ಇಲ್ಲ ಕ್ರೌರ್ಯದ ಕವಚತೊಟ್ಟು, ಬಾಲ್ಯದ ಪರಿಸರವನ್ನು ಇನ್ನೆಂದೂ ಇಲ್ಲದಂತೆ ಕಸಕ್ಕನೆ ಕತ್ತರಿಸಿಕೊಂಡು ಜೀವಿಸಬೇಕಾದವರ ಬದುಕಿನ ಕೊರಗು ಯಾವ ಸ್ವರೂಪದ್ದು ಮತ್ತು ಅದು ಮುಂದಿನ ದಿನಗಳಲ್ಲಿ ಯಾವ ಯಾವ ರೀತಿಯ ಪರಿಣಾಮಗಳನ್ನು ಬೀರುವಂತಹುದು ಎಂಬುದನ್ನು ಊಹಿಸಲು ಸಾಧ್ಯವೆ?".[೨] ಈ ರೀತಿಯ ತಂತ್ರಗಳು ಮುಟ್ಟಬಹುದಾದ ಕೊನೆಯ ಬಗ್ಗೆ ಸ್ತ್ರೀಪ್ರಜ್ಞೆ ಆತಂಕ ಪಡುತ್ತದೆ.

ಕ್ರೌರ್ಯದ ಕಾರ್ಯದಲ್ಲಿ ಹೇಗೆ ಸಕಾರಣವಿಲ್ಲದೆ ಯಾರೂ ಬೇಕಾದರೂ ಒಂದಾಗುತ್ತಾರೆ ಎಂಬುದಕ್ಕೆ ಸೂಕ್ತ ಉದಾಹರಣೆ ಬಡಗಿ, ದೊಣ್ಣೆ. " ಎಲ್ಲೋ ಹುಟ್ಟಿ ಬೆಳೆದ ಪಾಪವರಿಯದ ಒಂದು

ಸಸ್ಯದ ಟೊಂಗೆ ದರ್ಪದ ದಾಹ ತೀರಿಸಿಕೊಳ್ಳುವ ಸಾಧನವಾಗುತ್ತದೆ. ಅಷ್ಟಕ್ಕೆ ಮಾತ್ರ ಸೀಮಿತವಾಗದೆ ಬೆಳ್ಳಿಯ ಕಟ್ಟನ್ನೂ ಹೊಡೆಸಿಕೊಂಡು ಅದು ಬೆಳ್ಳಿಯ ಕಟ್ಟೆನ್ನುವುದೂ ತಿಳಿಯದೆ ಅಮಾಯಕತೆಯಲ್ಲಿ ಯಾರದೋ ಸ್ಥಾನ ಅಹಂಕಾರದ ಸಂಕೇತವಾಗುತ್ತದೆ."[3]

ಮೃದುತ್ವ ನೀಗಿಕೊಂಡ ಸಸ್ಯದ ಟೊಂಗೆ ಬೆತ್ತವಾದಂತೆ, ಮೃದುತ್ವ ನೀಗಿಕೊಂಡ ಹೆಣ್ಣು ಕ್ರೌರ್ಯದ ಸಾಧನವಾಗುವ ಮೂಲಕ ಹೆಣ್ಣಿನ ದುರಂತವಾಗಿ ಕಾಣುತ್ತಾಳೆ.

ಗೌರತ್ತೆ ಹೆಣ್ಣಾಗಿದ್ದರೂ ತನ್ನ ಅನುಭವಗಳಿಗಿಂತ ತನ್ನ ಅಜ್ಜಯ್ಯನ ದರ್ಪ ಹೆಚ್ಚು ಮೆಚ್ಚುವವಳು. ಮುಂದೆ ಆ ದರ್ಪದ ಸ್ಥಾನ ಅಲಂಕರಿಸುವ, ಪುರುಷಪ್ರಧಾನ ಮೌಲ್ಯಗಳ ಉಳಿಯುವಿಕೆಯ ಹೊಣೆಹೊರುವ ಸಾಧನವಾಗುವವಳು ಆಗಿದ್ದಾಳೆ. ಅವಳ ಅಜ್ಜಿ ಆಕೆಗೆ ಪಾಪದವಳು, ಪಶುವಿನಂತೆ ಸಸಾರಕ್ಕೆ ಕಾರಣವಾಗುವವಳು ಆಗಿದ್ದಾಳೆ. ಪುರುಷಪ್ರಧಾನ ಮೌಲ್ಯಗಳನ್ನು ಅಂತರಂಗಿಸಿಕೊಂಡ ಗೌರತ್ತೆಯಂತವರು ಮನುಷ್ಯತ್ವ, ಮಾನವೀಯತೆಯಂತ ಮೌಲ್ಯಗಳಿಗೆ ಯಾವ ಬೆಲೆಯನ್ನು ಕೊಡುವುದಿಲ್ಲ. "ಗೌರತ್ತೆಯಂಥವರು- ಅವರು ಗಂಡಸರೇ ಇರಲಿ ಹೆಂಗಸರೇ ಇರಲಿ, ಇರುವಲ್ಲಿ ರಾಜಾರೋಷವಾಗಿ ಏನು ನಡೆದೀತು?" ಹಾಗಾಗಿ ಇವರ ಜೊತೆಯಲ್ಲಿ ಬದುಕುವ ಸಹಜೀವಿಗಳು ಮುಚ್ಚುಮರೆಯಲ್ಲಿಯೇ ತಮಗೆ ಬೇಕಾದದ್ದನ್ನು ಮಾಡ ಬೇಕಾಗುತ್ತದೆ.

ಹೀಗೆ ಕ್ರೌರ್ಯದ ರುಚಿ ಕಂಡು, ದರ್ಪದಲ್ಲಿಯೇ ಉಳಿಯಲು ತೀರ್ಮಾನಿಸಿ, ಪುರುಷಪ್ರಧಾನ ಮೌಲ್ಯಗಳನ್ನು ಅಂತರಂಗಿಸಿಕೊಂಡು ಬದುಕುವ ಗೌರತ್ತೆಯಂಥವರ ಬದುಕಿನ ಶೂನ್ಯತೆಯ ಬಗ್ಗೆ ಮರುಕವೂ, ಜಿಗುಪ್ಸೆಯು ಕಂಡುಬರುತ್ತದೆ. ಸ್ತ್ರೀವಿಶಿಷ್ಟ ಅನುಭವಕ್ಕಿಂತ ದರ್ಪಕ್ಕೆ ಮನಸೋತ ಗೌರತ್ತೆಯಂತಹವರ ಬಗ್ಗೆ ವಿಷಾಧವಿದೆ.

ಹೆಣ್ಣನ್ನು ಅಧೀನ ನೆಲೆಯಲ್ಲಿ ಉಳಿಸಲು ಬಡಗಿಯಂತೆ, ಕುರ್ಚಿಮೇಜುಗಳಂತ ಜಡವಸ್ತುಗಳು ಕೂಡ ಸಹಕಾರಿಯಾದ ಬಗೆ, ಮತ್ತು ಸ್ತ್ರೀಯರಿಗೆ ನಿಷಿದ್ಧವಾದ ವಿಚಾರಗಳಲ್ಲಿ ಇವುಗಳು ಸೇರಿರುವ ಸ್ವಾರಸ್ಯಕರ ಸಂಗತಿ 'ಮೇಜು ಮತ್ತು ಕುರ್ಚಿಗಳ ಮೂಲಕ' ಎಂಬ ಪ್ರಬಂಧದಲ್ಲಿ ನಿರೂಪಿತವಾಗಿದೆ.

ಈಗ ಸಾಮಾನ್ಯವಾಗಿರುವ ಕುರ್ಚಿ ಮತ್ತು ಮೇಜುಗಳು, ಹಿಂದೆ "ಯಾರ ಮನೆಯಲ್ಲೇ ಆಗಲಿ ಕುರ್ಚಿ ಮೇಜನ್ನು ತಂದೆ, ಅಜ್ಜ ಅಥವಾ ಮನೆಯ ಗಂಡಸರು ಮಾತ್ರ ಬಳಸುತ್ತಿದ್ದದ್ದು. ಕುರ್ಚಿಯ ಮೇಲೆ ಕುಳಿತು ಓದುವುದಿರಲಿ, ಬರಿದೇ ಕುಳಿತುಕೊಳ್ಳುವುದೂ, ಮೇಜಿನ ಮೇಲೆ ಪುಸ್ತಕ ಇಟ್ಟುಕೊಂಡು ಬರೆಯುವುದೂ ಹೆಂಗಸಿನ ಉಡಾಪು ಎನಿಸುತ್ತಿದ್ದದ್ದು. ಅದೇನು? ಗಂಡಸರ ಹಾಗೆ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕಾ? ದೊಡ್ಡ ಆಫೀಸರಳೇ ನೀನು? ಬರೆಯಲು ಮೇಜೇ ಬೇಕೆಂದರೆ! ಎಂದರೆ

ಆಫೀಸರು ಆಗುವುದು ಕೂಡ ಮೇಜುಗಳ ಹಕ್ಕುದಾರಿಕೆಯೊಂದಿಗೇ ಗಂಡಸರದೇ ಹಕ್ಕು ಎಂಬಿತ್ಯಾದಿ ಅರ್ಥಗಳನ್ನೆಲ್ಲ ಹೊತ್ತ ಗದರಿಕೆಗಳು ಇನ್ನೂ ಹೇಳಬೇಕೆಂದರೆ ಮೇಜು ಕುರ್ಚಿ ಎಂದರೆ ಗಂಡಸರದೇ ಉಪಕರಣಗಳು. ಶೇವಿಂಗ್ ಉಪಕರಣಗಳು ಹೇಗೆ ನಮ್ಮದಲ್ಲವೋ ಹಾಗೆ!"[3] ಇವು ಸ್ತ್ರೀಯರಿಗೆ ಅಸ್ಪೃಶ್ಯವಾಗಿದ್ದವು.

ಇವು ಸ್ತ್ರೀಯರಿಗೆ ತೆರೆದುಕೊಂಡು, ಸಾಮಾನ್ಯವಾದುದರ ಹಿಂದಿನ ಕತೆ ರೋಚಕವಾಗಿದೆ. ಮೇಜಿನ ಮೇಲೆ ಕುಳಿತ ಹೆಣ್ಣು ಅಡುಗೆ ಮಾಡುವಳೆ ಎಂಬ ಕೊಂಕಿನಲ್ಲಿ ವಿವಾಹದಿಂದ ವಂಚಿತಳಾಗುತ್ತಿದ್ದ ಕಾಲದಿಂದ. ಮೇಜು-ಕುರ್ಚಿ ಬಿ.ಎ. ಓದಿದ ಹೆಣ್ಣು ಕೂರಲು ಯೋಗ್ಯವೆನಿಸಿ ನಂತರ ಇಡೀ ಹೆಣ್ಣು ವರ್ಗಕ್ಕೂ ವ್ಯಾಪಿಸಿತು. ಇದು ಸಹಜವಾಗಿ ಅವಳಿಗೆ ದಕ್ಕಿದ್ದಲ್ಲ. ಅವಳ ಸಣ್ಣ ಸಣ್ಣ ಪ್ರತಿಭಟನೆಯ ಫಲ. ಹೀಗೆ ಅವುಗಳು ಅವಳಿಗೆ ದಕ್ಕಿದ್ದರೂ, ಅವಳದಾಗದೇ ಉಳಿಯುವ ವಾಸ್ತವ ಸ್ತ್ರೀ ಪ್ರಜ್ಞೆಯನ್ನು ಎಚ್ಚರಿಸುತ್ತದೆ. ವರ್ಜೀನಿಯಾ ವೂಲ್ಫ್ ಹೇಳುವ 'A room of One's Own' ಎಂಬ ಲೇಖನ ಹೆಣ್ಣಿಗೆ ಅವಳದೇ ಆದ ಒಂದೇ ಕೋಣೆ ಇಲ್ಲದ ವಿಷಯದ ಮೇಲೆ ಬೆಳಕು ಚೆಲ್ಲಿದರೆ, ಈ ಪ್ರಬಂಧ ಕೋಣೆಯಂತಿರಲಿ ಬೆಳಕು ಇರುವ ಒಂದು ಮೂಲೆಯಲ್ಲಿ ಒಂದು ಮೇಜು ಮತ್ತು ಕುರ್ಚಿ ಹೊಂದುವ ಸದಾ ಕನಸು ಇಂದಿಗೂ ಈಡೇರದಿರುವ ಸ್ಥಿತಿಯನ್ನು ತೋರುತ್ತದೆ. ಈ 'ಮೇಜುಗಳ' ಬದಲಾದ 'ಇಮೇಜು'ಗಳಲ್ಲಿ ವೈದೇಹಿಯವರು ಸಾಮಾಜಿಕ ಪರಿವರ್ತನೆಯ ಕಥನವನ್ನೇ ಕಾಣುತ್ತಾರೆ.

೨. **<u>ಗಂಡು-ಹೆಣ್ಣಿನ ಸಾಮಾಜೀಕರಣ ಪ್ರಕ್ರಿಯೆ.</u>**

ಪುರುಷಪ್ರಧಾನ ವ್ಯವಸ್ಥೆಯು ಲಿಂಗಭೇಧವನ್ನು ಚಿಕ್ಕಂದಿನಲ್ಲಿಯೇ ಸಹಜವೆಂಬಂತೆ ಕಲಿಸುತ್ತದೆ. ಸಾಮಾಜೀಕರಣದ ವ್ಯವಸ್ಥಿತ ಕಲಿಕೆಗೆ, ಇಲ್ಲಿ ಒಂದು ಮಾವಿನಮರ ಅಥವ ಜಾತ್ರೆಯೇ ಸಾಕು.

ಹೆಣ್ಣು ಗಂಡೆಂಬ ಲಿಂಗಭೇಧ, ವ್ಯಕ್ತಿತ್ವ ಭೇಧವಾಗಿ ಮಗುವಿನ ಶೈಶಾವಸ್ಥೆಯಲ್ಲಿಯೇ ನಿರ್ಧಿಷ್ಟಗೊಳ್ಳುತ್ತಾ ಹೋಗುವ ಪರಿಯನ್ನು ಅವರ ಶ್ರಾವಣ 'ಅಂಗಳದಲ್ಲಿ ಬಂದಿಳಿದಳು' ಲೇಖನ ಚಿತ್ರಿಸುತ್ತದೆ.

ಗಂಡು ಮಗುವಿಗೆ ಬಳೆ ತೊಡಿಸಿದ ಬಳೆಗಾರ್ತಿಯನ್ನು ಸುಕನ್ಯತ್ತೆ ಜರಿಯುವುದು ಹೀಗೆ. "ಸುಕನ್ಯತ್ತೆಯ ಮಟ್ಟಿಗೆ ಗಂಡುಮಗುವಿಗೆ ಬಳೆಹಾಕಿದ್ದು ಸರಿಯಲ್ಲವೇ ಅಲ್ಲ!' ಯಂತ ಬಳೆಗಾರ್ತಿ ನೀನು! ಗಂಡು ಮಗುವಿಗೂ ಬಳೆ ಹಾಕುತ್ತೀಯಲ್ಲ! ಅಸಹ್ಯ' ಅದರ ಬಳೆ ಕಳಚಿ ವಾಪಾಸು ಇಟ್ಟಾಯಿತು ಅವಳು".[4] ಇದಕ್ಕೆ ಬಳೆಗಾರ್ತಿಯದು ಸಣ್ಣ ನಗುವಿನ ಉತ್ತರ. ಆದರೆ ಹೊರಡುವ ಮೊದಲು ಸುಕನ್ಯತ್ತೆಯ ಭ್ರಮೆಗೆ ನೊಂದು ನುಡಿಯುತ್ತಾಳೆ. "ಪಾಪ, ಬಳೆ ಏನು ಮಾಡುತ್ತದೆ?" ಎಂದು, ಎಲ್ಲವೂ

ಇರುವುದು ಹೃದಯದಲ್ಲಿ ಎಂದು ಹೇಳುತ್ತಾಳೆ. ಲಿಂಗಭೇಧದಲ್ಲಿ ಬಳೆಯ ಪಾತ್ರವಿಲ್ಲದ್ದಿದ್ದರೂ ಅದು ಗಂಡಿಗೆ ನಿಶಿದ್ಧವಾದ ವಸ್ತು.

'ಸನಾತನದಮರ'ವಾದ ಮಾವಿನಮರವು ಗಂಡು- ಹೆಣ್ಣಿನ ಸಾಮಾಜೀಕರಣದ ನೆಲೆಯಲ್ಲಿ ವಹಿಸುವ ಪಾತ್ರದದ ಬಗ್ಗೆ ಸೋಜಿಗವನ್ನು ಒಂದು ಲೇಖನದಲ್ಲಿ ಕಾಣಬಹುದು. ಜಾತಿಭೇಧವನ್ನೇ ಮರೆಸುವ ಈ ಮರದ ಕಾಯಿ ಲಿಂಗಭೇದವನ್ನು ಮಾತ್ರ ಮರೆಯದೆ ಮುಂದುವರೆಸುವ ವಿಚಿತ್ರ ವಾಹಕವಾಗಿದೆ. ಮರಹತ್ತಿ ಕಾಯಿ ಕೀಳುವ ಕೆಲಸ ಹುಡುಗರದ್ದಾದರೆ ಮನೆಯೊಳಗಿನಿಂದ ಉಪ್ಪು ಕಾರ ಚೂರಿ ತಂದು ಕಾಯಿ ಹಚ್ಚಿಕೊಡುವ ಕೆಲಸ ಮಾಡುತ್ತಾರೆ. ಈ ರೀತಿ ಮಾವಿನಮರದ ಮುಖಾಂತರ ಹೇಗೆ ಈ ಇವರೆಲ್ಲ ಯಾರೂ ಹೇಳದೆಯೂ ವ್ಯವಸ್ಥೆಗೆ ಸರಿಯಾಗಿ ಸ್ಥಾನ ವಿಂಗಡಣೆ ಮಾಡಿಕೊಂಡಿದ್ದಾರೆ, ಎಂಬ ಕುತೂಹಲವನ್ನು ವಿವರಿಸುತ್ತದೆ.

ಹೆಣ್ಣು ಮಕ್ಕಳು ವಿಶೇಷವಾಗಿ ಕಾಯುವ ಹಬ್ಬ ಮತ್ತು ಜಾತ್ರೆಗಳು ಕೂಡ ಈ ಕೆಲಸ ನಿರ್ವಹಿಸುತ್ತವೆ.

ಹೀಗೆ ಲಿಂಗ ಭೇದಕ್ಕೆ ತೆರೆದುಕೊಳ್ಳುತ್ತಾ ಹೋಗುವ ಮಕ್ಕಳು ಮುಂದಿನ ಜಾತ್ರೆಗಳಲ್ಲಿ ಅವರಿಗೆ ಸಂಬಂಧಿಸಿದ ಕ್ಷೇತ್ರಗಳನ್ನು ಕಲಿಯುತ್ತಾರೆ. ಬಳೆಯಂಗಡಿ ಹೆಣ್ಣಿನ ಕ್ಷೇತ್ರವಾದರೆ, ಹಾವಿನ ಹುಡುಗಿಯಿರುವ ಟೆಂಟು ಗಂಡುಗಳಿಗೆ ಮಾತ್ರ ಸಂಬಂಧಿಸಿದ ಕ್ಷೇತ್ರವಾಗಿದೆ. ಆ ಕುರಿತ ಹೆಣ್ಣಿನ ಕುತೂಹಲಕ್ಕೆ ಗಂಡಿನ ವರ್ಣನೆಯ ಹೊರತು ಬೇರೆ ರೀತಿಯಲ್ಲಿ ಪೂರೈಸಲಾಗದು. ಜಾತ್ರೆಯಲ್ಲಿ ವಿಧವೆಯರಿಗೂ ಪ್ರವೇಶ ಉಂಟು. ಅಲ್ಲಿ ಸಂಭ್ರಮದಿಂದ ಬರುವ ಮಂಜತ್ರೆಯ ಪ್ರಪಂಚವೇ ಬೇರೆ. ಅವಳ ಜಾತ್ರೆ, ರತ್ನಣ, ದೇವರ ದರ್ಶನ, ಪ್ರಸಾದ, ಪುಟಾಣಿ ಮಂಡಕ್ಕಿ ಇಷ್ಟಕ್ಕೆ ಮುಗಿಯುತ್ತದೆ. ಜಾತ್ರೆಯ ಹುಮ್ಮಸ್ಸಿನಿಂದ ಅವಳ ಜೊತೆಗೆ ಹೋದ ಮಕ್ಕಳು ಇನ್ನೆಂದಿಗೂ ಅವಳ ಜೊತೆ ಜಾತ್ರೆಗೆ ಹೋಗದಿರಲೂ ನಿರ್ಧರಿಸುವಷ್ಟು ನೀರಸವಾಗಿದೆ. ಅವಳ ಬದುಕಿನ ಜಾತ್ರೆಯೂ ಕೂಡ. ಸೇವಂತಿಗೆ ದಂಡೆ ಕಟ್ಟಿದರೂ ಮುಡಿಯುವಂತಿಲ್ಲದ ಬೋಳು ಮಂಡೆ. ರವಿಕೆಯಿಲ್ಲದ ಕೆಂಪು ಸೀರೆಯಲ್ಲಿ ಸುತ್ತಿದ ಮಂಜತ್ತೆಯ ಬದುಕು ಶೂನ್ಯದಲ್ಲಿ ಮುಳುಗಿದೆ.

ವ್ಯವಸ್ಥೆಯ ಎಲ್ಲ ಕುರೂಪಗಳು, ಸೌಂದರ್ಯಗಳು ಕೂಡ ಜಾತ್ರೆಯಲ್ಲಿಯೇ ತೆರೆದುಕೊಳ್ಳುತ್ತದೆ. ಯಾವುದೊ ಹುಡುಗಿಯನ್ನು ಹುಡುಗ ನೋಡಲು ಜಾತ್ರೆಗೆ ಬರುತ್ತಾನೆ. ಅಲ್ಲಿಯೇ ಅನೇಕ ಹೆಣ್ಣುಗಳ ಕನ್ಯಾಸೆರಯು ಹರಿದು ಮದುವೆಯ ಸಂಭ್ರಮ ಒದಗಿದೆ. ಅದರ ಜೊತೆಗೆ ಜಾತ್ರೆಯ ಆನಂದ ಕದಡುವಂತ ಪೋಲಿ ಹುಡುಗರಿಗೂ ಜಾತ್ರೆ ಜಾಗ ನೀಡಿದೆ.

ಹೀಯಾಳಿಸುವುದರಲ್ಲಿ ಏನು ಭಯ? ನಾವೇಕೆ ಪುರುಷ ದನಿಯಲ್ಲಿ ಮಾತಾಡಬೇಕು? ನಾವು ನಮ್ಮ ಕಂಠದಲ್ಲಿ ಹಾಡೋಣ. ಅದು ಜೋರಾಗವಿರಲಿ ಪ್ರೇಮರಾಗವಿರಲಿ, ಇನ್ನಾವ ಬಗೆಯ ರಾಗ–ವಿರಾಗಗಳೇ ಇರಲಿ. ನಮುದೇ ದನಿ ಅಲ್ಲಿರಲಿ."[೮] ಎಂಬ ಸ್ತ್ರೀಸ್ವಾಯತ್ತತೆಯ ನಿಲುವು ಪ್ರಕಟಿಸುತ್ತಾರೆ. ಪ್ರಾಕೃತಿಕವಾಗಿ ಒದಗಿರುವ ವಿಭಿನ್ನತೆಯೇ ಸ್ತೀ ವಿಶಿಷ್ಟತೆಗೆ ಮೂಲಕಾರಣವಾಗಿದೆ ಎಂದು ಒಪ್ಪಿಕೊಳ್ಳುವ ಅವರು ಅದನ್ನು ಕಾಪಾಡಿಕೊಳ್ಳುವ ಬಯಕೆಯನ್ನು ವ್ಯಕ್ತಪಡಿಸುತ್ತಾ ಈ ವಿಷಯದಲ್ಲಿ ಹೆಣ್ಣು ಹೆಚ್ಚು ಅದೃಷ್ಟಶಾಲಿಯೆಂದು ಹೇಳುತ್ತಾರೆ. ಸ್ತ್ರೀವಾದಿ ಸಿದ್ಧಾಂತಗಳಿಂದ, ಅವುಗಳ ಪ್ರಭಾವದಿಂದ ದೂರವಾಗಿ, ಮುಕ್ತವಾಗಿ ತಮ್ಮದೇ ಆದ ಚಿಂತನಾ ಕ್ರಮವನ್ನು ಬೆಳೆಸಿದ ವೈದೇಹಿಯವರ ಚಿಂತನೆಗಳನ್ನು ಈ ಲೇಖನದಲ್ಲಿ ಕಾಣಬಹುದು.

ಹೆಣ್ಣು ಮಗುವಿನ ಜನನವೇ ತಿರಸ್ಕಾರಕ್ಕೆ ಕಾರಣವಾಗುವ, 'ಎಂತದಾರೂ ಬೇಕು, ಈ ಹೆಣ್ಣು ಜನ್ಮ ಬೇಡ' ಎಂಬ ಧೋರಣೆ ಗಳ ನಡುವೆ, 'ಜನ್ಮಜನ್ಮಗಳಲ್ಲಿಯೂ ಹೆಣ್ಣೇ ಆಗಬೇಕು' ಎಂದು ಪ್ರಾರ್ಥಿಸುವ ಹೆಣ್ಣಿಗೆ ತಾಯ್ತನ ನೀಡುವ ಈ ಆನಂದವೇ ಎಲ್ಲದಕ್ಕಿಂತ ಮುಖ್ಯವಾಗುತ್ತದೆ.

"ಸಮಾನತೆಯ ಹೋರಾಟ ಅಥವಾ ಪ್ರಕ್ರಿಯೆಗಿಂತ ಹೆಚ್ಚಾಗಿ ವಿಭಿನ್ನತೆಯಲ್ಲೇ ಮಹತ್ವವನ್ನೂ, ವೈಶಿಷ್ಟ್ಯವನ್ನೂ ಗುರುತಿಸುವ ಪ್ರಯತ್ನವನ್ನು ಅವರು ಎಲ್ಲಿ ಮಾಡುತ್ತಿದ್ದಾರೆ. ಗಂಡು–ಹೆಣ್ಣು ಇಬ್ಬರಿಗೂ ಅವರಿಗೆ ಮಾತ್ರ ಸಾಧ್ಯವಾಗುವ ಕೆಲವು ವಿಶಿಷ್ಟವಾದ ಅನುಭವ ವಿಶೇಷಗಳಿವೆ. ಮತ್ತು ಈ ಅನುಭವ ವಿಶೇಷಗಳ ದೃಷ್ಟಿಯಿಂದ ಹೆಣ್ಣು ಹೆಚ್ಚು ಅದೃಷ್ಟವಂತಳು ಎನ್ನುವುದು ಇಲ್ಲಿಯ ನಿಲುವು."[೯]

ಭೂಮಿಯ ಮೇಲೆ ಮೊಟ್ಟಮೊದಲು ಜನಿಸಿದ ಗೀತೆ "ಜೋಗುಳ", ಎಲ್ಲ ಕಲೆಯ ಮಾತೆ. ಎಂದು ಕಳಕಳಿಯಿಂದ ಚಿಂತಿಸುವ ವೈದೇಹಿಯವರು ಹೆಚ್ಚಿನ ಲಾಲಿ ಪದಗಳೆಲ್ಲ ಗಂಡುಮಗುವನ್ನು ಕುರತೇ! ಎಂದು ಅಚ್ಚರಿಪಡುತ್ತಾರೆ. ಜೊತೆಗೆ ಹುಟ್ಟಿದ ಹೊಸ ಮಗುವಿನಲ್ಲಿ ಗಂಡು–ಹೆಣ್ಣು ಭೇದವನ್ನೇ ಬಿಡೋಣ? ಬಹುಶಃ ಭೇದ ವರ್ಜಿಸುವ ಕೆಲಸ ಇಲ್ಲಿಂದಲೇ ಆರಂಭವಾಗಬೇಕು! ಎಂದು ಅಭಿಪ್ರಾಯ ಪಡುತ್ತಾರೆ. ಗಂಡು–ಹೆಣ್ಣು ಭೇದವನ್ನು ಮೀರಲು ಮೂಲಭೂತವಾಗಿ ಹುಟ್ಟಿನಿಂದಲೇ ಈ ಭೇದ ನಿರಾಕರಣೆಯಿಂದ ಸಾಧ್ಯವಾಗುತ್ತದೆ ಎನ್ನುತ್ತಾರೆ. ಸ್ತ್ರೀ **ಸಮಾನತೆಯ** ವಿಶೇಷ ದರ್ಶನವನ್ನು ಇಲ್ಲಿ ಕಾಣಬಹುದು.

ಕರೆದರೆ ಇವರಂತೆ ಕರೆಯಬೇಕು; ಬಯಸಿದರೆ ಈ ತೀವ್ರದಲ್ಲಿ ಬಯಸಬೇಕು; ತ್ಯಜಿಸಿದರೆ ಹೀಗೆ ತ್ಯಜಿಸಬೇಕು ಮತ್ತು ಎದುರಿಸಿದರೆ ಹೀಗೆ ಎದುರಿಸಬೇಕು ಎಂಬಂತೆ ಸಾಗಿದ ದೇವಭಕ್ತೆಯರಾದ ಮೀರ, ಅಕ್ಕಮಹಾದೇವಿ, ಬಹಿನಾ, ಆಂಡಾಳ್, ಸಹಜೇಬಾಯಿ ಲಾಲ್ ದೇವ್, ರಬಿಯಾ...ಇವರ ಬಗ್ಗೆ ಮಾತನಾಡುತ್ತಾ ಇವರೆಲ್ಲರೂ ತಮ್ಮ ಆರಾಧ್ಯ ದೈವವನ್ನು ಹಾಡುವುದೇ ಪ್ರೇಯಸೀ ಭಾವದಿಂದ ಎಂಬ

ಸಮಾನ ಅಂಶವನ್ನು ಗುರುತಿಸುತ್ತಾರೆ. ಅಂತೆಯೇ ಗಂಡು ಕೂಡ ಭಕ್ತಿಯಲ್ಲಿ ಹೆಣ್ಣೆಂದು ಭಾವಿಸಿ ಶರಣಸತಿ ಲಿಂಗಪತಿ ಭಾವದಲ್ಲಿ ಪೂಜಿಸುತ್ತಾಅರೆ. ಆದರೆ ಪೂಜಿಸುವ ದೈವ ಹೆಣ್ಣಾದರೆ ಅವಳು ಪ್ರೇಯಸಿಯಾಗಿ ಗಣಿಸದೆ ಮಾತೃಸ್ಥಾನದಲ್ಲಿಯೇ ಪೂಜಿಸಲ್ಪಡುವ ಆಶ್ಚರ್ಯವನ್ನು ಹೊರಗಿಡುತ್ತಾರೆ. ಭಕ್ತೆಯರ ಆರಾಧನೆಯಲ್ಲಿನ ನಿಷ್ಠತೆಯನ್ನು ಲೋಕ ಧಿಕ್ಕರಿಸುವ ಅವರ ಶಕ್ತಿಯನ್ನು ಪ್ರೇಮದ ಪರೀಕ್ಷೆಗಳಲ್ಲಿ ಅವರು ಗೆಲ್ಲುವ ದೃಢತೆಯನ್ನು ಮೆಚ್ಚುತ್ತಾ,

"ಬಹುಶಃ ಹೆಣ್ಣು ಸತ್ವವೇ ಹೀಗೆ, ಒಮ್ಮೆ ಮನಸ್ಸು ಸತ್ಯವಾಗಿಯೂ ನೆಟ್ಟಿತೆಂದರೆ ಮತ್ತೆ ಕೇಳುವುದಿಲ್ಲ. ದೇವರು ಅಲ್ಲಾಡಿದರೂ ಮನಸ್ಸು ಅಲ್ಲಾಡದು. ಭಕ್ತಿ ಪರಂಪರೆಯಲ್ಲಿ ನಾವು ಕಾಣುವುದು, ಇದನ್ನೇ ಅಷ್ಟೇ? ನೆಟ್ಟ ಮನಸ್ಸು, ನಿಗರ್ವ, ಸಖೀಸಖ ಭಾವ."[೧೦]

ಹೆಣ್ಣು ಚಂಚಲಳು ಎಂಬ ನಿಷೇಧಾತ್ಮಕ ಗುಣಕ್ಕೆ ಉತ್ತರವಾಗಿ ಸಿಗುವ ಭಕ್ತಿಯ ಪರಮಾವಧಿಯಲ್ಲಿ ಅದ್ದಿದ ನಿಶ್ಚಲತೆಯ ಭಕ್ತೆಯರನ್ನೇ ಮುಖಾಮುಖಿಯಾಗಿಸಿ ಬಿಡುತ್ತಾರೆ.

ಮೀರಾ, ಅಕ್ಕಮಹದೇವಿಯರಂತೆ ಲೋಕವನ್ನು ಧಿಕ್ಕರಸದೆಯೂ ತನ್ನ ಭಕ್ತಿಯ ಪರಾಕಾಷ್ಠೆಗೆ ಕಾಯಕವನ್ನು ಮರೆಮಾಡಿ ಜೋಪಾನ ಮಾಡಿದ, ಅತ್ತೆಯ ಮನೆಯಲ್ಲಿ ತೊತ್ತಾಗಿ ಬಾಳಿದ ಹೇಮರೆಡ್ಡಿ ಮಲ್ಲಮ್ಮನ ಧ್ಯಾನದ ವಿಶೇಷತೆಯು ಈ ಬಗೆಯದೆ.

ಲೋಕ ಬಿಡಿಸಿರುವ ಹೆಣ್ಣಿನ ಚಿತ್ರದ ಭ್ರಮೆಯನ್ನೇ ವಾಸ್ತವವಾಗಿಸಿರುವ ದುರಂತವನ್ನು ಸ್ತ್ರೀವೇಷವೆಂಬ ಲೇಖನದಲ್ಲಿ ವಿವೇಚಿಸುತ್ತಾರೆ. ಸಿನೆಮಾ, ನಾಟಕ ಎಲ್ಲವೂ ಹೆಣ್ಣನ್ನು ತಪ್ಪಾಗಿ ಗ್ರಹಿಸುತ್ತಾ, ಅದನ್ನೇ ನಿಜವೆಂಬಂತೆ ಚಿತ್ರಿಸುತ್ತಾ ಇದೆ. ಇದನ್ನೇ ನಂಬಿ ತಮ್ಮ ಹೊರ ಅಸ್ಥಿತ್ವವೇ ನಿಜ ಸ್ತ್ರೀತನ ಎಂದು ಭಾವಿಸುತ್ತಿರುವ ಹೆಣ್ಣು ಮೊದಲು ಬದಲಾಗಬೇಕು. ಸ್ತ್ರೀತನದ ಸತ್ಯ ಮಾತಿಗಿಂತ ನಡುವಳಿಕೆಯಲ್ಲಿ ಬಿಡಿಸಬೇಕು ಎಂಬ ಸಂದೇಶವಿದೆ

"ನಾವು ಬಿಡಿಸಿದ್ದೇವೆನ್ನುವ ಹೆಣ್ಣಿನ ಚಿತ್ರ ನಮ್ಮದೇ? ನಮ್ಮ ಬಗೆಗೇ ಇರುವ ಭ್ರಮೆಯನ್ನು ಬಿಟ್ಟು ನಡೆದಾಗ ಮಾತ್ರ ನಮ್ಮ ನಿಜ ಚಿತ್ರ ಬಿಡಿಸಿಯೇವೇನೋ. ಅದುವರೆಗೆ ಸೂಕ್ಷ್ಮವಂತ ಪುರುಷರಿಂದೇನು, ಸೂಕ್ಷ್ಮವಂತ ಸ್ತ್ರೀಯರಿಂದಲು [ಕೊನೇಪಕ್ಷ ಸಹಾನುಭೂತಿಗಾಗಿಯಾದರೂ] ನಾವು ಅಪೇಕ್ಷಿಸುವ ಗೌರ ನಮಗೆ ಸಿಗಲಿಕ್ಕಿಲ್ಲ, ಭ್ರೆಮಗಳಿರುವ ಹೆಣ್ಣು ಎಷ್ಟು ಅಸೂಕ್ಷ್ಮವೋ ಅಷ್ಟೇ ಸೂಕ್ಷ್ಮ, ಭ್ರಮೆ ಕಳಚುತ್ತಿರುವ ಹೆಣ್ಣು, ಆಕೆ ಭ್ರಮೆ ಕಳಚಿದ ಪುರುಷನಿಗಿಂತ ಹೆಚ್ಚು ಸೂಕ್ಷ್ಮ ಎಂಬ ಮಾತು ಇದೆ.

ನಾವು ನಮಗೆ ಪ್ರಾಮಾಣಿಕರಾಗಿರೋಣ. ಆಗ ನಾವು ಕಾಣುತ್ತೇವೆ. ಕಣ್ಣೇ ಇಲ್ಲದವರಿಗೂ ಕಾಣಬೇಕೆಂಬ ಉದ್ದೇಶವನ್ನೇ ತೊಡದೆಯೂ."[೧೧]

ಹೊರಗಿನ ಸ್ತ್ರೀಲಕ್ಷಣಕ್ಕಿಂತಲು ಅಂತರಂಗದ ಒಳಗಿನ ಸ್ತ್ರೀತ್ವಕ್ಕೆ ಹೆಚ್ಚಿನ ಮಾನ್ಯತೆ ನೀಡುತ್ತಾರೆ. ಹೆಣ್ಣು ತನಗೆ ತಾನು ಪ್ರಾಮಾಣಿಕವಾಗಿರಬೇಕು ಎಂಬುದು ಅವರ ನಿಲುವು.

ಎಷ್ಟೊಂದು ರಾಶಿ ತಿಂಡಿತಿನಿಸು ಅಡುಗೆಗಳನ್ನು ಕೇವಲ ನೆನಪಿನ ಆಧಾರದ ಮೇಲೆಯೇ ತಮ್ಮ ಹಾಡು ಹಸೆ ಕಣ್ಣೀರು ನಗೆಗಳ ಜೊತೆಗೆ ಸಾಗಿಸಿಕೊಂಡು ಬಂದಿರುವ ಸ್ತ್ರೀಯರು ವಾರಸುದಾರಿಕೆಯಿಲ್ಲದ, ಅಂಕಿತದ ಸಂಕುಚಿತತೆ ಇಲ್ಲದ ಹೃದಯ ವೈಶಾಲ್ಯವನ್ನು ತೋರಿದ್ದಾರೆ. ಕೇವಲ ನಾಲ್ಕು ರುಚಿಗಳನ್ನು ಮುಖ್ಯವಾಗಿಟ್ಟುಕೊಂಡು ಸಾಧಿಸಿದ ಹಲವು ಬಗೆಯ ರುಚಿಗಳು ಅವರ ಪ್ರತಿಭೆಯ ದ್ಯೋತಕವಾಗಿದೆ. ಪಾಕವಿಜ್ಞಾನದಲ್ಲಿ ಸ್ತ್ರೀಯರ ಕೊಡುಗೆಯ ಈ ವಿಶಾಲ ಮನೋಭಾವನೆಯನ್ನು ಹೊಗಳುತ್ತಾರೆ. ಭೀಮಸೇನ, ನಳ ಮಹಾರಾಜರರ ಅಡುಗೆ ನೆನೆಯುವಂತೆ ಇಂತಹ ಯಾವುದೇ ಹೆಣ್ಣು ಉಳಿಯದ ಔದಾರ್ಯವನ್ನು ನೆನೆಯುತ್ತಾರೆ. ಅಡುಗೆಯ ಕಲೆ ಗಂಡಸರದು ಎಂಬ ಚುಡಾಯಿಕೆ ಇದೆ. ಆದರೆ "ಸಾಮೂಹಿಕವಾಗಿ ಎಲ್ಲ ಹೆಂಗಸರಿಗೆ ಅಡಿಗೆ ತಿಳಿದಿರುವಂತೆ ಸಾಮೂಹಿಕವಾಗಿ ಎಲ್ಲ ಗಂಡಸರಿಗೂ ಆಡಲು ಎಲ್ಲಿ ತಿಳಿದಿದೆ? ಅದನ್ನೇ ಉದ್ಯೋಗವನ್ನಾಗಿ ಮಾಡಿಕೊಂಡ ಕೆಲವರನ್ನು ಬಿಟ್ಟರೆ?"[೧೨]

"ಆದರೂ ಪಾಕಪುಸ್ತಕವೆಂದರೆ ನಮ್ಮ ಗುಟ್ಟು ಗಂಡಸರಿಗೆ ಬಿಟ್ಟುಕೊಟ್ಟಂತೆ"[೧೩] ಎಂಬ ಗೆಳತಿಯ ಮಾತು ನೆನೆಯುತ್ತಾ ಅಡುಗೆಯೆಂದರೆ ಹೆಂಗಸರಿಗೆ ಮಾತ್ರ ಎಂಬ ನಂಬಿಕೆಯನ್ನು ಕೈಬಿಟ್ಟು, ಅಡುಗೆ ಮಾಡುವ ಗಂಡಸು ಹೆಣ್ಣಿನಂತೆ ಎಂದು ಕರೆಯುವ ಮಾತುಗಳ ಮೂಲಕ ಹೆಣ್ಣನ್ನು ಗಂಡನ್ನು ತಪ್ಪಾಗಿ ಅರ್ಥೈಸದೆ "ಯಾರು ಯಾರಿಗೆ ಹೊಟ್ಟೆಯುಂಟೋ, ರಸಗ್ರಾಹಿ ತಂತುಗಳಿವೆಯೋ, ಆರೋಗ್ಯ ಬೇಕೋ, ಅವರೆಲ್ಲರೂ ಪಾಕಜ್ಞರಾಗುವುದರಲ್ಲಿ ತಪ್ಪೇನಿದೆ?."[೧೪] ಏಕೆಂದರೆ ಅಡುಗೆಯ ಸಂಪೂರ್ಣ ಯಶಸ್ಸು ಇರುವುದು ಅಡುವವರ ಮಾನಸಿಕ ಸ್ವಾಸ್ಥ್ಯ ಶಕ್ತಿ ಮತ್ತು ರಸಪ್ರಜ್ಞೆಯಲ್ಲಿ ಅಪಾರ ತಾಳ್ಮೆಯಲ್ಲಿ. ಉಣ್ಣುವವರ ಹಸಿವೆಯಲ್ಲಿ. ಎಂದು ಅಡುಗೆ ಮನೆಯಲ್ಲಿ ಗೃಹತಪಸ್ವಿನಿಯಾಗಿ ಹೆಣ್ಣು ಸಾಧಿಸಿದ ಯಶಸ್ಸು ಮತ್ತು ಬದಲಾಗುವ ಕಾಲದಲ್ಲಿ ಬದಲಾಗಬೇಕಾದ ಗಂಡು- ಹೆಣ್ಣಿನ ಪರಿಕಲ್ಪನೆಯ ಬಗ್ಗೆ ವಿವರಿಸುತ್ತಾರೆ.

ಇಂತಹ ಜೀವಪ್ರೀತಿಯಿರುವ, ನಿಸ್ವಾರ್ಥ ಬುದ್ಧಿಯ, ವಿಶಾಲ ಮನೋಭಾವನೆಯ ಹೆಣ್ಣು ಅಧಿಕಾರ ಸ್ಥಾನಕ್ಕೆ ಬಂದರೆ, ಆ ಪ್ರಪಂಚ ಹೇಗಿರಬಹುದು? ಸಹಜವಾಗಿಯೇ ಅದು ಈ ಎಲ್ಲ ಗುಣಗಳನ್ನು ಮೈಗೂಡಿಸಿಕೊಳ್ಳುತ್ತದೆ ಅಲ್ಲವೇ. ಯುದ್ಧಭೀತಿಯೇ ಇಲ್ಲದ ಪ್ರಪಂಚ. ಕಾದುವ ಸೈನಿಕರಿಲ್ಲದ, ಹಾಡುವ ಸೈನಿಕರ ಪ್ರಪಂಚದ ನಿರ್ಮಾಣ, ಹೆಣ್ಣು ಸತ್ವವಿರುವ ವ್ಯಕ್ತಿಯಿಂದ ಮಾತ್ರ ಸಾಧ್ಯವಿದೆ.

ಆದ್ದರಿಂದ ಪಾಕಿಸ್ತಾನದ ಪ್ರಾಧಾನಿಯಾಗಿ ಬೆನಜೀರ್ ಬುಟ್ಟೋ ಆಯ್ಕೆಯಾದಾಗ ಆ ದೇಶದಲ್ಲಿ ಆಮೂಲಾಗ್ರ ಬದಲಾವಣೆಯಾಗುವುದೆಂಬ ಭರವಸೆಯನ್ನು ತೋರುತ್ತಾರೆ. ಗಂಡು ಅಧಿಕಾರವನ್ನು

ಬಳಸಿಕೊಳ್ಳುವುದಕ್ಕೂ, ಹೆಣ್ಣು ಅಧಿಕಾರವನ್ನು ಬಳಸಿಕೊಳ್ಳುವುದಕ್ಕೂ ಇರುವ ವ್ಯತ್ಯಾಸಕ್ಕೆ ಉತ್ತಮ ಉದಾಹರಣೆಯಾಗಿ ನಿಲ್ಲುವಳೆಂಬ ಭರವಸೆಯನ್ನು ತೋರುತ್ತಾರೆ.

ರಾಜಕೀಯ ಗೃಹಬಂಧನದಲ್ಲಿದ್ದ ಬೆನಜೀರ್ ಬುಟ್ಟೋ, ಸಾಮಾಜಿಕ ಗೃಹಬಂಧನದಲ್ಲಿ ಇಡೀ ಆಯುಷ್ಯ ಕಳೆಯುವ ಲಕ್ಷ ಲಕ್ಷ ಮಹಿಳೆಯರನ್ನು ಮುಕ್ತಗೊಳಿಸಬಲ್ಲ ಏಕೈಕ ಶಕ್ತಿಯಾಗಿ ಕಾಣುತ್ತಾಳೆ. ಪಾಕಿಸ್ತಾನ ತನ್ನನ್ನು ಜ್ಯಾತ್ಯಾತೀತ ರಾಷ್ಟ್ರ ಎಂದು ಘೋಷಿಸಿಕೊಂಡು ಅಲ್ಲಿನ ಮಹಿಳೆಯರಿಗೆ ಮತೀಯ ಶಾಸ್ತ್ರಗಳ ಬಿಗಿ ಬಂಧನವನ್ನು ತುಸು ಸಡಿಲಗೊಳಿಸಿ ಸ್ವಾತಂತ್ರ್ಯವನ್ನು ನೀಡುತ್ತಾಳೋ, ಅಥವಾ ? ಅಧಿಕಾರವ್ಯಾಮೋಹದಲ್ಲಿ ಸ್ವಾರ್ಥಿಯಾಗದಂತೆ ಜಾಗರೂಕಳಾಗಿರಬೇಕೆಂಬ ಆತಂಕ ಮತ್ತು ಬೇಡಿಕೆಯೂ ಇಲ್ಲಿದೆ.

"ವೈದೇಹಿಯವರ ಒಟ್ಟು ಸಾಹಿತ್ಯವನ್ನು ಸ್ಥೂಲವಾಗಿ ವಸ್ತುವನ್ನು ಆಧಾರವಾಗಿ ಇಟ್ಟುಕೊಂಡು ಎರಡು ವಿಭಾಗಗಳಲ್ಲಿ ಗುರುತಿಸಬಹುದು, ಒಂದು ಸ್ತ್ರೀ ಲೋಕದ ಸೂಕ್ಷ್ಮಗಳ ಹುಡುಕಾಟ, ಎರಡನೆಯದು ಬದುಕಿನ ಹೋರಾಟವನ್ನು ಹೆಣ್ಣು ಎದುರಿಸುವ ಬಗೆ"[೧೫]

ದುಡಿತ ಬಿಟ್ಟು ಬೇರೆನೂ ತಿಳಿಯದ ಹೆಣ್ಣುಗಳ ನೆನಪಿನ 'ಮೆರವಣಿಗೆ'ಯಲ್ಲಿ ಬದುಕಿನ ಹೋರಾಟವನ್ನು ಬೆನ್ನುಹಾಕದೆ ದಿಟ್ಟವಾಗಿ ಎದುರಿಸಿ, ಚೈತನ್ಯದ ಚಿಲುಮೆಗಳಂತೆ ಜೀವಿಸಿದ ಹೆಣ್ಣುಗಳಿದ್ದಾರೆ. ಸ್ತ್ರೀ ಸಂಸ್ಕೃತಿಯ ದಿಟ್ಟ ಉದಾಹರಣೆಗಳಾಗಿ ಮೆರವಣಿಗೆ ಮಾಡುತ್ತಿವೆ.

ಅಲ್ಲಿ ಕೃಷ್ಣಿ ಇದ್ದಾಳೆ, ಯಾವ ನಿಯಮಗಳಿಗೂ ಬಗ್ಗದೆ, ಹೆದರದೆ ಬದುಕಿದ್ದಾಳೆ. ಅವಳ ಗಂಡ ಬಿಟ್ಟು ಹೋದರು ಚಿಂತೆಯಿಲ್ಲದೇ ಬದುಕಿನ ಶ್ರದ್ಧೆಯಿಂದ ನಡೆದು ತನ್ನ ರಟ್ಟೆಯ ಬಲದಿಂದಲೇ ಮಕ್ಕಳನ್ನು ಸಾಕಿದವಳು. ಹಿರಿಯಮಗಳು ಬಚ್ಚಿ ಕುಡುಕು ಗಂಡನ ಬಳಿ ಕಣ್ಣೀರಿನ ಬದುಕು ನಡೆಸುವಾಗ ಅವಳನ್ನು ಅಲ್ಲಿಂದ ಕರೆತಂದು ಸ್ವತಂತ್ರ ಬದುಕಿಗೆ ಅವಳನ್ನು ತೆರೆದವಳು. ಸಮಾಜ ಕಲಿಸಿದ ಪಾಠ ಅವಳಿಗೆ ಬೋಧಿಸದೆ ಅವಳದೆ ದಾರಿಯನ್ನು ಕಂಡುಕೊಳ್ಳಲು ಬಿಟ್ಟವಳು.

ಅಮ್ಮಿ ಸ್ವಚ್ಛಂದ ಬದುಕಿಯೂ ಸುಖಕಾಣದೆ ಸತ್ತವಳು. ಎಳೆ ವಯಸ್ಸಿನಲ್ಲಿಯೇ ವಿಧವೆಯಾದ ಸರಸೋತಕ್ಕ , ಮೈಮನದ ಕೂಗುಗಳನ್ನು ಸಮಾಧಿಮಾಡಿ, ಎಲ್ಲರ ಮನೆಯ ಕೆಲಸಗಳಲ್ಲಿ ಕೈಗೂಡಿಸಿ, ಗೌರವಕ್ಕೆ ಪಾತ್ರಳಾಗಿ ಸತ್ತವಳು, ಕೈತುಂಬ ಬಳೆಯೊಂದಿಗೆ ಸಂಭ್ರಮದಿಂದ ಹೆಜ್ಜೆಹಾಕುತ್ತಿದ್ದ ಚಂದು. ತುಳಸಿ ಹಬ್ಬದ ದಿನ ಮಂಟಪ ಕಟ್ಟಿ ಸಂಭ್ರಮಿಸುತ್ತಿದ್ದ ಅರೆಮರುಳಿ ಶುಕ್ರಿ, ಭತ್ತಕುಟ್ಟುತ್ತಾ ಕೂಳಿಗೆ ಅಕ್ಕಿಲ್ಲೆ ಎಂದು ಹಾಡುವ ಎಷ್ಟೋ ಖಿನ್ನತೆ ತುಂಬಿ ಮಂಕುಬಡಿದ ಮುಖಗಳಲ್ಲಿ ಜೀವಂತಿಕೆಯನ್ನೇ ಸ್ವಂತವಾಗಿಸಿಕೊಂಡ, ಸಿಂಗಾರದ ಹೂ ಸಿಕ್ಕಿಸಿ ಸಂತಸ ಪಟ್ಟ ಇವರಂತ ಸ್ತ್ರೀಯರು ಕಟ್ಟಿದ ಸಂಸ್ಕೃಯ ಸ್ವರೂಪ ಎಂದರೆ

"ಇವರು ಯಾರೂ ದುಡಿತ ಬಿಟ್ಟು ಬೇರೆ ತಿಳಿದವರಲ್ಲ, ಬದುಕಿದ್ದು ಎಂದರೆ ದುಡಿದದ್ದು, ತಪ್ಪಿಸಿಕೊಂಡದ್ದಲ್ಲ, ಮನುಷ್ಯ ಗುಣಗಳನ್ನು ಕಡೆಯುತ್ತ ಸವೆಯುತ್ತಾ ಅದರೆ ಎಲ್ಲ ಪರಿಣಾಮಗಳನ್ನು ಸ್ವೀಕರಿಸುತ್ತ ಮತ್ತು ನೀಡುತ್ತ ಜೀವ ತೇದರೂ..... ಸ್ವಂತ ಕಂಠದಿಂದ ಜಗಳಾಡಿದರೂ, ಪ್ರೀತಿ ಮಾಡಿದರೂ, ನರಳಿದರೂ, ಹಾಡಿದರೂ, ಭಾಷೆ ಕಟ್ಟೋಣಕ್ಕೆ ತಮ್ಮದೇ ಕೊಡುಗೆಯನ್ನು ಯಾವ ದೊಡ್ಡಸ್ತಿಕೆ ತೋರದೆ, ಉಣುವ ತಿನುವ ಕ್ರಿಯೆಗಳಷ್ಟೇ ಸಹಜವಾಗಿ ನೀಡಿದರು. ಯಾವ ಘಂಟಾಘೋಷಣೆಯೂ ಇಲ್ಲದೆ ಸ್ವಾವಲಂಬನೆಯನ್ನು ಸಮಾನತೆಯನ್ನೂ ತಮ್ಮದೇ ರೀತಿಯಲ್ಲಿ ಸಾಧಿಸಿದರು. ಹಾಗೆ ಸಾಧಿಸುವಲ್ಲಿ ಸುಳ್ಳು ನಂಬಿಕೆಗಳು ಕುಂಡದಲ್ಲಿ ಬಿದ್ದು ಉರಿಯುವುದೇ ಪಾವನವೆಂಬ ಭ್ರಾಂತಿಯುಲ್ಲಿ ಗಳಗಳನೆ ಉರಿದುಹೋದರು."೧೬

ಈ ರೀತಿ ಬದುಕಿದ ಅವರಿಗೆ ಕೊಡುವ ಯಾವ ಬಹುಮಾನಗಳು, ಅವರಲ್ಲಿ ಯಾವ ಬದಲಾವಣೆಯೂ ಕಾಣುವುದಿಲ್ಲ. ಕಷ್ಟ- ಸುಖಗಳನ್ನು ನಿರ್ಲಿಪ್ತವಾಗಿದ್ದು ಬಿಡುವ, ಚಿಕ್ಕಿಯಂತವರಿಗೆ ದುಡಿಮೆಯೇ ಬದುಕನ್ನು ಕುರಿತ ಶ್ರದ್ಧೆಯಾಗಿದೆ.

ಎಂಭತ್ತೊಂಭತ್ತು ವರ್ಷದ ಉಳ್ಳೂರು ಮೂಕಾಂಬಿಕಮ್ಮ ಎಂಬ ಅಜ್ಜಿಯ ಬಗ್ಗೆ ಮಾತನಾಡುತ್ತಲೇ ಹೆಣ್ಣಿನ ಸಂಸ್ಕೃತಿಯ ವಿಶಿಷ್ಟ ಅಂಶಗಳನ್ನು 'ಮೂಕಜ್ಜಿ ಎಂಬ ವಾಕ್ ಅಜ್ಜಿ' ಲೇಖನ ತಿಳಿಸುತ್ತದೆ. ಮೂಕಜ್ಜಿ ಆಶುಕವಯಿತ್ರಿ, ಕತೆ ಮಾತಿನ ಗೂಡು. ಇಂದಿಗೂ ನಮ್ಮ ಹಳ್ಳಿಗಳ ಅಂತರಾಳದಲ್ಲಿ ಹುಡುಕಿದರೆ ಇವಳಂತೆಯೇ ಒಳ ಒತ್ತಡದಿಂದಲ್ಲೇ ಗಟ್ಟಿ ವಜ್ರಗಳಾಗಿ ಮಾರ್ಪಟ್ಟ ಚೇತನಗಳು ಸಿಗುತ್ತಾರೆ. ನಿಂತ ನಿಂತಲ್ಲೇ ಕುಳಿತು, ಕುಳಿತಲ್ಲೇ ಹಾಡು ಕಟ್ಟುವವರು, ಕಥೆ ದಾಟಿಸುವವರು, ಪ್ರತಿಯೊಂದಕ್ಕೂ ಸ್ಪಂದಿಸುವ, ಪ್ರತಿಕ್ರಿಯಿಸುವ ಹೆಣ್ಣಿನೆಚ್ಚರವನ್ನು ಕಳೆಯದ ಜೀವಗಳಿಗೆ ಸಾಕ್ಷಿಯೆಂಬಂತೆ ನಿಂತಿದ್ದಾಳೆ; ಸ್ತ್ರೀ ಸಂಸ್ಕೃತಿಯನ್ನು ಕಟ್ಟುತ್ತಾ.

ಅಕ್ಷರ ಸಂಸ್ಕೃತಿಯ ಗೋಚರವೇ ಇಲ್ಲದೆ ಮಹಿಳೆಯರಲ್ಲಿ ಎಂತೆಂತಹ ಕವಿಗಳು ಇದ್ದಾರೆ ಎನ್ನುತ್ತಾ ಆಶಯುಕವಿಯಾಗಿದ್ದ ತನ್ನ ಅಜ್ಜಿಯೊಬ್ಬರ ವಿಚಾರವನ್ನು ಎಂ.ಕೆ. ಇಂದಿರಾರವರು ನೆನಪಿಸಿಕೊಳ್ಳುತ್ತಾರೆ. " ತನಗೆ ಅನಂತಯ್ಯ ಎಂಬ ಮಾವ ಅವನಿಗೆ ಮೈ ತುಂಬಾ ರೋಮ, ಸುಬ್ಬಿ ಎಂಬ ಹೆಂಡತಿ ಆತ ವೃತ್ತಿಯಲ್ಲಿ ಶೇಕ್‌ದಾರ. ಒಳ ಹೆಸರು "ಅಂತ" ಅಜ್ಜಿಯೊಡನೆ ತನ್ನ ಬಗ್ಗೆ ಹಾಡುಕಟ್ಟು ಎಂದು ಪೀಡಿಸಿದ. ಅಜ್ಜಿ ಹಾಡು ಕಟ್ಟಿದಳು.

'ಅಂತನೋ ಹನುಮಂತನೋ
ಜಾಂಬವಂತನೋ ಸುಬ್ಬಿಕಾಂತನೋ
ಮಾರನೋ ಶೇಕದಾರನೋ'
ಪತ್ತೆದಾರನೋ ಪಕ್ಕಾ ಚೋರನೋಚೆಗೆ

ಅಕ್ಷರ ಸಂಸ್ಕೃತಿಯ ಉಳಿದ ಸಾಹಿತಿಗಳನ್ನು ಪರಿಚಯಿಸುತ್ತಾ ಸ್ತ್ರೀ ಸಾಹಿತ್ಯ ಚರಿತ್ರೆಯನ್ನು ಕಟ್ಟಲು ಪ್ರಯತ್ನಿಸುತ್ತಾರೆ. ಒಮ್ಮೆ ಯಾರೋ ಅವರ ಬಳಿ "ಗಂಡಸರ ಸಾಹಿತ್ಯದಲ್ಲಿರುವಂತೆ ಮಹಿಳೆಯರ ಸಾಹಿತ್ಯದಲ್ಲಿ ಒಗರು ಘಾಟು ಒಂದೂ ಇರುವುದಿಲ್ಲ. ನಿಮ್ಮ ಸಾಹಿತ್ಯ ಬರೀ ಸಪ್ಪೆ ಸಪ್ಪೆ ಯಾಕೆ?"[೧೭] ಎಂದರಂತೆ, ಅದಕ್ಕೆ ಇಂದಿರಾ "ಸಹಜವಲ್ಲವೆ? ಗಂಡಸರು ಸಿಗರೇಟು ತಂಬಾಕು ಸೇದಿಕೊಂಡೇ ಬರೆಯಲು ಕೂಡುತ್ತಾರೆ. ಬರವಣಿಗೆಯಲ್ಲಿ ಒಗರು ಘಾಟು ಎಲ್ಲ ತನ್ನಷ್ಟಕ್ಕೇ ಬರುತ್ತದೆ. ಆದರೆ ನಾವು ಬರಿಯ ಬಾಳೆಹಣ್ಣು ತಿಂದು ಹಾಲು ಕುಡಿದು ಬರೆಯಲು ಕೊಡುವವರು. ಅದು ಸಪ್ಪೆಯಾಗದೆ ಮತ್ತೇನಾದೀತು?" ಎಂದು ಪುರುಷರ ಅಸಡ್ಡೆಯ ಎದುರು ಸ್ತ್ರೀಸಾಹಿತ್ಯದ ಪರ ವಕಾಲತ್ತು ವಹಿಸುತ್ತಾರೆ. ಹಾಗೆಯೇ ಮಹಿಳಾ ಸಾಹಿತ್ಯದ ಸತ್ವವನ್ನು ಹೇಳುತ್ತಾರೆ.

ಅಲಂಕಾರ ಇತ್ಯಾದಿ ಸೌಂದರ್ಯ ಪ್ರಜ್ಞೆಗಳಲ್ಲಿ ಹೆಣ್ಣು ತೋರುವ ಅಸ್ಥೆಯನ್ನು ಲೇವಡಿ ಮಾಡುವ ವ್ಯವಸ್ಥೆಯನ್ನೇ ಅಲ್ಲಾಡಿಸುವ ಸಂಗತಿಯನ್ನು ಅವರ ರೇಶ್ಮೆ ಸೀರೆಯ ಕುರಿತ. ಎಂಬ ಲೇಕನವು ಸೂಕ್ಷ್ಮವಾಗಿ ಚಿಂತಿಸುತ್ತದೆ. ಸ್ಪಷ್ಟವಾಗಿ ಉತ್ತರಿಸಲಾಗದ ವಿಷಯ ರೇಶ್ಮೆಯದು ರೇಶ್ಮೆ ಬೇಡ ಎಂದು ಬಿಟ್ಟರೆ ಈ ದೇಶದ ಒಂದು ಕಲೆ ನಾಶಕ್ಕೂ ನಾವೇ ಕಾರಣರಾಗುತ್ತೇವೆ. ಈಗಾಗಲೇ ಈ ದೇಶ ಢಾಕ್ಕಾ ಮಸ್ಲಿನ್ ಬಟ್ಟೆಯ ಕಲೆಯನ್ನು ಕಳೆದು ಕೊಂಡಿದೆ. ಹಾಗಾಗಿ ಕೈಗಾರಿಕೆ ಗಟ್ಟಿ ನಿಲ್ಲಬೇಕೆಂದರೆ ರೇಶ್ಮೆ ಸವೆಸುವವರಿರಬೇಕು. ಆದರೆ ಅದುನ್ನು ತೊಡುವ ಸಂದರ್ಭದ ಪ್ರಜ್ಞೆಯೂ ಬೆಳೆಯಬೇಕು ಇಲ್ಲವಾದರೆ ಮಹಿಳೆಯ ಸಮ್ಮೇಳನಗಳನ್ನು "ರೇಶ್ಮೆಸೀರೆಗಳ ಸಮ್ಮೇಳನ" ಇತ್ಯಾದಿಯಾದ ಲಘು ಚುಡಾಯಿಕೆಗೆ ತುತ್ತಾಗಬೇಕಾಗುತ್ತದೆ.

ಹಿಂದಿನ ಕಾಲದಲ್ಲಿ ರೇಶ್ಮೆ ಸೀರೆಯು ಉಟ್ಟ ಹೆಂಗಸ್ಸಿನ ಸೌಂದರ್ಯ ಹೆಚ್ಚಿಸುವುದರ ಜೊತೆಗೆ ಆ ಹೆಂಗಸ್ಸಿನ ಯಜಮಾನನ ಅಂತಸ್ತನ್ನು ಪ್ರತಿನಿಧಿಸುವ ವಸ್ತುವಾಗಿತು. ಒಂದು ರೇಶ್ಮೆಸೀರೆಯನ್ನು ಕೊಳ್ಳಬೇಕು ಎಂಬುದು ಹೆಣ್ಣೊಬ್ಬಳ ಜೀವಿತದ ಕನಸು ಆಗಿರುತ್ತಿತ್ತು. ಅದನ್ನು ಆರಿಸಿಕೊಳ್ಳುವಾಗಲೂ ತುಂಬಾ ಎಚ್ಚರಿಕೆಯಿಂದ ಸಾಕಷ್ಟು ಸಮಯದೊಂದಿಗೆ ಆರಿಸಿ, ಜೋಪಾನವಾಗಿ ರಕ್ಷಿಸಿಡುತ್ತಿದ್ದಳು ಆ ರೇಶ್ಮೆಸೀರೆಯು ಮದುವೆ ಮುಂಜಿಯಂತಹ ಮಂಗಳಕಾರ್ಯಕ್ಕೆ ಯೋಗ್ಯ ಎಂದು ಹಿಂದಿನಿಂದಲೂ ಬಳಸಿಕೊಂಡು ಬಂದದ್ದು. ಹಾಗಾಗಿ ಸಂದರ್ಭೋಚಿತವಾಗಿ ರೇಶ್ಮೆ ಉಟ್ಟು ಆ ಕಲೆಯನ್ನು ಉಳಿಸಿ ಬೆಳೆಸಬೇಕಾದ ಜವಾಬ್ದಾರಿಯು ಈ ದೇಶದ ಹೆಂಗಳೆಯರ ಮೇಲೇ ಅಪಾರವಾಗಿದೆ. ರೇಶ್ಮೆ ಸ್ತ್ರೀಸಂಸ್ಕೃತಿಯಲ್ಲಿ ವಿಶೇಷವಾದ ಸ್ಥಾನ ಗಳಿಸಿದೆ.

ಪ್ರತಿಯೊಂದು ಹೆಣ್ಣಿಗೂ ಖುಷಿ ಕೊಡುವ ಬಳೆ ಹಬ್ಬ, ಜಾತ್ರೆಗಳಲ್ಲಿ ಏನಿಲ್ಲದಿದರೂ ಹೊಸ ಬಳೆ ಬೇಕೇ ಬೇಕು. ರೇಷ್ಮೆ ಸೀರೆಯಂತೆ ವರ್ಗಭೇದ ಮಾಡದ ಬಳೆಗಳು ಎಲ್ಲರಿಗೂ ಸಂತಸದ ಬುಗ್ಗೆಯನ್ನು

ನೀಡುತ್ತವೆ. ಜೊತೆಗೆ ಯಜಮಾನಿಯ ಮುಗ್ಗಟ್ಟಿನಲ್ಲಿ ಕೇವಲ ಒಂದು ಜಾತಿಯ ಬಳೆ ತೊಡಿಸಿಕೊಳ್ಳುವ ವಿಚಾರದಲ್ಲಿ ಕೆಲವರು ಅತ್ತಿದ್ದು ಇದೆ. ಈ ಸಂಭ್ರಮ ಅನಂತವಾದದ್ದು.

ಹಾಗೆಯೇ ಜಾತ್ರೆಯು ಹೆಂಗಳೆಯರ ಜೀವನದ ಬಹು ಮುಖ್ಯ ಸ್ಥಳವಾಗಿದೆ. ಜಾತ್ರೆ ಹೊಸ ಹೊಸ ಫ್ಯಾಶನ್‌ಗಳನ್ನು ಹರಡುತ್ತಾ ಬರುವ ಕೆಲಸವನ್ನು ನಿರ್ವಹಿಸುತ್ತದೆ. ಜಾತ್ರೆಯು ಹುಡುಗರಿಗಿಂತ ಹುಡುಗಿಯರಿಗೆ ಹೆಚ್ಚು ಆಕರ್ಷಣೀಯ ವಿಷಯವಾಗಿದೆ. ತಮಗೆ ಇಷ್ಟವಾದುದನ್ನು ಕೊಳ್ಳುವ ತಾಣವಾಗಿದೆ. ತಮಗೆ ಬೇಕಾದ ಆಟದ, ಅಲಂಕಾರದ ವಸ್ತುಗಳನ್ನು ಚೌಕಾಸಿ ಮಾಡುತ್ತಾ ಕೊಳ್ಳುವ ತಾಣವಾಗಿರುತ್ತದೆ.

ಅಷ್ಟೇ ಅಲ್ಲದೆ ಹೆಂಗಳೆಯರಿಗೆ ಪ್ರಪಂಚ ಜ್ಞಾನವನ್ನು ನೀಡುವ ಸ್ಥಳವು ಆಗಿದೆ. "ಕೈಗಾರಿಕಾ ಕ್ರಾಂತಿಗೀಂತಿ ಅಂತೆಲ್ಲ ಹೇಳುತ್ತಾರಲ್ಲ, ಅದರ ವಾಸನೆ ಮೊದಲು ಹೊಡೆಯುವುದೇ ಜಾತ್ರೆಯಲ್ಲಿ. ಹೆಚ್ಚಿಗೆ ಬೇಡ, ಕ್ರಾಂತಿ ಬೆಳೆಯಲು ಒಂದು ಬಳೆಯಂಗಡಿಯೇ ಸಾಕು. ಬಳೆಯಂಗಡಿಯೆಂದರೆ ಬಳೆಯಂಗಡಿ ಮಾತ್ರ ಆಗಿರುವುದಿಲ್ಲವಲ್ಲ. ಇಲ್ಲದೆಲ್ಲ ಇರುತ್ತದೆ. ಸಧ್ಯ ಒಂದು ರಿಬ್ಬನನ್ನೇ ತೆಗೆದುಕೊಳ್ಳುವ, ಕೇವಲ ರಿಬ್ಬನಿನಲ್ಲಿಯೇ? ಎಷ್ಟೆಲ್ಲ ಬಗೆಯ ಕ್ರಾಂತಿಯಾಗಿ ಬಿಟ್ಟಿತು! ಅದನ್ನೇ ಎಲ್ಲದಕ್ಕೂ ಹೊಂದಿಸಿ ನೋಡಿ, ಬೃಹತ್ ಕ್ರಾಂತಿ ತಿಳಿಯುತ್ತದೆ.!"೧೮ ಎಂಬ ಬೇಬಿಯಕ್ಕನ ಲೆಕ್ಚರ್ ಇಡೀ ಕೈಗಾರಿಕಾ ಕ್ರಾಂತಿಯನ್ನೇ ತಾನು ಬಳಸುವ ವಸ್ತುವಿನ ಮೂಲಕ ಅರಿಯುವ, ವಿವರಿಸುವ ವಿಶೇಷತೆಯನ್ನು ಕಾಣಬಹುದು. ಒಂದು ವಸ್ತುವನ್ನು ಹುಡುಗಿಯರು ಕೊಳ್ಳುವುದಿಲ್ಲ ಎಂದು ನಿರಾಕರಿಸಿದರೆ ಸಾಕು, ಇಡೀ ಅರ್ಥವ್ಯವಸ್ಥೆಯ ಕೊಂಡಿಯ ಮೇಲೆಯೇ ಅದು ಪರಿಣಾಮ ಬೀರುತ್ತದೆ.

೪ ಸ್ತ್ರೀ ಸಮಾನತೆಯ ಹೋರಾಟ

ಬದಲಾಗುತ್ತಿರುವ ಸಮಾಜದಲ್ಲಿಯೂ ಹೆಣ್ಣಿನ ಬದಲಾವಣೆಯ ಸ್ಥಿತಿಗಳನ್ನೇ ಚಿತ್ರಿಸುವ ಅವರ ಲೇಖನಗಳು ವಿಶಿಷ್ಟವಾಗಿವೆ. "..........ಮೇಜು ಕುರ್ಚಿಯೆಂಬುದು ಪುರುಷರ ಸಂಕೇತ, ಹುದ್ದೆಯ ಸಂಕೇತ, ಆಫೀಸಿನ ಸಂಕೇತ, ದರ್ಪದ ಸಂಕೇತ."೧೯ ಆಗಿದ್ದವು. ಬಿ.ಎ. ಮುಗಿಸಿದ ಹೆಣ್ಣಿಗೆ ಬಂದು, ನಂತರ ಎಲ್ಲರ ಹಕ್ಕಾಗಿ ಪರಿಣಮಿಸಿಯೂ ಅವಳದೇ ಆಗಿ ಉಳಿಯದ ಕತೆಯನ್ನು ನಿರೂಪಿಸುತ್ತದೆ. ಮೊದಲ ದಿನಗಳಲ್ಲಿ ಈ ಮೇಜು ಕುರ್ಚಿಗಳು ಹೆಣ್ಣಿನ ಜೀವನದಲ್ಲಿ ತಂದ ತಲ್ಲಣವನ್ನು ನಿರೂಪಿಸುತ್ತಾರೆ. ಒಂದು ಕಾಲದಲ್ಲಿ ಕುರ್ಚಿ ಮೇಲೆ ಕುಳಿತ ಹೆಣ್ಣು ಅಡಿಗೆ ಮಾಡಿಯಾಳೇ ಎಂದು ಮದುವೆ ನಿರಾಕರಣೆಗೆ ಒಳಗಾಗುವ ಹೆಣ್ಣು, ಈ ಮೇಜನ್ನು ತನ್ನದಾಗಿಸಿಕೊಳ್ಳಲು ಶಾಲ್ಮಲಿ ನಡೆಸಿದ ಹೋರಾಟ, ಲೇಡಿಯೊಬ್ಬಳು ಮೊದಲು ಅದರಲ್ಲಿ ಕುಳಿತಾಗ ಎದ್ದ ಆಲೋಚನೆ, ವಾದಗಳು, ಇವೆಲ್ಲವೂ ಹೆಣ್ಣು ತನ್ನ ಸ್ಥಿತಿಯನ್ನು

ಮುಂದುವರೆಸಿಕೊಳ್ಳಲು ಮಾಡಿದ ಹೋರಾಟಗಳನ್ನು ತಿಳಿಸುತ್ತದೆ. ವಾಚು ಕಟ್ಟಲು ನಿರ್ಬಂಧವಿದ್ದ ಕಾಲದಿಂದ ಹೆಣ್ಣು ಹೊಸ ಕಾಲಕ್ಕೆ ಸೇರಿದ ಹೆಣ್ಣಾಗಲೂ ಸತತ ಪ್ರಯತ್ನವಿದೆ.

ಕಾಲದ ಬದಲಾವಣೆಯಲ್ಲಿ ಸ್ತ್ರೀ ಜಗತ್ತಿನಲ್ಲಿ ಆದ ಪರಿವರ್ತನೆಯ ಮಹತ್ತೇ ಎಲ್ಲಕ್ಕಿಂತಲು ಶ್ರೇಷ್ಠವಾದ ಬದಲಾವಣೆ. ಮೊದಲು ವಿದ್ಯೆ, ನಂತರ ನೌಕರಿ, ಇವುಗಳ ಜೊತೆಗೆ ಮಡಿ-ಮೈಲಿಗೆಯ ಲಕ್ಷ್ಮಣರೇಖೆ ದಾಟಿ ಹೆಣ್ತನವನ್ನು ಗೌರವಿಸುವಂತೆ ಕಾಲವಾಗಿ ಬದಲಾದ ಪರಿ. ಅವರ ಅಸ್ಪೃಶ್ಯರು ಕಾದಂಬರಿಯಲ್ಲಿಯೂ ನಿರೂಪಿತವಾಗಿದೆ. ಹಾಗೆಯೇ ವಿಧವೆಯರು ರವಿಕೆ ತೊಡುವುದೇ ಅಪರಾಧವೆಂಬ ಕಾಲದಿಂದ ರವಿಕೆ ತೊಡುವ, ಕೂದಲು ಉಳಿಸಿಕೊಳ್ಳುವ, ಚಿನ್ನದ ಬಳೆ ತೊಡುವ ಕುಂಕುಮದ ಬದಲು ಕೆಂಪು ಬೊಟ್ಟು ಇಡುವ ರೀತಿಯಲ್ಲಿ ಆಗಿರುವ ಬದಲಾವಣೆ ಹೆಣ್ಣಿನ ಮೇಲಿನ ಅನೇಕ ನಿರ್ಬಂಧಗಳನ್ನು ಸಡಿಲಿಸಿ ಅವಳನ್ನು ಉಸಿರುಗಟ್ಟಿಸುವ ವಾತಾವರಣದಿಂದ ಮುಕ್ತಗೊಳಿಸಿ ಸ್ವಾತಂತ್ರ್ಯದ ದಾರಿಯನ್ನು ಕಾಲ ತೋರಿದೆ.

ಹೀಗೆ ವೈದೇಹಿಯವರ ಬರಹಗಳು ಸಮಾಜೋ-ಸಂಸ್ಕೃತಿಕ ಬರಹಗಳಾಗಿ ಕಾಲ ಕಾಲದಲ್ಲಿ ಬದುಕಿದ ಹೆಣ್ಣುಗಳು, ಅವರ ನಂಬಿಕೆ, ಬದಲಾವಣೆಯ ಹಾದಿಯಲ್ಲಿ ಅವರ ಆಕರ್ಷಣೆ-ವಿಕರ್ಷಣೆಯ ಮೇಲೆ ಬೆಳಕು ಚೆಲ್ಲುತ್ತಾ, ಆತ್ಮಗೌರವದಿಂದ ಬದುಕುವ ಹೊಸ ಹೆಣ್ಣೊಬ್ಬಳ ಬದಲಾವಣೆಯನ್ನು ದಾಖಲಿಸುತ್ತವೆ. ಅಡುಗೆ ಮನೆಯ ದೋಸೆ ರಾಜಕೀಯದಲ್ಲಿ ಜೀವನ ಸವೆಸಿದ ಹೆಣ್ಣು, ಇಂದು ಗಂಡಿಗೆ ಮಾತ್ರ ಸೀಮಿತವಾದ ಅನೇಕ ಕ್ಷೇತ್ರಗಳಲ್ಲಿ ಕಾಲಿಟ್ಟಿರುವ ನಡಿಗೆಯನ್ನು ದಾಖಲಿಸುವ ವಿಶಿಷ್ಟ ಬರಹಗಳಾಗಿವೆ. ಇಲ್ಲಿ ಹೆಣ್ಣಿನ ಶತೃ ಪುರುಷ ನಿರ್ಮಿತ ವ್ಯವಸ್ಥೆ ಹೊರತಾಗಿ ಗಂಡು ಎಂದಿಗೂ ಅಲ್ಲ ಎಂಬ ಅಂಶ ಮುಖ್ಯವಾಗಿದೆ. ಅವರ ಬರಹಗಳಲ್ಲಿ ಎಲ್ಲಿಯೂ ಗಂಡಿನ ಬಗ್ಗೆ ದ್ವೇಷವಿರದೇ ಮರುಕ, ಅನುಕಂಪ, ತಿರಸ್ಕಾರವಿರುವುದನ್ನು ಕಾಣಬಹುದು. ಹಾಗೆಯೇ ಹೆಣ್ಣು ಗುಣವಿರುವ ಗಂಡುಗಳನ್ನು ಪ್ರೀತಿಯಿಂದ, ಗೌರವದಿಂದ ಕಾಣುವುದನ್ನು ನೋಡಬಹುದು. [ಉದಾಃ ಕೋ.ಲ. ಕಾರಂತ]

ವಾಸ್ತವವಾಗಿ ಗಂಡು ಮತ್ತು ಹೆಣ್ಣು ಇಬ್ಬರೂ ಸೇರಿಯೇ ಈ ಜೀವನ ಅನ್ನುವುದು.ಆದರೆ ಅವರಿಬ್ಬರ ನಿಸರ್ಗ ನಿರ್ಮಿತ ದೈಹಿಕ ರಚನೆಗಳೇ ಅವರಿಬ್ಬರೂ ಬದುಕಿನಲ್ಲಿ ನಿರ್ವಹಿಸಬೇಕಾದ ವಿಭಿನ್ನವೂ ಮತ್ತು ಪೂರಕವೂ ಆದ ಕಾರ್ಯಗಳಿಗೆ ಅನುಗುಣವಾಗಿವೆ. ಅಷ್ಟೇ ಅಲ್ಲ, ಅವರಿಬ್ಬರ ಮನಸ್ಸಿನ ಮೂಲದ್ರವ್ಯದಲ್ಲೂ ಗಮನಾರ್ಹವಾದ ವ್ಯತ್ಯಾಸಗಳಿವೆ. ಈ ದೃಷ್ಟಿಯಿಂದ ನೋಡಿದರೆ, ಪುರುಷರಿಗಿಂತ ಭಿನ್ನವಾದ ಒಂದು ಮಾರ್ದವತೆ, ಕಷ್ಟ-ನೋವು-ಸಂಕಟಗಳನ್ನು ತಾಳಿಕೊಳ್ಳುವ ಅಸಾಧಾರಣ ಸಹನೆ, ಸಂತಾನ ಹಾಗೂ ಸಂಸ್ಕೃತಿ ಪರವಾದ ಗಾಢವಾದ ಕಾಳಜಿಗಳು, ಗಂಡಸಿನಷ್ಟು ರೂಕ್ಷವಾಗದ ವ್ಯಗ್ರವಾಗದ ಒಂದು ಮಾನಸಿಕ ಹದ ಇತ್ಯಾದಿಗಳು ಮಹಿಳೆಯ ಮನಸ್ಸಿನ ಲಕ್ಷಣಗಳಾಗಿವೆ

ಎಂದು ಹೇಳಬಹುದು. ಆದ್ದರಿಂದ ಸ್ತ್ರೀ ಸಂಸ್ಕೃತಿಯು ಕಾಲದ ಪರೀಕ್ಷೆಯಲ್ಲಿ ಗೆದ್ದು ಉಳಿದು ಬಂದಿದೆ. ಅದರ ಚಿತ್ರಣವನ್ನು ವೈದೇಹಿಯವರ ಪ್ರಬಂಧಗಳಲ್ಲಿ ಕಾಣಬಹುದು.

ಅಡಿಟಿಪ್ಪಣಿಗಳು

೧. ಸ್ತ್ರೀ ಮತವನುತ್ತರಿಸಲಾಗದೆ, ಎಂ.ಎಸ್.ಆಶಾದೇವಿ, ಪು-೬೦.
೨. ಮಲ್ಲಿನಾಥನ ಧ್ಯಾನ, ವೈದೇಹಿ, ಪು-೨೦೬.
೩. ಅದೇ ಪು-೮೯
೪. ಅದೇ ಪು-೮೮
೫. ಮೇಜು ಮತ್ತು ಬಡಗಿ, ವೈದೇಹಿ, ಪು-೦೧
೬. ಅದೇ ಪು-೩೬
೭. ಅದೇ ಪು-೯೦
೮. ಅದೇ ಪು-೯೪
೯. ಸ್ತ್ರೀಮತವನುತ್ತರಿಸಲಾಗದೆ, ಎಂ.ಎಸ್. ಆಶಾದೇವಿ, ಪು-೭೪
೧೦. ಮಲ್ಲಿನಾಥನ ಧ್ಯಾನ, ವೈದೇಹಿ, ಪು-೭೭
೧೧. ಅದೇ ಪು-೨೯
೧೨. ಅದೇ ಪು-೫೭
೧೩. ಅದೇ ಪು-೫೬
೧೪. ಅದೇ ಪು-೫೯
೧೫. ಸ್ತ್ರೀಮತವನುತ್ತರಿಸಲಾಗದೆ, ಎಂ.ಎಸ್. ಆಶಾದೇವಿ, ಪು-೭೩
೧೬. ಮಲ್ಲಿನಾಥನ ಧ್ಯಾನ, ವೈದೇಹಿ, ಪು-೧೭೯.
೧೭. ಅದೇ ಪು-೨೪೭
೧೮. ಜಾತ್ರೆ, ವೈದೇಹಿ ಪು-೨೧
೧೯. ಮೇಜು ಮತ್ತು ಬಡಗಿ, ವೈದೇಹಿ. ಪು-೦೩

೭. ಸಮಾರೋಪ

ಪಿತೃಪ್ರಧಾನ ವ್ಯವಸ್ಥೆಯಲ್ಲಿ ಅಧೀನ ಸ್ಥಿತಿಯಲ್ಲಿಯೇ ಬಾಳಬೇಕಾದ ಹೆಣ್ಣು, ತನ್ನ ಜೀವಂತಿಕೆಯನ್ನು, ಸ್ತ್ರೀತನದ ರಾಗಮಲಿಕೆಯನ್ನು ಉಳಿಸಿಕೊಂಡು ಬದುಕನ್ನು ನಿರ್ವಹಿಸಿದ್ದಾರೆ. ಸ್ತ್ರೀವಾದ ಹುಟ್ಟುವ ಮೊದಲೇ ಎಷ್ಟೋ ಹೆಣ್ಣುಗಳು ಬದುಕು ಸವೆಸಿದ್ದರೂ, ಗಟ್ಟಿಯಾದ, ಅನನ್ಯವಾದ, ಗಂಡಿಗೆ ಪ್ರವೇಶವಿಲ್ಲದ ಒಂದು ಸಂಸ್ಕೃತಿಯನ್ನು ಕಟ್ಟಿ, ಪೀಳಿಗೆಯೊಂದಿಗೆ ಪ್ರವಾಹಿಸಿಕೊಂಡು ಬಂದಿದ್ದಾರೆ. ಇಂತಹ ಹೆಣ್ಣುಗಳ ಕತೆ ವೈದೇಹಿಯವರ ಸಾಹಿತ್ಯದಲ್ಲಿ ತೆರೆದುಕೊಳ್ಳುವ ಮೂಲಕ ಹೆಸರಿಲ್ಲದೆ ಬದುಕು ಸಾಗಿಸುತ್ತಿದ್ದವರ ಬದುಕಿನ ಸತ್ವವನ್ನು ಲೋಕಕ್ಕೆ ಪರಿಚಯಿಸುತ್ತವೆ. ಪುರುಷ ವಿರೋಧಿಯ ಧ್ವನಿಗಿಂತ ಪುರುಷ ಪ್ರಧಾನ ವ್ಯವಸ್ಥೆಯ ವಿರೋಧಿಯ ಧ್ವನಿಯಲ್ಲಿ ಮಾತನಾಡುವ ವೈದೇಹಿಯವರು ತಾವು ಕಂಡ ಹೆಣ್ಣುಗಳ ಜೀವನದ ಚಿತ್ರಣದ ಜೊತೆಗೆ ಸ್ತ್ರೀ ಸಂಸ್ಕೃತಿಯ ವಿಶಿಷ್ಟತೆಗಳನ್ನು ತಮ್ಮ ಸಾಹಿತ್ಯದಲ್ಲಿ ನೇಯ್ಗೆ ಮಾಡಿದ್ದಾರೆ.

ಜೀವನದ ದೈನಂದಿನ ಸಂಗತಿಗಳಲ್ಲಿ ಹೆಣ್ಣು ತೋರುವ ಆಸ್ಥೆಯೇ ಅವಳ ಸಂಸ್ಕೃತಿಯ ಪ್ರಧಾನ ಅಂಶವು ಆಗಿರುತ್ತದೆ. ಈ ಕ್ಷುದ್ರ ಎನಿಸುವ ಸಂಗತಿಗಳೇ ಅವಳ ಬದುಕಿನ ಬಹುಭಾಗದಲ್ಲಿ ಮುಖ್ಯವಾಗುತ್ತವೆ. ಅವುಗಳಲ್ಲಿಯೇ ಅವಳ ಬದುಕು ಅರಳುತ್ತದೆ. ಅಲ್ಲದೆ ಅವಳ ಬದುಕಿನ ಸತ್ಯಗಳೇನಿದ್ದರು ಇಲ್ಲೇ ಸಿಗಬೇಕು.

ಅವರು ಬದುಕನ್ನು ನಿರ್ವಹಿಸಿದ ಬಗೆ ಇಂದಿಗೂ ಬದಲಾಗುತ್ತಿರುವ ಕಾಲದಲ್ಲಿ ಪ್ರಸ್ತುತವಾಗಿದೆ. ಅಲ್ಲಿ ನರಳಿದ ಹೆಣ್ಣುಗಳು ಬದಲಾಗಬೇಕಾದ ಸ್ಥಿತಿಯನ್ನು ತೋರಿದರೆ. ದಿಟ್ಟತನದಿ ಎದುರಿಸುವ ಹೆಣ್ಣುಗಳು ಬಿಡುಗಡೆಯ ದಾರಿಗಳನ್ನು ತೋರುತ್ತಾ ಬದುಕನ್ನು ಸಹ್ಯ ಮಾಡಿಕೊಡುವುದರತ್ತ ತಮ್ಮ ಕೊಡುಗೆ ನೀಡಿದ್ದಾರೆ.

ಬದುಕಿನ ಶ್ರದ್ಧೆ, ಜೀವನಪ್ರೀತಿ, ಉತ್ಸಾಹ, ಸಹನೆ, ತಾಳ್ಮೆ, ತ್ಯಾಗ, ಸ್ವ-ಎಚ್ಚರ, ಕಷ್ಟ ಸಹಿಷ್ಣುತೆ, ದೊಡ್ಡ ದೊಡ್ಡ ಕೊರಗುಗಳ ನಡುವೆಯು ಸಣ್ಣ ಸಣ್ಣ ವಿಷಯಗಳಲ್ಲಿ ಸಂಭ್ರಮಿಸುವುದು, ಇವೆಲ್ಲವೂ ಸ್ತ್ರೀ ಸಂಸ್ಕೃತಿಯ ಭಾಗಗಳೇ ಆಗಿವೆ. ಇಲ್ಲಿನ ಕೆಲವು ಗುಣಗಳನ್ನು ಪುರುಷಪ್ರಧಾನ ವ್ಯವಸ್ಥೆಯು ಹಾಡಿ ಹೊಗಳುತ್ತದೆ. ಅದು ಹಾಗೆ ಹೊಗಳುವುದು ಹೆಣ್ಣನ್ನು ತನ್ನ ಅಧೀನಗೊಳಿಸಲು. ಅದರೆ ಹೆಣ್ಣು ಈ ಯಾವ ಹೊಗಳಿಕೆಗಾಗಿ ಈ ಗುಣಗಳನ್ನು ಧರಿಸಿಲ್ಲ. ಇವು ಅವಳ ಸಹಜ ಗುಣಗಳಾಗಿವೆ. ಸದಾ ಮೃದುತ್ವ, ಮಾರ್ದವತೆಯನ್ನು ಮೈಗೂಡಿಸಿಕೊಂಡಿರುವ ಹೆಣ್ಣು ಭಾವನಜೀವಿ. ಭೌತಿಕವಾದ ಆಸ್ತಿ, ಅಧಿಕಾರಕ್ಕಿಂತ ಸಂಬಂಧಗಳು ಅವಳಿಗೆ ಮುಖ್ಯವೆನಿಸುತ್ತದೆ. ಭಾವನಾಜೀವಿಯಾದ ಹೆಣ್ಣು ತನ್ನ ಬಳಿ ಯಾವಾಗಲೂ

ಸೂಜಿ–ದಾರವನ್ನು ಇಟ್ಟು ಕೊಂಡಿರುತ್ತಾಳೆ. ಸಂಬಂಧದಲ್ಲಿ ಒಂದು ಚೂರು ಬಿರುಕು ಕಂಡರು ಅದನ್ನು ಸರಿಪಡಿಸದೆ ಬಿಡುವುದಿಲ್ಲ ಅವಳು.

ಅವಳ ಭಾವನೆಗಳು, ಅವಳು ಬದುಕುತ್ತಿರುವ ಪರಿಸರಕ್ಕೆ ಎಂದಿಗೂ ಅರ್ಥವಾಗುವುದಿಲ್ಲ. ಹಾಗಾಗಿಯೇ ಅವಳು ತನ್ನ ಭಾವನೆಗಳನ್ನು ರೂಪಕಾತ್ಮಕವಾಗಿ ಅಭಿವ್ಯಕ್ತಿಸಿಕೊಂಡು ಬದುಕುತ್ತಾಳೆ. ಗಂಡಿನ ಅಹಂನ ಎದುರು ಹೆಣ್ಣು ಸ್ಪರ್ಧಿಸುವುದಕ್ಕಿಂತ, ಮೌನ ತಿರಸ್ಕಾರದ ಪ್ರಬಲ ಮನೋಅಸ್ತ್ರವನ್ನು ಅವಳು ತನಗಾಗಿ ರೂಢಿಸಿಕೊಂಡಿದ್ದಾಳೆ. ಆದುದರಿಂದಲೇ ಅವಳು ಕುಟುಂಬದ ಕೇಂದ್ರವಾಗಿ, ರಕ್ಷಕಿಯಾಗಿ, ಪೋಷಕಿಯಾಗಿ ಕಾಣುತ್ತಾಳೆ. ಕುಟುಂಬಗಳನ್ನು ಉಳಿಸಿಡುತ್ತಾ ಬಂದಿರುವ ಶಕ್ತಿ ಹೆಣ್ಣೇ ಆಗಿದ್ದಾಳೆ. ಅದರ ಗರ್ವ ಕಿಂಚಿತ್ತು ಇಲ್ಲದ ಹೆಣ್ಣು ಗಂಡಿಗೆ ಮಾದರಿಯು ಆಗುತ್ತಾಳೆ.

ಹೆಣ್ಣಾಗಿ ಹುಟ್ಟಿಯು ಸ್ತ್ರೀಸೂಕ್ಷ್ಮಗಳಿಲ್ಲದ, ದರ್ಪಕ್ಕೆ ಮನಸೋತ ಹೆಣ್ಣುಗಳನ್ನು ಸ್ತ್ರೀಸಂಸ್ಕೃತಿ ವಿಷಾಧದಿಂದ ನೋಡುತ್ತದೆ. ಗಂಡಾದ ಕಾರಣದಿಂದಲೇ ಬದುಕಿನಲ್ಲಿ ಅನೇಕ ಅನುಭವಗಳನ್ನು ಕಳೆದುಕೊಂಡು, ಆತಂಕಿತನಾಗಿ ದರ್ಪಕ್ಕೆ ತೆರೆದುಕೊಳ್ಳುವ ಗಂಡಿನ ಬಗ್ಗೆ ಸ್ತ್ರೀ ಸಂಸ್ಕೃತಿ ಅನುಕಂಪವನ್ನು ತೋರಿಸುತ್ತದೆ. ಗಿರಗಿಟೆ ಹಿಡಿಯುವ ಹುಡುಗನಿಗೆ ಅದರ ಬಣ್ಣದ ಸೊಗಸು ಹೇಗೆ ಕಾಣುವುದಿಲ್ಲವೋ ಹಾಗೆ ಬದುಕನ್ನು ಅಧಿಕಾರದ ದರ್ಪದಲ್ಲಿ ಹಿಡಿದವನಿಗೆ ಅದರ ನಿಜಸತ್ವ ಸಿಗುವುದಿಲ್ಲ.

ದೂರದಲ್ಲಿ ನಿಂತು ನೋಡುವ ಹೆಣ್ಣಿಗೆ ಬದುಕಿನ ಪ್ರತಿಯೊಂದು ಬಣ್ಣದ ಅನುಭವ, ಸತ್ವ ಕಾಣುತ್ತದೆ. ಆದ್ದರಿಂದ ಅವಳ ಬಾಳು ಪ್ರತಿ ನಿಮಿಷಕ್ಕೂ ಹೊಸ ಹೊಸ ಅನುಭವಗಳಿಗೆ ತೆರೆದು ಕೊಂಡು, ಗಂಡಿನ ಬದುಕಿಗಿಂತ ವಿಶಿಷ್ಟವಾಗುತ್ತಾ, ಅನನ್ಯವಾಗುತ್ತಾ ಸಾಗುತ್ತದೆ. ಗಂಡಿನ ಅಧಿಕಾರ, ದರ್ಪದ ನೀರಸ, ಏಕತಾನತೆಯ ಬದುಕಿಗಿಂತ ಅವಳ ವೈವಿಧ್ಯಮಯ ಬದುಕು ಶ್ರೇಷ್ಠವೆನಿಸುತ್ತದೆ. ಎಷ್ಟು ಜನ್ಮಗಳಿದ್ದರೂ ಹೆಣ್ಣಾಗಿಯೇ ಹುಟ್ಟಬೇಕೆನಿಸುತ್ತದೆ. ಹೆಣ್ಣಿನ ಜನ್ಮ ಲಭಿಸಿರುವಾಗ, ಹೆಣ್ತನದ ಯಾವ ಅನುಭವದಿಂದಲೂ (ಮಾನಸಿಕ ಹಾಗು ಜೈವಿಕವಾದ) ವಂಚಿತಳಾಗಲು ಬಯಸುವುದಿಲ್ಲ. ಹಾಗೇಯೇ ತನ್ನ ಸಹಜ ಅನುಭವಗಳನ್ನು ನಿರಾಕರಿಸುವ ಹೆಣ್ಣನ್ನು ಸ್ತ್ರೀಸಂಸ್ಕೃತಿ ಸಂದೇಹದಿಂದ ನೋಡುತ್ತದೆ.

ಹೆಣ್ಣು ಸತ್ವ ಯಾವತ್ತೂ ವಿಶಿಷ್ಟವೆ. ಅದರ ಚೈತನ್ಯಶೀಲತೆ, ಅಂತಃಶಕ್ತಿ, ಧಾರಣಾಗುಣ ಗಂಡು ಸತ್ವಕ್ಕೆ ಜನ್ಮಜನ್ಮಾಂತರಕ್ಕೂ ಬಾರದು. ಬ್ರಹ್ಮಾಂಡದೊಳಗಿನ 'ಲಲಿತಾಶಕ್ತಿ" ಅದು. ಎನ್ನುವ ವೈದೇಹಿಯವರ ಸ್ತ್ರೀ ಸಂಸ್ಕೃತಿ ಚಿಂತನೆಯು ಸಮಾನತೆಗಿಂತ, ಭಿನ್ನತೆಗೆ ಹೆಚ್ಚಿನ ಮಹತ್ವ ನೀಡುತ್ತದೆ. ಏಕೆಂದರೆ ಗಂಡು ಎಂದಿಗೂ ಹೆಣ್ಣಿಗೆ ಸಮನಲ್ಲ. ಹೆಣ್ಣು ಅನನ್ಯವಾಗುವುದೇ ಅವಳ ಭಿನ್ನತೆಯಲ್ಲಿ. ಹೆಣ್ಣಿನ ವಿಶಿಷ್ಟ ಅನುಭವಗಳಿಗೆ ಜೈವಿಕ ಲಿಂಗ (ಸೆಕ್ಸ್) ಹಾಗೂ ಪುರುಷ ಪ್ರಧಾನ ವ್ಯವಸ್ಥೆ ಆರೋಪಿಸುವ ಸಾಮಾಜಿಕ ಲಿಂಗ (ಜೆಂಡರ್) ಎರಡೂ ಕಾರಣವಾಗಿವೆ. ಇವುಗಳಲ್ಲಿ ಯಾವುದು ಇಲ್ಲವಾದರು ಸ್ತ್ರೀಸಂಸ್ಕೃತಿ

ಅಪೂರ್ಣವಾಗುತ್ತದೆ. ಹೆಣ್ಣನ್ನು ಶೋಷಿಸಲೆಂದೇ, ಅವಳ ಮೇಲೆ ಹೇರಿದ ಅನೇಕ ಕ್ರೂರ ಆಚರಣೆಗಳು ಕಾಲದ ಪ್ರವಾಹದಲ್ಲಿ ಇಲ್ಲವಾಗುತ್ತಾ ಬಂದಿವೆ. ಈ ಕಾಲದ ಪ್ರವಾಹದಲ್ಲಿ ಅಳಿಯದೆ, ಇಂದಿಗೂ ಉಳಿದು ಬಂದಿರುವ ಹೆಣ್ಣಿನ ಬದುಕಿನ ವಿಶಿಷ್ಟ ಗುಣಗಳು ಮತ್ತು ಅನುಭವಗಳು, ಎಂದಿಗೂ ಸ್ತ್ರೀ ಸಂಸ್ಕೃತಿಯ ಭಾಗವಾಗಿರುತ್ತವೆ. ಎಂಬುದನ್ನು ಈ ಪ್ರಬಂದವೂ ಚರ್ಚಿಸಿದೆ.

ಹೆಣ್ಣು-ಗಂಡಿನ ಧೃವೀಕರಣದ ಸ್ತ್ರೀವಾದಿ ಚಿಂತನೆಗಿಂತ ಭಿನ್ನವಾದ ಚಿಂತನೆ ಇರುವ ವೈದೇಹಿಯವರು, ಲಿಂಗ ಭೇದವನ್ನು ಮೀರುವ ಕಾರ್ಯದಲ್ಲಿ ಇಬ್ಬರು ಪ್ರಬುದ್ಧರಾಗಬೇಕು ಎನ್ನುತ್ತಾರೆ.

ಪರಾಮರ್ಶನ ಗ್ರಂಥಸೂಚಿ

೧. ವೈದೇಹಿವಾಚಿಕೆ, ಟಿ.ಪಿ. ಅಶೋಕ, ನುಡಿಪುಸ್ತಕ ಪ್ರಕಾಶನ, ೨೦೦೯.

೨. ಸ್ತ್ರೀವಾದ, ಡಾ॥ ಹೆಚ್.ಎಸ್. ಶ್ರೀಮತಿ, ಪ್ರಸಾರಾಂಗ, ಕ.ವಿ.ವಿ, ೨೦೦೪.

೩. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಡಾ॥ ಎಚ್. ಎಸ್. ಶ್ರೀಮತಿ, ಪ್ರಸಾರಾಂಗ, ಕ.ವಿ.ವಿ ೨೦೦೬.

೪. ಪಶ್ಚಿಮದ ಸ್ತ್ರೀವಾದಿ ವಿಮರ್ಶಾ ಪಂಥಗಳು, ಡಾ॥ ಬಿ.ಎನ್. ಸುಮಿತ್ರಾಬಾಯಿ, ಪ್ರಸಾರಾಂಗ, ಕ.ವಿ.ವಿ. ೨೦೦೦.

೫. ಅಲೆಗಳಲ್ಲಿ ಅಂತರಂಗ, ವೈದೇಹಿ ಕತೆಗಳ ಸಮಗ್ರ ಸಂಪುಟ, ಅಕ್ಷರ ಪ್ರಕಾಶನ ಹೆಗ್ಗೋಡು(ಸಾಗರ), ೨೦೦೬

೬. ಸ್ತ್ರೀವಾದ, ಬಿ.ಎನ್. ಸುಮಿತ್ರಾಬಾಯಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೯.

೭. ನಾರಿ: ದಾರಿ–ದಿಗಂತ, ವಿಜಯದಬ್ಬೆ, ರಚನಾ ಪ್ರಕಾಶನ, ೧೯೯೭.

೮. ಆಧುನಿಕ ಕನ್ನಡ ಕಥನ ಸಾಹಿತ್ಯದಲ್ಲಿ ವಾಸ್ತವದ ಪ್ರತಿನಿಧೀಕರಣ ಒಂದು ಸ್ತ್ರೀವಾದಿ ಅಧ್ಯಯನ, ಡಾ॥ ಎಲ್.ಜಿ.ಮೀರಾ, ಪಿ.ಎಚ್.ಡಿ. ಪ್ರಬಂಧ, ಬೆಂ.ವಿ.ವಿ, ೨೦೦೦.

೯. ಭಾರತೀಯ ಸ್ತ್ರೀವಾದ, (ಸಂ), ಎನ್. ಮನುಚಕ್ರವರ್ತಿ, ಅಕ್ಷರ ಪ್ರಕಾಶನ, ೧೯೯೩.

೧೦. "ಸ್ತ್ರೀವಾದಕ್ಕೆ ಮುಜುಗರ ತರಬಲ್ಲ ಐದು ಸವಾಲುಗಳು" ಎಂಬ ಲೇಖನ, ಡಾ॥ ಎಲ್.ಜಿ. ಮೀರಾ, ಮಹಿಳಾ ಅಧ್ಯಯನ–ಸಂಪುಟ ೮, ಸಂಚಿಕೆ–೧, ಜನವರಿ–ಜೂನ್–೨೦೦೬.

೧೧. ಸ್ತ್ರೀಮತವನುತ್ತಿರಸಲಾಗದೆ, ಎಂ.ಎಸ್. ಆಶಾದೇವಿ, ಅಕ್ಷರ ಪ್ರಕಾಶನ, ೨೦೦೬.

೧೨. ವಿಭಾವ, ಎಲ್.ಸಿ.ಸುಮಿತ್ರಾ, ಅಕ್ಷರ ಪ್ರಕಾಶನ, ೧೯೯೭.

೧೩. ವೈದೇಹಿ ಅವರ ಆಯ್ದ ಕವಿತೆಗಳು, ವೈದೇಹಿ, ಅಕ್ಷರ ಪ್ರಕಾಶನ, ೨೦೦೭.

೧೪. ಅವಳ ಕತೆಗಳು, ಜಿ.ಎನ್. ಅಮೂರ, ಪ್ರಿಸಂ ಬುಕ್ಸ್ ಪ್ರೈ.ಲಿ, ೧೯೯೯.

೧೫. ಮೇಜು ಮತ್ತು ಬಡಗಿ, ವೈದೀಹಿ, ಕನ್ನಡ ವಿ.ವಿ, ಹಂಪಿ, ೨೦೦೭.

೧೬. ಮಲ್ಲಿನಾಥನ ಧ್ಯಾನ, ವೈದೇಹಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು–೧೯೯೬.

೧೭. ಜಾತ್ರೆ, ವೈದೇಹಿ, ಕನ್ನಡ ಪ್ರಪಂಚ ಪ್ರಕಾಶನ, ಮತ್ತೂರು, ದಕ್ಷಿಣ ಕನ್ನಡ, ೧೯೯೮.

೧೮. ಅಸ್ಪೃಶ್ಯರು, ವೈದೇಹಿ, ಅಕ್ಷರ ಪ್ರಕಾಶನ, ೨೦೧೧.